ಭಾನುವಾರ, ಜುಲೈ 18, 2021 | ₹ 6.00

www.prajavani.net

/prajavani.net @prajavani / prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಕುರಿ ವ್ಯಾಪಾರ**
ಬಕ್ರೀದ್ ಅಂಗವಾಗಿ
ಕುರಿ ವ್ಯಾಪಾರ
ಗರಿಗೆದರಿದ್ದು, ಮೈಸೂರಿನ
ಬನ್ನಿಮಂಟಪದ ಬಳಿ
ಶನಿವಾರ ಮಾರಾಟಕ್ಕೆ
ತಂದಿದ್ದ ಕುರಿ



ಕರ್ನಾಟಕ ಸರ್ಕಾರದ ವಸತಿ ಸಚಿವರು
ಹಾಗೂ ಗೋವಿಂದರಾಜನಗರ
ವಿಧಾನಸಭಾ ಕ್ಷೇತ್ರದ
ಜನಪ್ರಿಯ ಶಾಸಕರಾದ
**ಶ್ರೀ ವಿ. ಸೋಮಣ್ಣನವರಿಗೆ**
ಮತ್ತು
ಯುವ ನಾಯಕರಾದ
**ಡಾ|| ಅರುಣ್ ಸೋಮಣ್ಣನವರಿಗೆ**

ಹೃದಯವಿಶ್ವದ
ಶುಭಾಶಯಗಳು

ಶುಭಕೋರುವವರು

**ಹೆಚ್.ಎಸ್.ಪದ್ಮರಾಜ್**
ಮಾಜಿ ಸದಸ್ಯರು, ಬಿಬಿಎಂಪಿ,
ವಾರ್ಡ್ ನಂ. 100, ಬಸವೇಶ್ವರನಗರ ಹಾಗೂ
ಸ್ಥಾಪಕರು:
ನೇತಾಜಿ ಸುಭಾಷ್‌ಚಂದ್ರಬೋಸ್ ಆಟದ ಮೈದಾನ
ಮತ್ತು ಕಿರು ಅರಣ್ಯ.

ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯ ಕೋವಿಡ್ ಪುನರ್ವಸತಿ ಕೇಂದ್ರದಲ್ಲಿ ಪ್ರಕರಣಗಳು ಪತ್ತೆ

# ಅವಧಿಗೆ ಮುನ್ನವೇ ಮನೆಗೆ: ಸೋಂಕು ಉಲ್ಬಣ

• ವರುಣ್ ಹೆಗಡೆ

**ಬೆಂಗಳೂರು:** ಕೋವಿಡ್ ಪೀಡಿತರು ಚಿಕಿತ್ಸೆ ಅವಧಿ ಮುಗಿಯುವ ಮುನ್ನವೇ ಆಸ್ಪತ್ರೆಯಿಂದ ಮನೆಗೆ ತೆರಳುತ್ತಿರುವ ಪರಿಣಾಮ ಕೆಲವರ ದೇಹದಲ್ಲಿ ಸೋಂಕು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, ವಾರದ ಬಳಿಕ ಅದು ಉಲ್ಬಣಿಸುತ್ತಿದೆ ಎನ್ನುವುದು ದೃಢಪಟ್ಟಿದೆ.

ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯ ವೈದ್ಯರು ಈ ರೀತಿಯ ಪ್ರಕರಣಗಳನ್ನು ಗುರುತಿಸಿ, ವಿಶ್ಲೇಷಿಸಿದ್ದಾರೆ. ಅಲ್ಲಿನ ಕೋವಿಡ್ ಪುನರ್ವಸತಿ ಕೇಂದ್ರದಲ್ಲಿ ಕೋವಿಡ್‌ನಿಂದ ಚೇತರಿಸಿಕೊಂಡವರಿಗೆ ಕಾಣಿಸಿಕೊಳ್ಳುತ್ತಿರುವ ಸಮಸ್ಯೆಗೆ ಚಿಕಿತ್ಸೆ ಒದಗಿಸಲಾಗುತ್ತಿದೆ. ರಾಜ್ಯದಲ್ಲಿ ಸದ್ಯ ಕಾರ್ಯನಿರ್ವಹಿಸುತ್ತಿರುವ ಏಕೈಕ ಸರ್ಕಾರಿ ಪುನರ್ವಸತಿ ಕೇಂದ್ರ ಇದಾಗಿದೆ. ಕೋವಿಡ್ ಎರಡನೇ ಅಲೆಯ ಬಳಿಕ ಈ ಕೇಂದ್ರಕ್ಕೆ ಬರುವವರ ಸಂಖ್ಯೆ ಹೆಚ್ಚಾಗಿದ್ದು, ಕಳೆದ ಒಂದೂವರೆ ತಿಂಗಳಿಂದ ಪ್ರತಿನಿತ್ಯ ಸರಾಸರಿ 4 ಮಂದಿ

**2ನೇ ಅಲೆಯಲ್ಲಿ ಚೇತರಿಸಿಕೊಂಡ ಹೆಚ್ಚಿನವರಿಗೆ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಅನಿಯಂತ್ರಿತ ಸ್ಟೀರಾಯ್ಡ್ ಬಳಕೆ ಹಾಗೂ ಅವಧಿ ಪೂರ್ವ ಆಸ್ಪತ್ರೆಯಿಂದ ಮನೆಗೆ ತೆರಳಿರುವುದು ಪ್ರಮುಖ ಕಾರಣ**

**ಡಾ.ಸಿ. ನಾಗರಾಜ್,** ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ ನಿರ್ದೇಶಕ

ಚಿಕಿತ್ಸೆಗೆ ಕೇಂದ್ರವನ್ನು ಸಂಪರ್ಕಿಸಿದ್ದಾರೆ.

ಕಳೆದ ವರ್ಷ ಪ್ರಾರಂಭವಾದ ಈ ಕೇಂದ್ರದಲ್ಲಿ ಈ ವರ್ಷ ಮೇ ಅಂತ್ಯಕ್ಕೆ 200 ಮಂದಿ ಚಿಕಿತ್ಸೆ ಪಡೆದುಕೊಂಡಿದ್ದರು. ಕೋವಿಡ್ ವಾಸಿಯಾದ ಕೆಲ ದಿನಗಳ ಬಳಿಕ ಉಸಿರಾಟದ ಸಮಸ್ಯೆ, ಮೈ-ಕೈ ನೋವು, ಕೆಮ್ಮು ಸೇರಿದಂತೆ ವಿವಿಧ ಸಮಸ್ಯೆಗಳು ಅವರಲ್ಲಿ ಕಾಣಿಸಿಕೊಂಡಿದ್ದವು.

ಪ್ರಜಾವಾಣಿ ವಿಶೇಷ

ಒಂದೂವರೆ ತಿಂಗಳಲ್ಲಿ 250 ಮಂದಿ ಕೇಂದ್ರವನ್ನು ಸಂಪರ್ಕಿಸಿ, ತಪಾಸಣೆಗೆ ಒಳಪಟ್ಟಿದ್ದಾರೆ. ಇವರಲ್ಲಿ ಬಹುತೇಕರು ಸಂಕೀರ್ಣ ಸಮಸ್ಯೆ ಎದುರಿಸಿದ್ದಾರೆ. ಈ ರೀತಿ ಕೇಂದ್ರಕ್ಕೆ ಬರುವವರಿಗೆ ಕೋವಿಡ್ ಪರೀಕ್ಷೆಗಳನ್ನೂ ನಡೆಸಲಾಗುತ್ತಿದ್ದು, 11 ಮಂದಿಯಲ್ಲಿ ಕೊರೊನಾ ಸೋಂಕು ಸಕ್ರಿಯವಾಗಿರುವುದು ಖಚಿತಪಟ್ಟಿದೆ. ಕೋವಿಡ್ ಚಿಕಿತ್ಸೆ ಪಡೆದು, ಆಸ್ಪತ್ರೆಯಿಂದ ಮನೆಗೆ ತೆರಳಿದ ಹತ್ತು ದಿನಗಳೊಳಗೆ ಇವರಿಗೆ ಸಮಸ್ಯೆಗಳು ಕಾಣಿಸಿಕೊಂಡಿದ್ದವು.

**2ನೇ ಅಲೆ ಬಳಿಕ ಅಧಿಕ:** 'ಕೋವಿಡ್ ಎರಡನೇ ಅಲೆಯು ಈಗ ನಿಯಂತ್ರಣಕ್ಕೆ ಬಂದಿದೆ. ಗುಣಮುಖರಾಗಿ ಮನೆಗೆ ತೆರಳಿದವರಿಗೆ ಆಯಾಸ ಸೇರಿದಂತೆ ಕೆಲವೊಂದು ಸಮಸ್ಯೆಗಳು ಕಾಡಲಾರಂಭಿಸಿವೆ. ಕೋವಿಡ್ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗೆ ದಾಖಲಾದವರಲ್ಲಿ ಕೆಲವರು ಚಿಕಿತ್ಸೆಯ ಅವಧಿ ಪೂರ್ಣಗೊಳ್ಳುವುದಕ್ಕೆ ಮುನ್ನವೇ ಮನೆಗೆ ತೆರಳುತ್ತಿರುವುದು ಸಮಸ್ಯೆಗೆ ಕಾರಣವಾಗಿದೆ. ಅಂದರೆ, ಕೆಲವರು ಕನಿಷ್ಠ 7 ದಿನಗಳೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿಲ್ಲ. ಆಸ್ಪತ್ರೆಯಿಂದ ಕಳುಹಿಸುವಾಗ ಕೆಲವೆಡೆ ಕೋವಿಡ್ ಪರೀಕ್ಷೆಯನ್ನೂ ನಡೆಸುತ್ತಿಲ್ಲ. ಪೂರ್ಣ ಪ್ರಮಾಣದಲ್ಲಿ ಸೋಂಕು ವಾಸಿಯಾಗದ ಕಾರಣ ವಾರದಲ್ಲಿ ಸಮಸ್ಯೆಗಳು ಉಲ್ಬಣಿಸುತ್ತಿದೆ. ಪರೀಕ್ಷಿಸಿದಾಗ ಅವರಲ್ಲಿ ಸೋಂಕು ಇರುವುದು ದೃಢಪಡುತ್ತಿದೆ. ಕೆಲವರಿಗೆ ಎರಡು ತಿಂಗಳ ಬಳಿಕ ಕೋವಿಡೋತ್ತರ ಸಮಸ್ಯೆಗಳು ಗೋಚರಿಸುತ್ತಿವೆ' ಎಂದು ಆಸ್ಪತ್ರೆಯ ವೈದ್ಯರು ವಿಶ್ಲೇಷಿಸಿದ್ದಾರೆ.

'ಶ್ವಾಸಕೋಶ ತಜ್ಞರ ಕೊರತೆ ಸೇರಿದಂತೆ ವಿವಿಧ ಕಾರಣಗಳಿಂದ ಕೆಲ ಖಾಸಗಿ ಆಸ್ಪತ್ರೆಗಳು ಸೋಂಕಿತರನ್ನು ಬೇಗ ಮನೆಗೆ ಕಳುಹಿಸಿವೆ. ಇದರಿಂದ ಕೆಲವರಲ್ಲಿ ಕಾಯಿಲೆ ಪೂರ್ಣ ಪ್ರಮಾಣದಲ್ಲಿ ವಾಸಿಯಾಗದೆಯೇ ಸಮಸ್ಯೆ ಮತ್ತೆ ಗೋಚರಿಸುತ್ತಿದೆ. ಗುಣಮುಖರಲ್ಲಿ ಪ್ರಮುಖವಾಗಿ ಸೆಪ್ಸಿಸ್ ಸಮಸ್ಯೆ (ತೀವ್ರವಾದ ನಂಜು) ಕಾಣಿಸಿಕೊಳ್ಳುತ್ತಿದೆ. ಇದು ಅಂಗಾಂಗಗಳ ವೈಫಲ್ಯ ಹಾಗೂ ಮರಣಕ್ಕೂ ಕಾರಣವಾಗಬಹುದು' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ನಾಗರಾಜ್ ತಿಳಿಸಿದರು.

### ಶೇ 2ರಷ್ಟು ಮಂದಿ ಗಂಭೀರ ಅಸ್ವಸ್ಥ

ಕೋವಿಡ್‌ನಿಂದ ಚೇತರಿಸಿಕೊಂಡ ಬಳಿಕ ಸಮಸ್ಯೆ ಕಾಣಿಸಿಕೊಂಡು, ಪುನರ್ವಸತಿ ಕೇಂದ್ರಕ್ಕೆ ಭೇಟಿ ನೀಡುತ್ತಿರುವವರಲ್ಲಿ ಶೇ 2ರಷ್ಟು ಮಂದಿ ಗಂಭೀರವಾಗಿ ಅಸ್ವಸ್ಥಗೊಂಡವರಾಗಿದ್ದಾರೆ. 73 ಮಂದಿಯನ್ನು ಒಳರೋಗಿಗಳಾಗಿ ದಾಖಲಿಸಿಕೊಂಡು, ಚಿಕಿತ್ಸೆ ಒದಗಿಸಲಾಗಿದೆ. ಇವರಲ್ಲಿ ಕೆಲವರು ಮನೆ ಆರೈಕೆಗೆ ಒಳಗಾದವರಾಗಿದ್ದಾರೆ. ಕೇಂದ್ರದಲ್ಲಿ ದಾಖಲಾದವರಲ್ಲಿ 15 ಮಂದಿ ಚಿಕಿತ್ಸೆಗೆ ಸ್ಪಂದಿಸದೆ ಸಾವಿಗೀಡಾಗಿದ್ದಾರೆ ಎಂದು ಆಸ್ಪತ್ರೆಯ ಮೂಲಗಳಿಂದ ತಿಳಿದುಬಂದಿದೆ.

'ಕೋವಿಡ್ ಮೊದಲ ಅಲೆಯಲ್ಲಿ ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಸಮಸ್ಯೆ ಎದುರಿಸಿದ್ದರು. ಎರಡನೇ ಅಲೆಯಲ್ಲಿ ಸೋಂಕಿನ ತೀವ್ರತೆಗೆ ಮಧ್ಯಮ ವಯಸ್ಕರು ಹೆಚ್ಚಾಗಿ ಅಸ್ವಸ್ಥರಾಗಿದ್ದಾರೆ. ಚೇತರಿಸಿಕೊಂಡ ಕೆಲ ದಿನಗಳ ಬಳಿಕ ಉಸಿರಾಟದ ಸಮಸ್ಯೆ, ಶ್ವಾಸಕೋಶದ ಸಮಸ್ಯೆ ಸೇರಿದಂತೆ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಮನೆ ಆರೈಕೆ ವೇಳೆ ಸಹ ಕೆಲವರು ನಿರ್ಲಕ್ಷ್ಯ ಮಾಡಿ, ಸೋಂಕು ವಾಸಿಯಾಗಿರುವುದನ್ನು ಖಚಿತಪಡಿಸಿಕೊಳ್ಳದೆಯೇ ಸಮಸ್ಯೆ ತಂದುಕೊಳ್ಳುತ್ತಿದ್ದಾರೆ' ಎಂದು ಡಾ.ಸಿ. ನಾಗರಾಜ್ ವಿವರಿಸಿದರು.


## ಪ್ರಜಾವಾಣಿ ಫೋನ್-ಇನ್ ಕಾರ್ಯಕ್ರಮ

### ಕಾಲ್ ಮಾಡಿ ಸಮಸ್ಯೆ ಹೇಳ್ಕೊಳ್ಳಿ

- ಬಿಡಿಎ ಬಡಾವಣೆಗಳ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿದೆ ಅನಿಸುತ್ತಿದೆಯೇ? ಹೊಸ ಬಡಾವಣೆಗಳಲ್ಲಿ ಮೂಲಸೌಕರ್ಯ ಕಲ್ಪಿಸುವಲ್ಲಿ ವಿಳಂಬ ಏಕೆ?
- ಎರಡು ದಶಕಗಳಿಂದ ಕಾಯುತ್ತಿರುವ ಅರ್ಕಾವತಿ ಬಡಾವಣೆಯ ನಿವೇಶನ ಆಕಾಂಕ್ಷಿಗಳ ಕನಸು ಈಡೇರುವುದು ಯಾವಾಗ?
- ಪೆರಿಫೆರಲ್ ವರ್ತುಲ ರಸ್ತೆಯ ಭೂಸ್ವಾಧೀನ ಪ್ರಕ್ರಿಯೆ ಗೊಂದಲ ನಿವಾರಣೆ ಎಂದು? ಭೂಮಿ ಕಳೆದುಕೊಂಡ ರೈತರಿಗೆ ಅನ್ಯಾಯ ಆಗಿದೆ ಎಂಬ ಭಾವನೆ ಇದೆಯಲ್ಲ?
- ಬಿಡಿಎ ನಿರ್ಮಿಸಿರುವ ವಸತಿ ಸಮುಚ್ಚಯಗಳ ಗುಣಮಟ್ಟ ಕಳಪೆ ಎಂಬ ಆರೋಪ ಇದೆಯಲ್ಲ? ಇದನ್ನು ಸರಿಪಡಿಸಲು ಕೈಗೊಂಡ ಕ್ರಮಗಳೇನು?
- ಬಿಡಿಎ ಕಚೇರಿಗಳಲ್ಲಿನ ಭ್ರಷ್ಟಾಚಾರ ನಿರ್ಮೂಲನೆಗೆ ಕ್ರಮವೇನು ? ಕಡತ ವಿಲೇವಾರಿ ಹಾಗೂ ಇತರ ಕೆಲಸ ಮಾಡಿಸಿಕೊಳ್ಳಲು ಜನರು ಕಚೇರಿಗಳಿಗೆ ಅಲೆದಾಡಬೇಕಾದ ಸ್ಥಿತಿ ಇದೆ ಎಂಬ ದೂರುಗಳಿವೆಯಲ್ಲ?

ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸಲಿದ್ದಾರೆ
**ಎಸ್.ಆರ್.ವಿಶ್ವನಾಥ್**
ಬಿಡಿಎ ಅಧ್ಯಕ್ಷ, ಶಾಸಕ

**19-7-2021, ಸೋಮವಾರ**
**ಮಧ್ಯಾಹ್ನ 3 ರಿಂದ 4 ಗಂಟೆಯವರೆಗೆ**
ಕರೆ ಮಾಡಿ **080 45557230**

facebook LIVE facebook.com/prajavani.net


## ಅ. 1ರಿಂದ ಹೊಸ ಶೈಕ್ಷಣಿಕ ವರ್ಷ ಆರಂಭಕ್ಕೆ ಯುಜಿಸಿ ಸೂಚನೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಈ ಶೈಕ್ಷಣಿಕ ಸಾಲಿನ ಅಂತಿಮ ವರ್ಷದ ಪದವಿ ಪರೀಕ್ಷೆಗಳನ್ನು ಆಗಸ್ಟ್ 31ರ ಒಳಗೆ ಪೂರ್ಣಗೊಳಿಸಿ, ಹೊಸ ಶೈಕ್ಷಣಿಕ ಸಾಲಿನ ಮೊದಲನೇ ವರ್ಷದ ತರಗತಿಗಳನ್ನು ಅಕ್ಟೋಬರ್ 1ರಿಂದ ಆರಂಭಿಸುವಂತೆ ವಿಶ್ವವಿದ್ಯಾನಿಲಯ ಧನ ಸಹಯೋಗ ಆಯೋಗ (ಯುಜಿಸಿ)ವು ಕಾಲೇಜುಗಳಿಗೆ ಸೂಚಿಸಿದೆ.

ಕೋವಿಡ್-19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಪರೀಕ್ಷೆ ಮತ್ತು ಶೈಕ್ಷಣಿಕ ವೇಳಾಪಟ್ಟಿಯ ಕುರಿತು ಮಾರ್ಗಸೂಚಿಯನ್ನು ಬಿಡುಗಡೆ ಮಾಡಿರುವ ಯುಜಿಸಿ, ಒಂದು ವೇಳೆ 12ನೇ ತರಗತಿಯ ಫಲಿತಾಂಶ ಘೋಷಣೆ ವಿಳಂಬವಾದರೆ ಕಾಲೇಜುಗಳು ಅ.18ರಿಂದ ಹೊಸ ಶೈಕ್ಷಣಿಕ ವರ್ಷ ಆರಂಭಿಸಬಹುದು ಎಂದು ಹೇಳಿದೆ.

'ಸಿಬಿಎಸ್‌ಇ, ಐಸಿಎಸ್‌ಇ ಮತ್ತು ರಾಜ್ಯಗಳ ಪರೀಕ್ಷಾ ಮಂಡಳಿಗಳು 12ನೇ ತರಗತಿ ಫಲಿತಾಂಶಗಳನ್ನು ಪ್ರಕಟಿಸಿದ ಬಳಿಕವೇ ಉನ್ನತ ಶಿಕ್ಷಣ ಸಂಸ್ಥೆಗಳು 2021-2022ನೇ ಸಾಲಿನ ಪದವಿ ಮತ್ತು ಸ್ನಾತಕೋತ್ತರ ಪದವಿ ಪ್ರವೇಶ ಪ್ರಕ್ರಿಯೆ ಆರಂಭಿಸಬೇಕು. ಜುಲೈ 31ರ ಒಳಗೆ 12ನೇ ತರಗತಿ ಪರೀಕ್ಷೆಗಳ ಫಲಿತಾಂಶ ಪ್ರಕಟವಾಗುವ ನಿರೀಕ್ಷೆ ಇದೆ' ಎಂದು ಯುಜಿಸಿ ಪ್ರಕಟಣೆ ಹೇಳಿದೆ.

# ಕಪ್ಪು ಶಿಲೀಂಧ್ರ: 6 ದಿನಗಳಲ್ಲಿ 20 ಮಂದಿಗೆ ಸೋಂಕು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಕಳೆದ ಆರು ದಿನಗಳಲ್ಲಿ 20 ಮಂದಿಗೆ ಕಪ್ಪು ಶಿಲೀಂಧ್ರ ಸೋಂಕು ತಗಲಿರುವುದು ದೃಢಪಟ್ಟಿದೆ. ಈವರೆಗೆ ಈ ಸೋಂಕಿಗೆ ಒಳಗಾದವರ ಒಟ್ಟು ಸಂಖ್ಯೆ 1,140ಕ್ಕೆ ಏರಿಕೆಯಾಗಿದೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಈವರೆಗೆ 208 ಪ್ರಕರಣಗಳು ವರದಿಯಾಗಿವೆ. ಅದೇ ರೀತಿ, ಬೌರಿಂಗ್ ಆಸ್ಪತ್ರೆಯಲ್ಲಿ 372, ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ನಾಲ್ಕು, ನಿಮ್ಹಾನ್ಸ್‌ನಲ್ಲಿ ಮೂರು ಹಾಗೂ ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ ಎರಡು ಪ್ರಕರಣಗಳು ದೃಢಪಟ್ಟಿವೆ. ಕಪ್ಪು ಶಿಲೀಂಧ್ರ ಸೋಂಕಿತರಲ್ಲಿ ಈವರೆಗೆ 586 ಮಂದಿ ಸರ್ಕಾರಿ ಕೋಟಾದಡಿ ದಾಖಲಾಗಿದ್ದಾರೆ. ಇನ್ನುಳಿದವರು ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಸದ್ಯ ವಿಕ್ಟೋರಿಯಾದಲ್ಲಿ 11, ಬೌರಿಂಗ್‌ನಲ್ಲಿ 137, ನಿಮ್ಹಾನ್ಸ್ ಹಾಗೂ ಕೆ.ಸಿ. ಜನರಲ್ ಆಸ್ಪತ್ರೆಗಳಲ್ಲಿ ತಲಾ ಮೂವರು ಹಾಗೂ ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ ಇಬ್ಬರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಈ ಸೋಂಕಿಗೆ ಆರು ದಿನಗಳಲ್ಲಿ ನಾಲ್ವರು ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 108ಕ್ಕೆ ಏರಿಕೆ ಕಂಡಿದೆ

**ಬೆಂಗಳೂರು ನಗರದ ಕೋವಿಡ್ ಅಂಕಿ-ಅಂಶ**

| | | |
|---|---|---|
| 12,21,803 ಒಟ್ಟು ಸೋಂಕಿತರು | | |
| (12,20,498 ನಿನ್ನೆಯ ವಿವರ) | | |
| 12,167 ಸಕ್ರಿಯ ಪ್ರಕರಣ | 11,93,848 ಗುಣಮುಖ ಆದವರು | 15,787 ಒಟ್ಟು ಸಾವು |
| ದಿನದ ಏರಿಕೆ | | |
| ಹೊಸ ಪ್ರಕರಣ | 432 | |
| ಗುಣಮುಖ | 635 | |
| ಸಾವು | 6 | |

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

# ಕೋವಿಡ್ ಮೃತರ ಕುಟುಂಬಕ್ಕೆ ₹25 ಸಾವಿರ ಚೆಕ್ ವಿತರಣೆ

**ಬೆಂಗಳೂರು:** 'ಕೋವಿಡ್ ಸಂಕಷ್ಟದ ಕಾಲದಲ್ಲಿ ಜನರ ಸಮಸ್ಯೆಗಳಿಗೆ ಬಿಜೆಪಿ ಸ್ಪಂದಿಸಲಿಲ್ಲ. ಆದರೆ, ಕಾಂಗ್ರೆಸ್ ಪಕ್ಷ 'ಸಹಾಯಹಸ್ತ ಅಭಿಯಾನ'ದಡಿ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳ ನೆರವಿಗೆ ನಿಂತಿದೆ' ಎಂದು ಶಾಸಕ ಬೈರತಿ ಸುರೇಶ್ ತಿಳಿಸಿದರು.

ಹೆಬ್ಬಾಳ ಕ್ಷೇತ್ರದಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ವೈಯಕ್ತಿಕವಾಗಿ ತಲಾ ₹25 ಸಾವಿರದ ಚೆಕ್ ವಿತರಿಸಿ ಅವರು ಮಾತನಾಡಿದರು.

'ಕ್ಷೇತ್ರದಲ್ಲಿ ಕೊರೊನಾದಿಂದ ಮೃತಪಟ್ಟವರಿಗೆ ₹3 ಲಕ್ಷ ವೆಚ್ಚದಲ್ಲಿ ಸಹಾಯಧನ, ದಿನಸಿ ಕಿಟ್ ಹಾಗೂ ಹಣ್ಣು-ಹಂಪಲಿನ ಕಿಟ್‌ಗಳನ್ನು ವಿತರಿಸಲಾಗುತ್ತಿದೆ' ಎಂದರು.

ಆರ್ಥಿಕ ನೆರವು ನೀಡುವ ಕಾರ್ಯಕ್ರಮಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಕೆಪಿಸಿಸಿ ಉಪಾಧ್ಯಕ್ಷ ಬಿ.ಎಲ್.ಶಂಕರ್, ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ರಾಜ್ ಕುಮಾರ್ ಚಾಲನೆ ನೀಡಿದರು.

ಸ್ಥಳೀಯ ಮುಖಂಡರಾದ ಅಬ್ದುಲ್ ವಾಜೀದ್, ಆನಂದ್ ಕುಮಾರ್, ಹೆಬ್ಬಾಳ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಇದ್ದರು.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಶಾಸಕ ಬೈರತಿ ಸುರೇಶ್ ಚೆಕ್ ವಿತರಿಸಿದರು. ರಾಮಲಿಂಗಾರೆಡ್ಡಿ, ಬಿ.ಎಲ್.ಶಂಕರ್, ರಾಜ್ ಕುಮಾರ್, ಅಬ್ದುಲ್ ವಾಜೀದ್ ಹಾಗೂ ಇತರರು ಇದ್ದರು.

# 'ಬಿಡಿಎ ಜಾಗ ಒತ್ತುವರಿ: ಆ. 5 ರ ನಂತರ ತೆರವು'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಜಾಗಗಳ ಒತ್ತುವರಿಯನ್ನು ಆ.5ರ ನಂತರ ತೆರವುಗೊಳಿಸಲಾಗುವುದು' ಎಂದು ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ತಿಳಿಸಿದರು.

'ಬಿಡಿಎ ಎಲ್ಲೆಲ್ಲಿ ಜಾಗಗಳನ್ನು ಹೊಂದಿದೆ ಎಂಬುದನ್ನು ಪರಿಶೀಲಿಸಲು ಕೈಗೆತ್ತಿಕೊಂಡಿರುವ ಲ್ಯಾಂಡ್ ಆಡಿಟ್ ಕಾರ್ಯ ಪ್ರಗತಿಯಲ್ಲಿದೆ. ಪ್ರಾಧಿಕಾರಕ್ಕೆ ಸೇರಿದ ಆಸ್ತಿಯನ್ನು ಗುರುತಿಸಲಾಗುತ್ತಿದೆ. ಇದುವರೆಗೆ 11 ಸಾವಿರ ಎಕರೆಯಷ್ಟು ಪ್ರದೇಶ ಬಿಡಿಎಗೆ ಸೇರಿದೆ ಎಂದು ಇರುವರೆಗಿನ ವರದಿಯಲ್ಲಿ ತಿಳಿಸಲಾಗಿದೆ. ಈ ಪೈಕಿ ಹಲವಾರು ಪ್ರಕರಣಗಳು ಭೂಸ್ವಾಧೀನ ಪ್ರಕ್ರಿಯೆಯ ವಿವಿಧ ಹಂತದಲ್ಲಿದ್ದರೆ, ಇನ್ನೂ ಕೆಲವು ಪ್ರಕರಣಗಳ ವ್ಯಾಜ್ಯವು ವಿವಿಧ ನ್ಯಾಯಾಲಯಗಳಲ್ಲಿದೆ' ಎಂದು ಅವರು ವಿವರಿಸಿದರು.

'ಪ್ರಾಧಿಕಾರಕ್ಕೆ ಸೇರಿದ ಆಸ್ತಿಯ ಪೈಕಿ 500 ಎಕರೆಯಷ್ಟು ಪ್ರದೇಶಗಳನ್ನು ವಿವಿಧ ಬಡಾವಣೆಗಳಲ್ಲಿ ಗುರುತಿಸಿದ್ದೇವೆ. ಈ ಭೂಮಿಯ ಕುರಿತ ವ್ಯಾಜ್ಯಗಳ ಬಗ್ಗೆ ನ್ಯಾಯಾಲಯಗಳು ಬಿಡಿಎ ಪರ ತೀರ್ಪು ನೀಡಿದ್ದು, ತೆರವುಗೊಳಿಸಲು ಹಸಿರು ನಿಶಾನೆ ನೀಡಿವೆ. ಆದರೆ, ಅಕ್ರಮವಾಗಿ ನಿರ್ಮಾಣವಾಗಿರುವ ಕಟ್ಟಡಗಳನ್ನು ಜುಲೈ 5 ರವರೆಗೆ ನೆಲಸಮ ಮಾಡಬಾರದು ಎಂದು ನ್ಯಾಯಾಲಯವು ಆದೇಶ ನೀಡಿತ್ತು. ಈ ಗಡುವನ್ನು ಆ. 5 ರವರೆಗೆ ಮತ್ತೆ ವಿಸ್ತರಣೆ ಮಾಡಿದೆ. ಈ ಗಡುವಿನ ಬಗ್ಗೆ ನ್ಯಾಯಾಲಯ ಮುಂದಿನ ಆದೇಶ ನೀಡಿದ ನಂತರ ನೆಲಸಮ ಪ್ರಕ್ರಿಯೆಯನ್ನು ಆರಂಭ ಮಾಡಲಾಗುತ್ತದೆ' ಎಂದು ತಿಳಿಸಿದರು.

'ಬಿಡಿಎ ಭೂಸ್ವಾಧೀನ ಮಾಡಿಕೊಂಡಿರುವ ಜಾಗದಲ್ಲಿ ಸುಮಾರು 75 ಸಾವಿರಕ್ಕೂ ಅಧಿಕ ಮನೆಗಳನ್ನು ಅನಧಿಕೃತವಾಗಿ ನಿರ್ಮಾಣ ಮಾಡಲಾಗಿದೆ. ಆದರೆ, ಈ ಮನೆಗಳನ್ನು ನೆಲಸಮ ಮಾಡುವುದು ಕಷ್ಟಸಾಧ್ಯ. ಹಾಗಾಗಿ ಆ ಪ್ರದೇಶದ ಮಾರ್ಗಸೂಚಿ ದರಕ್ಕೆ ಅನುಗುಣವಾಗಿ ದಂಡನಾ ಶುಲ್ಕ ಪಾವತಿಸಿಕೊಂಡು ಈ ಜಾಗಗಳನ್ನು ಅಲ್ಲಿ ನೆಲೆಸಿರುವವರಿಗೆ ಬಿಡಿಎ ಕಾಯ್ದೆಯ ಸೆಕ್ಷನ್ 38ಡಿ ಅಡಿಯಲ್ಲಿ ನೋಂದಣಿ ಮಾಡಿಕೊಡಲಾಗುತ್ತದೆ' ಎಂದರು.

'ಸಾರ್ವಜನಿಕರಿಗೆ ಹೊರೆ ಆಗುತ್ತದೆ ಎಂಬ ಉದ್ದೇಶದಿಂದ ದಂಡನಾ ಶುಲ್ಕವನ್ನು ಕಡಿಮೆ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲಾಗಿದೆ. ಅಲ್ಲಿಂದ ಪ್ರತಿಕ್ರಿಯೆ ಬಂದ ನಂತರ ಸಕ್ರಮ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಲಾಗುತ್ತದೆ' ಎಂದು ಬಿಡಿಎ ಅಧ್ಯಕ್ಷರು ತಿಳಿಸಿದರು.


**ಕೋವಿಡ್ ಅಂಕಿ-ಅಂಶ**
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜೆ

| | ವಿಶ್ವ | ಭಾರತ |
|---|---|---|
| | 19.06 ಕೋಟಿ ಒಟ್ಟು ಪ್ರಕರಣ | 3.11 ಕೋಟಿ ಒಟ್ಟು ಪ್ರಕರಣ |
| ಸಕ್ರಿಯ ಪ್ರಕರಣ | 1.28 ಕೋಟಿ | 4.17 ಲಕ್ಷ |
| ಗುಣಮುಖ | 17.36 ಕೋಟಿ | 3.02 ಕೋಟಿ |
| ಸಾವು | 40.95 ಲಕ್ಷ | 4.13 ಲಕ್ಷ |
| ದಿನದ ಮಾಹಿತಿ: ಹೊಸ ಪ್ರಕರಣ | 5.64 ಲಕ್ಷ | 41,216 |
| ಗುಣಮುಖ | 3.47 ಲಕ್ಷ | 41,977 |
| ಸಾವು | 8,653 | 517 |

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)
ಪ್ರಜಾವಾಣಿ ಗ್ರಾಫಿಕ್ಸ್
45,591 ಬ್ರೆಜಿಲ್ | 51,635 

ಭಾನುವಾರ, ಜುಲೈ 18, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 199 | ಪುಟ 20

www.prajavani.net

/prajavani.net @prajavani / prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಭಾನುವಾರದ ಪುರವಣಿ**

ಭೂಮಿಯ ಮೇಲಿನ ಅತಿದೊಡ್ಡ ಕ್ರೀಡಾಮೇಳ ಒಲಿಂಪಿಕ್ಸ್ ಟೋಕಿಯೊದಲ್ಲಿ ಆರಂಭವಾಗಲಿದೆ. ಭ್ರಾತೃತ್ವದ ಸಂದೇಶ ಸಾರುವ ಈ ಕೂಟವು ಕೋವಿಡ್‌ನ ನೋವನ್ನು ಮರೆಸಲಿದೆ ಎಂದು ಪ್ರಪಂಚವೇ ಕಾದಿದೆ.

'ಸಿನಿಮಾ ಪ್ರಶಸ್ತಿಗೂ ಜನರೇ ತೀರ್ಪುಗಾರರಾಗಲಿ' 6

ಪಂಜಾಬ್ ಉಸ್ತುವಾರಿ ರಾವತ್ ಭೇಟಿ ಬಳಿಕ ಸಿ.ಎಂ ಅಮರಿಂದರ್ ಸಿಂಗ್ ಹೇಳಿಕೆ

'ಎಸ್ಸೆಸ್ಸೆಲ್ಸಿ ಪರೀಕ್ಷೆ ನಾಳೆ: ಸಿದ್ಧತೆ ಪೂರ್ಣ' 4

'ಸೋನಿಯಾ ಗಾಂಧಿ ನಿರ್ಧಾರಕ್ಕೆ ಎಲ್ಲರೂ ಬದ್ಧ' 8

SonyLIV's Coverage of India Tour of Sri Lanka 2021
Co-Presented By
ವಿಮಲ
wazirx
betway
Partner
SWIGGY

## ಮಾಜಿ ಸಂಸದ ಜಿ.ಮಾದೇಗೌಡ ನಿಧನ

ಮಂಡ್ಯ: ಅನಾರೋಗ್ಯದಿಂದ ಬಳಲುತ್ತಿದ್ದ ರೈತ ಹಿತರಕ್ಷಣಾ ಸಮಿತಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ, ಮಾಜಿ ಸಂಸದ ಜಿ.ಮಾದೇಗೌಡ (94) ಶನಿವಾರ ಭಾರತೀನಗರದ ಜಿ.ಮಾದೇಗೌಡ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನಿಧನರಾದರು. 6

ನುಡಿ ನಮನ 6

**ಚಿನಕುರಳಿ**

ಪ್ರಕಾಶ್ ಶೆಟ್ಟಿ

ಒಂದು ವರ್ಷದಲ್ಲಿ ಮುಚ್ಚಿದ ಎರಡು ಸಾವಿರಕ್ಕೂ ಹೆಚ್ಚು ಜಿಮ್

# ಆಟಕ್ಕೂ ಕೋವಿಡ್ ಕಾಟ

ಕ್ವಾಣಿ ಕೂಸು ಕೊಳೀತು; ಓಣಿ ಕೂಸು ಬೆಳೀತು ಎನ್ನುವ ಗಾದೆಮಾತಿದೆ. ಕೊರೊನಾದಿಂದಾಗಿ 'ಗೃಹಬಂಧನ'ದಲ್ಲಿರುವ ಮೈಮನಸ್ಸುಗಳು ಕೊಳೆಯುತ್ತಿವೆ. ಸಮಾಜದ ನಂಟು ಬೆಸೆಯುವ ಆಟದಿಂದ ದೂರವಾಗಿ, ಮನೋಲ್ಲಾಸ ಇಲ್ಲದಂತಾಗಿದೆ. ಮಾನಸಿಕ ದೈಹಿಕ ಸಮಸ್ಯೆಗಳು ದಾಂಗುಡಿ ಇಡುತ್ತಿವೆ...

• ಗಿರೀಶ ದೊಡ್ಡಮನಿ

ಜೆಮ್ನಾಷಿಯಂವೊಂದರಲ್ಲಿ ಪರಿಕರಗಳನ್ನು ಸ್ಯಾನಿಟೈಸ್ ಮಾಡುತ್ತಿರುವುದು

**ಒಳನೋಟ**

ಸೊರಗಿದ ಆಟೋಟ

ಪ್ರತಿಕ್ರಿಯಿಸಿ: 9606038256
feedback@prajavani.co.in

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/3z6InU1

ಬೆಂಗಳೂರು: ಧಾರವಾಡದ ದಿವ್ಯಾ ತಳವಾರ ರಾಷ್ಟ್ರಮಟ್ಟದ ಜಿಮ್ನಾಸ್ಟಿಕ್ಸ್ ಪದಕ ವಿಜೇತೆ. ಅಥ್ಲೆಟಿಕ್ಸ್‌ನಲ್ಲಿಯೂ ಸ್ಪರ್ಧಿಸುತ್ತಿದ್ದರು. ಬಿ.ಕಾಂ ಅಂತಿಮ ವರ್ಷದ ವಿದ್ಯಾರ್ಥಿನಿಯಾಗಿರುವ ದಿವ್ಯಾ, ಬಡತನದಲ್ಲಿಯೇ ಈ ಸಾಧನೆ ಮಾಡಿದವರು. ಆದರೆ ಆಟೋ ಚಾಲಕರಾಗಿದ್ದ ಅಪ್ಪ ಕೊರೊನಾದ ಹೊಡೆತಕ್ಕೆ ಕೊನೆಯುಸಿರೆಳೆದ ನಂತರ ಕುಟುಂಬಕ್ಕೆ ದಿಕ್ಕುತೋಚದಂತಾಗಿದೆ. ದಿವ್ಯಾ ಮತ್ತು ಅವರ ತಂಗಿಯ ವಿದ್ಯಾಭ್ಯಾಸ ಹಾಗೂ ಜೀವನ ನಿರ್ವಹಣೆಗಾಗಿ ಅವರ ತಾಯಿ ಮನೆಗೆಲಸಕ್ಕೆ ಹೋಗುತ್ತಿದ್ದಾರೆ. ಬರುವ ಅಲ್ಪ ಆದಾಯವೇ ಆಸರೆ.

'ಈ ಸಂಕಷ್ಟದಲ್ಲಿ ಕ್ರೀಡಾಪಟುವಾಗಿ ಮುಂದುವರಿಯುವುದು ಕಷ್ಟ. ಜಿಮ್ ಟ್ರೇನಿಂಗ್ ಅಲ್ಪಾವಧಿಯ ಕೋರ್ಸ್ ಮಾಡಿದ್ದೇನೆ. ಸಾಯ್‌ನಲ್ಲಿ ಜಿಮ್ನಾಸ್ಟಿಕ್ಸ್ ತರಬೇತಿ ಪಡೆದಿದ್ದೇನೆ. ಅದರ ಆಧಾರದಲ್ಲಿ ಕೋಚ್ ಹುದ್ದೆಗೆ ಪ್ರಯತ್ನಿಸಿದೆ. ಆದರೆ ಎನ್‌ಐಎಸ್ (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್) ನಲ್ಲಿ ಕೋರ್ಸ್ ಮಾಡಬೇಕಂತೆ. ಆಗ ಮಾತ್ರ ನೌಕರಿಗೆ ಅರ್ಜಿ ಸಲ್ಲಿಸಲು ಅವಕಾಶ ಇದೆ ಎಂದು ಇಲಾಖೆಯಲ್ಲಿ ಹೇಳಿದರು. ನನಗೊಂದು ನೌಕರಿ ಸಿಕ್ಕರೆ, ಕ್ರೀಡೆ, ವಿದ್ಯಾಭ್ಯಾಸ ಮತ್ತು ಮನೆ ನಿರ್ವಹಣೆಗೆ ಸಹಾಯವಾಗುತ್ತದೆ' ಎಂದು ದಿವ್ಯಾ ಗದ್ಗದಿತರಾದರು.

ಖಾಸಗಿ ಕ್ರೀಡಾ ಕೇಂದ್ರಗಳಲ್ಲಿ ಸೇರಿಕೊಳ್ಳುವ ಅವರ ಪ್ರಯತ್ನಕ್ಕೂ ಫಲ ಸಿಕ್ಕಿಲ್ಲ.

7ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 7

> ಕ್ರಿಕೆಟ್ ಅಕಾಡೆಮಿಯಲ್ಲಿ ನಾವೆಷ್ಟೇ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಿದರೂ ಮಕ್ಕಳನ್ನು ಕಳಿಸಲು ಪಾಲಕರಿಗೆ ಧೈರ್ಯ ಸಾಲುತ್ತಿಲ್ಲ. ಆ ಪಾಲಕರ ಕಾಳಜಿ ಸಮಂಜಸವಾಗಿದೆ. ಮಕ್ಕಳ ಜೀವ ಮತ್ತು ಆರೋಗ್ಯವನ್ನು ಪಣಕ್ಕಿಡಲು ಯಾರೂ ಒಪ್ಪುವುದಿಲ್ಲ. ನಮ್ಮ ಅಕಾಡೆಮಿಯಲ್ಲಿ ಕೋಚ್‌ಗಳಿಗೆ ಅರ್ಧ ಸಂಬಳ ಕೊಟ್ಟು ನಡೆಸುತ್ತಿದ್ದೇವೆ. ಈಗ ಲೀಗ್ ಕ್ರಿಕೆಟ್ ಆಯೋಜನೆ ಪ್ರಕಟಿಸಿರುವುದರಿಂದ ಕೆಲವು ಸೀನಿಯರ್ ಆಟಗಾರರು ಅಭ್ಯಾಸಕ್ಕೆ ಬರುತ್ತಿದ್ದಾರೆ. ಆದರೆ, ಜೂನಿಯರ್ ಹಂತದಲ್ಲಿ ಮಕ್ಕಳು ಬರುತ್ತಿಲ್ಲ.
> **ಆರ್.ಎಕ್ಸ್ ಮುರಳಿ,** ಕ್ರಿಕೆಟ್ ಕೋಚ್

# ನಾಯಕತ್ವ ಬದಲಾವಣೆ ಇಂಗಿತ

## ಪಕ್ಷ ಸಂಘಟನೆಗೆ ಸೂಚಿಸಿದ ಅಮಿತ್ ಶಾ: ಬಿಎಸ್‌ವೈ ಹೇಳಿಕೆ

• ಸಿದ್ದಯ್ಯ ಹಿರೇಮಠ

ನವದೆಹಲಿ: ಕರ್ನಾಟಕದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಾಯಕತ್ವದ ಬದಲಾವಣೆಗೆ ಬಿಜೆಪಿ ವರಿಷ್ಠರು ಇಂಗಿತ ವ್ಯಕ್ತಪಡಿಸಿದ್ದು, ಆ ದಿಕ್ಕಿನತ್ತ ಆರಂಭಿಕ ಹೆಜ್ಜೆಗಳನ್ನು ಇಡಲಾರಂಭಿಸಿರುವ ಸುಳಿವು ಗೋಚರಿಸಿದೆ.

'ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಕೇಂದ್ರದಿಂದ ಬಾಕಿ ಇರುವ ಅನುಮತಿ ಪಡೆಯಲು ಹಾಗೂ ಅಭಿವೃದ್ಧಿ ಯೋಜನೆಗಳಿಗೆ ನೆರವು ಕೋರಿ ದೆಹಲಿಗೆ ಬಂದಿದ್ದೇನೆ' ಎಂದು ಯಡಿಯೂರಪ್ಪ ಹೇಳಿಕೊಂಡಿದ್ದರು. ಆದರೆ, ಸಂಬಂಧಪಟ್ಟ ಇಲಾಖೆ ಸಚಿವರು, ಅಧಿಕಾರಿಗಳನ್ನು ಜತೆಯಲ್ಲಿ ಕರೆತರದೇ ತಮ್ಮ ಪುತ್ರ ಬಿ.ವೈ. ವಿಜಯೇಂದ್ರ ಮತ್ತು ವಿಧಾನಪರಿಷತ್ತಿನ ಸದಸ್ಯ ಲೆಹರ್ ಸಿಂಗ್ ಮಾತ್ರ ಅವರ ಜತೆಗೆ ರಾಜಧಾನಿಗೆ ಬಂದಿದ್ದರು.

ದೆಹಲಿ ಪ್ರವಾಸದ ವೇಳೆ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ ಸಿಂಗ್ ಹಾಗೂ ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿಯಾಗಿ ಯಡಿಯೂರಪ್ಪ ಮಾತುಕತೆ ನಡೆಸಿದ್ದಾರೆ.

6ನೇ ಪುಟ ನೋಡಿ

### 'ರಾಜೀನಾಮೆ ನೀಡುವುದಿಲ್ಲ'

ನವದೆಹಲಿ: 'ರಾಜೀನಾಮೆ ನೀಡಲಿದ್ದೇನೆ ಎಂಬುದು ಸತ್ಯಕ್ಕೆ ದೂರವಾದ ಮಾತು. ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ' ಎಂದು ನಡ್ಡಾ ಭೇಟಿಗೆ ಮುನ್ನ ಯಡಿಯೂರಪ್ಪ ಪ್ರತಿಪಾದಿಸಿದರು.

'ರಾಜೀನಾಮೆಯಂಥ ವಿಷಯವು ಮುಚ್ಚಿಡುವಂಥದ್ದೇ ಅಲ್ಲ. ಯಾರೂ ಈವರೆಗೆ ರಾಜೀನಾಮೆ ನೀಡುವಂತೆ ಸೂಚಿಸಿಲ್ಲ. ಆ ರೀತಿಯ ಸುದ್ದಿಗಳು ಹಬ್ಬಿದಲ್ಲಿ ಅದಕ್ಕೆ ಬೆಲೆ ಇಲ್ಲ' ಎಂದು ಅವರು ನಡ್ಡಾ ಭೇಟಿಯ ನಂತರ ಪುನರುಚ್ಚರಿಸಿದರು. 'ಆಗಸ್ಟ್ ಮೊದಲ ವಾರ ಮತ್ತೆ ದೆಹಲಿಗೆ ಬಂದು ಪಕ್ಷದ ಹಾಗೂ ಕೇಂದ್ರದ ನಾಯಕರನ್ನು ಭೇಟಿ ಮಾಡಿ ರಾಜ್ಯದ ಅಭಿವೃದ್ಧಿ ಕುರಿತು ಚರ್ಚಿಸುವೆ' ಎಂದು ಅವರು ತಿಳಿಸಿದರು.

### ಇದೇ 26ಕ್ಕೆ ಶಾಸಕಾಂಗ ಪಕ್ಷದ ಸಭೆ

ಬೆಂಗಳೂರು: 'ಸರ್ಕಾರ ಎರಡು ವರ್ಷ ಪೂರೈಸುತ್ತಿರುವ ಪ್ರಯುಕ್ತ ಜುಲೈ 26ರಂದು ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು. 6ನೇ ಪುಟ ನೋಡಿ

### ದೆಹಲಿಗೆ ಯಡಿಯೂರಪ್ಪ ಕೊಂಡೊಯ್ದಿದ್ದೇನು: ಕುಮಾರಸ್ವಾಮಿ

ಬೆಂಗಳೂರು: ಮುಖ್ಯಮಂತ್ರಿ ಯಡಿಯೂರಪ್ಪ ಶುಕ್ರವಾರ ದೆಹಲಿಗೆ ಹೋಗುವಾಗ ವಿಶೇಷ ವಿಮಾನದಲ್ಲಿ ಆರು ಬ್ಯಾಗ್‌ಗಳಲ್ಲಿ ಕೊಂಡೊಯ್ದಿರುವುದು ಏನು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, 'ದೆಹಲಿಗೆ ಹೋಗುವಾಗ ಆರು ದೊಡ್ಡ ಬ್ಯಾಗ್‌ಗಳನ್ನು ಕೊಂಡೊಯ್ದಿದ್ದಾರೆ ಎಂಬ ಮಾಹಿತಿ ಇದೆ. ಆ ಚೀಲಗಳಲ್ಲಿ ರಾಜ್ಯದ ಸಮಸ್ಯೆಗಳಿಗೆ ಸಂಬಂಧಿಸಿದ ದಾಖಲೆಗಳಿದ್ದವೋ ಅಥವಾ ಬೇರೇನಾದರೂ ಇತ್ತೋ ಗೊತ್ತಿಲ್ಲ' ಎಂದು ಕುಟುಕಿದರು. 6ನೇ ಪುಟ ನೋಡಿ

SWIGGY ALL STARS

ಸ್ವಿಗ್ಗಿಯಲ್ಲಿ ಎಲ್ಲಾ ಟಾಪ್ ಬ್ರಾಂಡ್‌ಗಳ ಮೇಲೆ 60% ವರೆಗೆ* ರಿಯಾಯಿತಿ ಪಡೆಯಿರಿ.

ಅಷ್ಟೇ, ನಿಮಗೆ ಇನ್ನೇನು ಬೇಕು?

BEHROUZ The Royal Biryani | EMPIRE | LEON GRILL | A2B VEG. RESTAURANT

* ಈ ಕೊಡುಗೆಯು ಆಯ್ದ ನಗರಗಳಲ್ಲಿ ಮಾತ್ರ ಜಾರಿಯಲ್ಲಿರುತ್ತದೆ. ಇತರ ಷರತ್ತುಗಳು ಮತ್ತು ನಿಬಂಧನೆಗಳು ಅನ್ವಯಿಸುತ್ತವೆ.

Godrej expert

ನನ್ನ ಕಲರ್‌ನಲ್ಲಿದೆ 10 ಪಟ್ಟು ಆ್ಯಲೋ ವೀರದ* ಆರೈಕೆ!

ಇದರ ನೋ ಅಮೋನಿಯ ಕ್ರೀಮ್ ಬಿಳಿ ಕೂದಲನ್ನು ಕಲರ್ ಮಾಡುತ್ತದೆ ಮತ್ತು ಅದನ್ನು ಸಾಫ್ಟ್ ಮತ್ತು ಶೈನೀ ಆಗಿ ಇಡುತ್ತದೆ!

₹30^

^20g+20ml

NEW expert | natural black 1.00 crème hair colour

rich natural black crème ultra soft deep shine

long lasting colour | 100% grey coverage

no ammonia

10x more aloe vera*

*ಗೋದ್ರೇಜ್ ಎಕ್ಸ್‌ಪರ್ಟ್ ರಿಚ್ ಕ್ರೀಮ್ ಹೇರ್ ಕಲರ್‌ನ ಹೋಲಿಕೆಯಲ್ಲಿ.

Creativeland Asia

**ಸಕಲ ರೀತಿಯಲ್ಲಿ ಸಜ್ಜಾದ ಚಿತ್ರದುರ್ಗದ ಮಠ • ಸರಳ ರೀತಿಯಲ್ಲಿ ವರ್ಚುವಲ್ ಆಚರಣೆ**

# ರಾಷ್ಟ್ರೀಯ ಭೋವಿ ಜನೋತ್ಸವ

ಸಿದ್ದರಾಮೇಶ್ವರ ಮಹಾಸಂಸ್ಥಾನದ ಭೋವಿ ಗುರುಪೀಠದ ಪೀಠಾಧ್ಯಕ್ಷರಾದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರ ಜನ್ಮದಿನವನ್ನು ರಾಷ್ಟ್ರೀಯ ಭೋವಿ ಜನೋತ್ಸವವಾಗಿ ಆಚರಿಸುವ ಪ್ರತೀತಿ ದಶಕದಿಂದ ಬೆಳೆದುಬಂದಿದೆ. ಸಮಾಜ ಸೇವಾ ದೀಕ್ಷೆಯ ನೆನಪು ಹಾಗೂ ಪಟ್ಟಾಭಿಷೇಕದ ಸಂಭ್ರಮ ಇದೇ ಗಳಿಗೆಯಲ್ಲಿ ಮೇಳೈಸಲಿವೆ. ಸಡಗರದಿಂದ ಆಚರಿಸುತ್ತಿದ್ದ ಭೋವಿ ಜನೋತ್ಸವ ಪ್ರಸಕ್ತ ವರ್ಷ ಸರಳ ರೂಪ ಪಡೆದು ವರ್ಚುವಲ್ ಮೂಲಕ ಭಕ್ತರನ್ನು ತಲುಪುತ್ತಿದೆ. ಇದಕ್ಕೆ ಚಿತ್ರದುರ್ಗದ ಮಠ ಸಕಲ ರೀತಿಯಲ್ಲಿ ಸಜ್ಜಾಗಿದೆ.

ಸ್ವಾಮೀಜಿ ಅವರ ಜನ್ಮದಿನ ಭೋವಿ ಜನೋತ್ಸವದ ರೂಪ ಪಡೆದ ಪರಿ ಕುತೂಹಲಕಾರಿಯಾಗಿದೆ. ಮುರುಘಾ ಮಠದಲ್ಲಿ ಸನ್ಯಾಸದೀಕ್ಷೆ ಪಡೆದ ಮಠಾಧೀಶರಲ್ಲಿ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅತ್ಯಂತ ಕಿರಿಯರು. ಇದೇ ಕಾರಣಕ್ಕೆ ಎಲ್ಲರ ಪ್ರೀತಿಪಾತ್ರರೂ ಆಗಿದ್ದರು. 2009ರಲ್ಲಿ ಚಿತ್ರದುರ್ಗದ ಹೊರವಲಯದ ಪುಟ್ಟ ಗುಡಿಸಲಲ್ಲಿ ಮಠ ಆರಂಭಿಸಿದ ಸ್ವಾಮೀಜಿ ಅವರಿಗೆ ಹಾವು, ಚೇಳುಗಳೇ ಸ್ನೇಹಿತರಂತಿದ್ದವು. ಜುಲೈ 18ಕ್ಕೆ ಗುಡಿಸಲಿಗೆ ಧಾವಿಸುತ್ತಿದ್ದ ಇತರ ಮಠಾಧೀಶರು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರ ಜನ್ಮದಿನ ಆಚರಿಸುತ್ತಿದ್ದರು. ವರ್ಷಗಳು ಉರುಳಿದಂತೆ ಇದು ಭಕ್ತರಿಗೆ ತಿಳಿಯಿತು. ಅಲ್ಲಿಂದ ಇದು ಭೋವಿ ಜನೋತ್ಸವವಾಗಿ, ಸಮುದಾಯದ ಹಬ್ಬವಾಗಿ ಮುನ್ನೆಲೆಗೆ ಬಂದಿತು.

ಧಾರ್ಮಿಕ ತಳಹದಿಯ ಮೇಲೆ ಸಮುದಾಯ ಸಂಘಟನೆಗೆ ಮುಂದಾದ ಸ್ವಾಮೀಜಿ ಅವರಿಗೆ ಇದು ಇನ್ನಷ್ಟು ಸ್ಫೂರ್ತಿ ತುಂಬಿತು. ಈ ಕಾರ್ಯಕ್ರಮವನ್ನು ಸಮುದಾಯ ಸಂಘಟನೆಗೆ ಪೂರಕವಾಗಿ ದುಡಿಸಿಕೊಂಡು ಚಾಣಾಕ್ಷತೆ ತೋರಿದವರು ಸ್ವಾಮೀಜಿ. ಜನೋತ್ಸವದ ಅಂಗವಾಗಿ ಪ್ರತಿಭಾ ಪುರಸ್ಕಾರ, ಅಭಿನಂದನಾ ಸಮಾರಂಭ, ವಧು-ವರರ ಸಮಾವೇಶ, ಸಂವಾದ, ರಕ್ತದಾನ ಶಿಬಿರ, ಆರೋಗ್ಯ ಶಿಬಿರ, ಪಿಎಚ್.ಡಿ ಪದವೀಧರರು ಹಾಗೂ ಐಎಎಸ್, ಕೆಎಎಸ್ ಸಾಧಕರಿಗೆ ಸನ್ಮಾನ ಸಮಾರಂಭ ನಡೆಸಲಾಗುತ್ತಿತ್ತು. ಇದು ಸಮುದಾಯದಲ್ಲಿ ಇನ್ನಷ್ಟು ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿದೆ.

**ಪ್ರಸ್ತುತಿ: ಪಿ.ವಿ. ಬ್ಯಾಂಡ್ ಸ್ಪಾಟ್**

ಜನೋತ್ಸವದಲ್ಲಿ ಸಂಘಟನೆಯ ಸಿಂಹಾವಲೋಕನ ನಡೆಯುತ್ತದೆ. ಸಮುದಾಯವನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕಾರ್ಯಗಳ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ. ದಶಕದ ಹಿಂದೆ ಆರಂಭವಾದ ಜನೋತ್ಸವ ರಾಷ್ಟ್ರದ ಹಲವು ರಾಜ್ಯಗಳಲ್ಲಿರುವ ಸಮುದಾಯವನ್ನು ತಲುಪಿದೆ. ಶೋಷಿತ ಸಮಾಜಕ್ಕೆ ರಾಜಕೀಯ ಅಧಿಕಾರದ ಅಗತ್ಯವನ್ನು ಅರಿತು ಜಾಗೃತಿ ಮೂಡಿಸಲಾಗುತ್ತಿದೆ. ರಾಜಕೀಯ, ಸಾಮಾಜಿಕ ಪ್ರಜ್ಞೆ ಮೂಡಿಸುವಲ್ಲಿ ಮಠ ಯಶಸ್ವಿಯಾಗಿದೆ. ಸಮುದಾಯದ ಪ್ರತಿನಿಧಿಗಳಾಗಿ ಹಲವರು ರಾಜಕೀಯ ಪ್ರಾತಿನಿಧ್ಯ ಪಡೆದಿದ್ದಾರೆ. ಇತ್ತೀಚೆಗೆ ನಡೆದ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಭೋವಿ ಸಮುದಾಯದ ಮೂರು ಸಾವಿರಕ್ಕೂ ಹೆಚ್ಚು ಜನರು ಆಯ್ಕೆಯಾಗಿದ್ದಾರೆ.

ಸಮಾಜಕ್ಕಾಗಿ ರಾಜ್ಯದಲ್ಲಿ ಪಾದರಸದಂತೆ ಸಂಚರಿಸುವ ಸ್ವಾಮೀಜಿ ಅವರು ಜನರೊಂದಿಗೆ ಬೆರೆಯುವ ಅದಮ್ಯ ಉತ್ಸಾಹ ಹೊಂದಿದ್ದಾರೆ. ಬಿಡುವಿನ ಸಂದರ್ಭದಲ್ಲಿ ಹಳ್ಳಿ, ಹಟ್ಟಗಳಿಗೆ ಭೇಟಿ ನೀಡಿ ಭಕ್ತರೊಂದಿಗೆ ಸಂವಾದ ನಡೆಸುತ್ತಾರೆ. ಜನರ ಸಂಕಷ್ಟಗಳಿಗೆ ಪರಿಹಾರ ಕಂಡುಕೊಳ್ಳಲು ಸದಾ ಪ್ರಯತ್ನಿಸುತ್ತಾರೆ. ವ್ಯಕ್ತಿ ಹಾಗೂ ವ್ಯಕ್ತಿತ್ವವನ್ನು ರೂಪಿಸುವ ವಚನಗಳನ್ನು ಅಭ್ಯಾಸ ಮಾಡುವ ರೂಢಿ ಬೆಳೆಸಿಕೊಂಡಿದ್ದಾರೆ. ವಚನಗಳ ಅರ್ಥಗಳನ್ನು ಹಲವು ಆಯಾಮಗಳಲ್ಲಿ ಅರಿಯುವ ತುಡಿತ ಇವರಲ್ಲಿದೆ.

ನಿತ್ಯ ಬೆಳಿಗ್ಗೆಯಿಂದ ರಾತ್ರಿಯವರೆಗೆ ಚಟುವಟಿಕೆಯಿಂದ ಕೆಲಸ ಮಾಡುತ್ತಾರೆ. ವ್ಯಾಯಾಮ, ಯೋಗ, ಪೂಜೆ, ಭಕ್ತರ ಭೇಟಿ, ಶಿಕ್ಷಣ ಸಂಸ್ಥೆಯ ನಿರ್ವಹಣೆ, ವಚನ ಅಧ್ಯಯನ, ಓದು, ಚರ್ಚೆ, ಸಮುದಾಯ ಸಂಘಟನೆ... ಹೀಗೆ ಹಲವು ರೀತಿಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಕ್ರಿಕೆಟ್ ಹಾಗೂ ಬ್ಯಾಡ್ಮಿಂಟನ್ ಆಡುವುದು ಇವರಿಗೆ ಅಚ್ಚುಮೆಚ್ಚು.

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ

ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಜಲಾಶಯದ ಹಿಂಭಾಗದಲ್ಲಿನ ಮೀಸಲು ಅರಣ್ಯ ಪ್ರದೇಶದಲ್ಲಿ ಭದ್ರಾ ಮೇಲ್ದಂಡೆ ಕಾಮಗಾರಿಯಲ್ಲಿ ತೊಡಗಿಸಿಕೊಂಡಿರುವ ಕೂಲಿ ಕಾರ್ಮಿಕರಿಗೆ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಆಹಾರ ಧಾನ್ಯದ ಕಿಟ್ ವಿತರಿಸಿದರು.

ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ ಬೆಂಕಿಗೆ ಆಹುತಿಯಾದ ಗುಡಿಸಲು ವೀಕ್ಷಿಸಿದ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ.

## ಬಸವತತ್ವ, ಸಾಮರಸ್ಯದ ಮಂತ್ರ

ಸಿದ್ದರಾಮೇಶ್ವರರ ಭಕ್ತರಾದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರು ಬಸವತತ್ವದ ಅನುಯಾಯಿ. ಬಸವತತ್ವದ ನೆಲೆಗಟ್ಟಿನ ಮೇಲೆ ವೈಚಾರಿಕ ಧರ್ಮ ನಿರ್ಮಾಣವಾಗಬೇಕು ಎಂಬ ಮಹದಾಸೆ ಹೊಂದಿದ ಸ್ವಾಮೀಜಿ ಅವರ ಮಾತು ಹಾಗೂ ಕೃತಿಯಲ್ಲಿ ಅದೇ ತತ್ವವನ್ನು ಕಾಣಬಹುದು.

ಸ್ವಾಮೀಜಿ ಲಿಂಗಧಾರಣೆ, ರುದ್ರಾಕ್ಷಿ ಧಾರಣೆ ಮಾಡಿಸುತ್ತಾರೆ. ವಚನಗಳನ್ನು ಅಪಾರವಾಗಿ ಓದಿಕೊಂಡಿರುವ ಸ್ವಾಮೀಜಿ ಭಕ್ತರಿಗೆ ವಚನದ ಪುಸ್ತಕಗಳನ್ನು ಕಾಣಿಕೆಯಾಗಿ ನೀಡುತ್ತಾರೆ. ವಚನದ ಮೂಲಕ ಸಿದ್ದರಾಮೇಶ್ವರರು ನೀಡಿದ ಸಂದೇಶಗಳನ್ನು ಜನರಿಗೆ ತಲುಪಿಸುವ ಕಾಯದಲ್ಲಿ ತೊಡಗಿಸಿಕೊಂಡಿದ್ದಾರೆ.

'ಭೌತಿಕ ದೇಗುಲದ ಪರಿಕಲ್ಪನೆಯಿಂದ ಭಕ್ತರನ್ನು ಹೊರತರುವ ಅಗತ್ಯವಿದೆ. ದೇಹವೇ ದೇಗುಲ ಎಂಬ ಬಸವಣ್ಣನವರ ತತ್ವವನ್ನು ಮನವರಿಕೆ ಮಾಡಿಕೊಡಬೇಕಿದೆ. ಇದಕ್ಕೆ ನಿರಂತರ ಪ್ರಯತ್ನ ಬೇಕಿದೆ. ಇದರಲ್ಲಿ ಸಫಲತೆಯೂ ಕಾಣುತ್ತಿದೆ' ಎಂಬುದು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರ ನಂಬಿಕೆ.

ಗುರುಗಳು ಸಾಮರಸ್ಯದ ಮಂತ್ರವನ್ನು ಸದಾ ಜಪಿಸುತ್ತಾರೆ. ಸಾಮರಸ್ಯ ಸಮಾಜದ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಬದಲಾಗಬೇಕಿರುವ ಪರಿಯನ್ನು ಮನವರಿಕೆ ಮಾಡಿಕೊಡುವಲ್ಲಿ ನಿರತರಾಗಿದ್ದಾರೆ. ಎರಡು ಕುಟುಂಬಗಳ ನಡುವೆ ಕಾಣಿಸಿಕೊಳ್ಳುವ ವೈಮನಸು ಜಾತಿಯ ಆಯಾಮಕ್ಕೆ ತಿರುಗದಂತೆ ಎಚ್ಚರ ವಹಿಸಿದ್ದಾರೆ. ಜಾತಿ ಕಲಹಗಳು ಕಾಣಿಸಿಕೊಂಡ ಗ್ರಾಮಗಳಿಗೆ ಭೇಟಿ ನೀಡಿ ಭಕ್ತರಿಗೆ ತಿಳಿವಳಿಕೆ ನೀಡಿದ್ದಾರೆ. ಇದರಿಂದ ಹಲವು ಗ್ರಾಮಗಳಲ್ಲಿ ಜಾತಿ ಕಲಹಗಳು ಕಡಿಮೆಯಾಗಿವೆ.

ಚಿತ್ರದುರ್ಗದ ಭೋವಿ ಗುರುಪೀಠದ ಪೀಠಾಧ್ಯಕ್ಷ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರು ಆಟೊ ಚಾಲಕರಿಗೆ ಆಹಾರ ಧಾನ್ಯ ವಿತರಣೆ ಮಾಡಿದರು.

## ಉಚಿತ ಶಿಕ್ಷಣ ನೀಡುವ ಹೆಬ್ಬಯಕೆ

ಉದ್ಯೋಗ ಅರಸಿ ಗುಳೆ ಹೋಗುವ ಭೋವಿ ಜನಾಂಗದ ಬಡಜನರ ಮಕ್ಕಳು ಶಿಕ್ಷಣದತ್ತ ಗಮನಹರಿಸಿದ್ದು ಕಡಿಮೆ. ಕೆಲಸದ ಸ್ಥಳಕ್ಕೆ ಮಕ್ಕಳನ್ನು ಕರೆದೊಯ್ದು ದುಡಿಮೆಗೆ ಬಳಸಿಕೊಳ್ಳುತ್ತಿದ್ದ ಪ್ರವೃತ್ತಿ ಬೆಳೆದುಬಂದಿತ್ತು. ಇದನ್ನು ಅರಿತ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಇಡೀ ಸಮುದಾಯದ ಮಕ್ಕಳನ್ನು ಅಕ್ಷರಸ್ಥರನ್ನಾಗಿ ಮಾಡುವ ಪಣತೊಟ್ಟಿದ್ದಾರೆ.

ಶಿಕ್ಷಣ ಸಂಸ್ಥೆಯೊಂದನ್ನು ಆರಂಭಿಸಿದ ಮಠ, ಮಕ್ಕಳಿಗೆ ಉಚಿತ ಶಿಕ್ಷಣ, ಹಾಸ್ಟೆಲ್ ವ್ಯವಸ್ಥೆ ಕಲ್ಪಿಸುವ ಆಶ್ವಾಸನೆ ನೀಡಿತು. ಆದರೂ ಸಮುದಾಯದ ಮಕ್ಕಳು ಶಿಕ್ಷಣ ಪಡೆಯಲು ಮುಂದೆ ಬರಲಿಲ್ಲ. ಭೋವಿ ಸಮುದಾಯ ಇರುವ ಹಳ್ಳಿಗಳಿಗೆ ಭೇಟಿ ನೀಡಿದ ಸ್ವಾಮೀಜಿ ಶಿಕ್ಷಣದ ಅಗತ್ಯದ ಬಗ್ಗೆ ಭಕ್ತರಲ್ಲಿ ಜಾಗೃತಿ ಮೂಡಿಸಿದರು. ವಲಸೆ ಹೋಗುವ ಪೋಷಕರ ಮಕ್ಕಳನ್ನು ಮಠಕ್ಕೆ ಕರೆತಂದು ಶಿಕ್ಷಣ ನೀಡತೊಡಗಿದರು. ಚಿಕ್ಕದಾಗಿ ಆರಂಭವಾದ ಶಿಕ್ಷಣ ಸಂಸ್ಥೆ ದಶಕದಲ್ಲಿ ದೊಡ್ಡದಾಗಿ ಬೆಳೆದಿದೆ. ಎಲ್‌ಕೆಜಿಯಿಂದ ಪದವಿ ಪೂರ್ವ ಕಾಲೇಜು ವರೆಗಿನ ಶಿಕ್ಷಣ ಸಂಸ್ಥೆ ಚಿತ್ರದುರ್ಗದಲ್ಲಿದೆ. ಪದವಿ ಪೂರ್ವ ಕಾಲೇಜು ಶಿವಮೊಗ್ಗದಲ್ಲಿದೆ. ಬಾಗಲಕೋಟೆ ಹಾಗೂ ಚಿತ್ರದುರ್ಗದಲ್ಲಿ ಉಚಿತ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲಾಗಿದೆ.

ಶಿಕ್ಷಣ ಸಂಸ್ಥೆಯ ಸಿಬ್ಬಂದಿ ಐದು ವರ್ಷ ರಾಜ್ಯದ ಎಲ್ಲ ಜಿಲ್ಲೆಗಳಿಗೆ ಭೇಟಿ ನೀಡಿ ಮಕ್ಕಳನ್ನು ಕರೆತಂದಿದ್ದಾರೆ. ಇತ್ತೀಚೆಗೆ ಅನೇಕರು ಸ್ವಯಂ ಪ್ರೇರಿತವಾಗಿ ಮಕ್ಕಳನ್ನು ಶಾಲೆ-ಕಾಲೇಜುಗಳಿಗೆ ದಾಖಲು ಮಾಡುತ್ತಿದ್ದಾರೆ. ಆಷ್ಟರ ಮಟ್ಟಿನ ಜಾಗೃತಿ ಸಮುದಾಯದಲ್ಲಿ ಬೆಳೆದಿದೆ. ಮಠದ ನೆರವಿನಿಂದ ಶಿಕ್ಷಣ ಪಡೆದವರು ವೇತನದ ಶೇ 10ರಷ್ಟನ್ನು ಶಿಕ್ಷಣ ವ್ಯವಸ್ಥೆಯ ಸುಧಾರಣೆಗೆ ನೀಡುತ್ತಿದ್ದಾರೆ. ಪದವಿ ಹಾಗೂ ಎಂಜಿನಿಯರಿಂಗ್ ಸೇರಿ ಉನ್ನತ ಶಿಕ್ಷಣದ ಕೋರ್ಸ್ ಆರಂಭಿಸಿ ಉಚಿತ ಪ್ರವೇಶ ಕಲ್ಪಿಸುವ ಸಂಕಲ್ಪವನ್ನು ಮಠ ಹೊಂದಿದೆ. ಪ್ರಜ್ಞಾವಂತ ಮಕ್ಕಳೇ ಸಮುದಾಯದ ಆಧಾರಸ್ತಂಭ ಎಂಬುದು ಸ್ವಾಮೀಜಿ ಅವರ ದೃಢವಾದ ನಂಬಿಕೆ.



ಅಖಂಡ ಶ್ರೀನಿವಾಸ್‌ಮೂರ್ತಿ
ಶಾಸಕರು, ಬೆಂಗಳೂರು

## ಅನಾಥ ಮಕ್ಕಳಿಗೆ ಆಶ್ರಯ ಕಲ್ಪಿಸಿದ ಗುರುಪೀಠ

ಭೋವಿ ಗುರುಪೀಠವು ನೂರಾರು ಅನಾಥ ಮಕ್ಕಳಿಗೆ ಆಶ್ರಯ ಕಲ್ಪಿಸಿದೆ. ಉಚಿತ ಊಟ, ವಾಸ್ತವ್ಯ ಹಾಗೂ ಶಿಕ್ಷಣ ನೀಡಿ ಸಮಾಜದ ಮುಖ್ಯವಾಹಿನಿಗೆ ಕರೆತರುವ ಮಹತ್ತರವಾದ ಜವಾಬ್ದಾರಿಯನ್ನು ನಿಭಾಯಿಸುತ್ತಿದೆ. ತಿಪಟೂರು ತಾಲ್ಲೂಕಿನ ಹಳ್ಳಿಯೊಂದರಲ್ಲಿ ನಡೆದ ಘಟನೆ ಗುರುಪೀಠದ ಪೀಠಾಧ್ಯಕ್ಷರಾದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರನ್ನು ಈ ಸೇವೆಯತ್ತ ಕರೆತಂದಿದೆ.

ಅದೊಂದು ರಾತ್ರಿ ಸುಖ ನಿದ್ರೆ ಆವರಿಸಿದಾಗ ಗುಡಿಸಲಿಗೆ ಆಕಸ್ಮಿಕ ಬೆಂಕಿ ಬಿದ್ದಿದೆ. ಬೆಂಕಿಯ ಕೆನ್ನಾಲಿಗೆ ಅರಿವಿಗೆ ಬರುವ ಮುನ್ನವೇ ಗುಡಿಸಲಿನಲ್ಲಿ ಮಲಗಿದ್ದ ಇಬ್ಬರು ಪೋಷಕರು ಆಹುತಿಯಾಗಿದ್ದಾರೆ. ಸಂಬಂಧಿಕರ ಮನೆಗೆ ತೆರಳಿದ್ದ ಮಕ್ಕಳು ಬದುಕಿದರಾದರೂ ತಂದೆ-ತಾಯಿ ಕಳೆದುಕೊಂಡು ಅನಾಥರಾದರು. ಸ್ಥಳಕ್ಕೆ ಭೇಟಿ ನೀಡಿದ ಸ್ವಾಮೀಜಿ ಅವರನ್ನು ಈ ಹೃದಯ ವಿದ್ರಾವಕ ಘಟನೆ ಗಾಸಿಗೊಳಿಸಿತು. ಮಕ್ಕಳನ್ನು ಮಠಕ್ಕೆ ಕರೆತಂದು ಆಶ್ರಯ ಕಲ್ಪಿಸಿದರು.

ಅನಾಥರು ಹಾಗೂ ಏಕಪೋಷಕರನ್ನು ಹೊಂದಿದ ನೂರಾರು ಮಕ್ಕಳು ಮಠದಲ್ಲಿ ಆಶ್ರಯ ಪಡೆದಿದ್ದಾರೆ. ಪದವಿ, ಎಂಜಿನಿಯರಿಂಗ್ ವರೆಗಿನ ಶಿಕ್ಷಣವನ್ನು ಉಚಿತವಾಗಿ ನೀಡಲಾಗುತ್ತಿದೆ. ಉದ್ಯೋಗ ಪಡೆದು ಸ್ವಾವಲಂಬಿಯಾಗಿ ರೂಪುಗೊಳ್ಳುವವರೆಗೂ ಮಠ ನೆರವು ನೀಡುತ್ತಿದೆ. ಈ ಸೇವಾ ಕಾರ್ಯಕ್ಕೆ ಭಕ್ತರು ಬೆನ್ನೆಲುಬಾಗಿ ನಿಂತಿದ್ದಾರೆ.

## ಕಿಟ್ ವಿತರಣೆಗೆ ಗೋದಾಮು ಖಾಲಿ

ಭೋವಿ ಗುರುಪೀಠದಲ್ಲಿ ಭಕ್ತರಿಗೆ ನಿತ್ಯ ದಾಸೋಹ ನಡೆಯುತ್ತದೆ. ಮಠಕ್ಕೆ ಭೇಟಿ ನೀಡಿದ ಭಕ್ತರಿಗೆ ಪ್ರಸಾದ ನೀಡಬೇಕು ಎಂಬುದು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರ ಆಶಯ. ಸ್ವಾಮೀಜಿ ಆಶಯಕ್ಕೆ ಬದ್ಧರಾಗಿ ನಡೆದುಕೊಳ್ಳುವ ಭಕ್ತರು ದಾಸೋಹಕ್ಕೆ ನೆರವಾಗುತ್ತ ಬಂದಿದ್ದಾರೆ. ದವಸ-ಧಾನ್ಯಗಳಿಂದ ಸದಾ ತುಂಬಿರುತ್ತಿದ್ದ ಮಠದ ಗೋದಾಮು ಕೋವಿಡ್ ಕಾಲದಲ್ಲಿ ಒಮ್ಮೆ ಖಾಲಿಯಾಗಿತ್ತು. ಕೋವಿಡ್ ಸಂತ್ರಸ್ತರಿಗೆ ಆಹಾರ ಧಾನ್ಯದ ಕಿಟ್‌ಗಳನ್ನು ಸ್ವಾಮೀಜಿ ಅವರು ಗೋದಾಮು ಖಾಲಿ ಆಗುವವರೆಗೂ ಹಂಚಿದರು.

ಕೋವಿಡ್ ಮೊದಲ ಅಲೆಯನ್ನು ನಿಯಂತ್ರಿಸಲು ಸರ್ಕಾರ ಹೇರಿದ ಲಾಕ್‌ಡೌನ್ ಸಂದರ್ಭದಲ್ಲಿ ಚಿತ್ರದುರ್ಗ ತಾಲ್ಲೂಕಿನ ಗೋಗುದ್ದು ಗ್ರಾಮದಲ್ಲಿ ನಡೆದ ಘಟನೆಯೊಂದು ಆಹಾರ ಧಾನ್ಯದ ಕಿಟ್ ವಿತರಣೆಗೆ ಪ್ರೇರಣೆಯಾಯಿತು. ಭದ್ರಾ ಮೇಲ್ದಂಡೆ ನಾಲೆ ನಿರ್ಮಾಣದ ಕಾಮಗಾರಿಗೆ ಹೊರರಾಜ್ಯದಿಂದ ಬಂದಿದ್ದ ಕಾರ್ಮಿಕರು ಊಟಕ್ಕಾಗಿ ಗ್ರಾಮದಲ್ಲಿ ಭಿಕ್ಷೆ ಬೇಡುತ್ತಿದ್ದ ಸಂಗತಿ ಸ್ವಾಮೀಜಿ ಅವರನ್ನು ತಲುಪಿತು. ಮರುದಿನವೇ ಸ್ಥಳಕ್ಕೆ ತೆರಳಿದ ಸ್ವಾಮೀಜಿ, ಅಗತ್ಯ ಇರುವಷ್ಟು ಆಹಾರ ಧಾನ್ಯ ಪೂರೈಸಿದರು. ಈ ಕಾರ್ಯವನ್ನು ಮುಂದುವರಿಸಲು ನಿರ್ಧರಿಸಿದರು.

'ನಾವೆಂದೂ ಇಂತಹ ಸಂಕಷ್ಟವನ್ನು ಕಂಡಿರಲಿಲ್ಲ. ಅನೇಕರಿಗೆ ಊಟಕ್ಕೂ ತೊಂದರೆ ಉಂಟಾಗಿದ್ದು ನೋಡಿ ಸಂಕಟವಾಯಿತು. ಕಲಾವಿದರು, ಕಾರ್ಮಿಕರು, ಆಟೊ ಹಾಗೂ ಟ್ಯಾಕ್ಸಿ ಚಾಲಕರು, ಅಂಗವಿಕಲರು... ಹೀಗೆ ಹತ್ತಾರು ಸಮುದಾಯವರು ನೆರವು ಕೇಳಿದರು. ಅಂದಾಜು 18 ಸಾವಿರ ಆಹಾರದ ಕಿಟ್‌ಗಳನ್ನು ವಿತರಿಸಲಾಯಿತು' ಎಂದು ನೆನಪಿಸಿಕೊಳ್ಳುತ್ತಾರೆ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ.

### ನೆರೆ ಸಂತ್ರಸ್ತರಿಗೆ ನೆರವು

ಉತ್ತರ ಕರ್ನಾಟಕದಲ್ಲಿ ಕಾಣಿಸಿಕೊಂಡ ನೆರೆಗೆ ತತ್ತರಿಸಿಹೋಗಿದ್ದ ಜನರ ಬದುಕನ್ನು ಮತ್ತೆ ಕಟ್ಟಿಕೊಳ್ಳಲು ನೆರವಾಗಿದ್ದು ಭೋವಿ ಗುರುಪೀಠ. ಜಾತ್ಯತೀತ ತಳಹದಿಯ ಮೇಲೆ ನಿರ್ಮಾಣಗೊಂಡ ಮಠ, ಕಾಯದಲ್ಲಿಯೂ ಈ ತತ್ವ ಪಾಲನೆ ಮಾಡುತ್ತಿದೆ. ನೆರೆ ಹಾವಳಿಯಿಂದ ತೊಂದರೆಗೆ ಸಿಲುಕಿದ ಗ್ರಾಮಗಳಿಗೆ ಭೇಟಿ ನೀಡಿ ಎಲ್ಲ ಸಮುದಾಯದ ಹತ್ತು ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಸಹಾಯ ನೀಡಿದೆ.

'ಬಾಗಲಕೋಟೆ ಜಿಲ್ಲೆಯ ಕೆಲವೆಡೆ ಪ್ರವಾಸ ಮಾಡಿದೆವು. ನೆರೆ ಹಾವಳಿಗೆ ಸಿಲುಕಿ ನಲುಗಿಹೋದ ಜನರ ಬದುಕು ಕಂಡು ಮರುಗಿದೆವು. ಮಕ್ಕಳ ಅಳು, ಹಿರಿಯರ ತೊಳಲಾಟ, ಗರ್ಭಿಣಿಯರ ಸಂಕಟಕ್ಕೆ ಮನಸು ಮರುಗಿತು. ಕೈಲಾದ ಸಹಾಯ ನೀಡಿದೆವು. ನಿತ್ಯ ರಾತ್ರಿ ಪ್ರವಚನ, ಹಗಲು ಹೊತ್ತು ಸೇವೆ ಮಾಡತೊಡಗಿದೆವು. ಜನರ ಅಗತ್ಯವನ್ನು ಅರಿತು ದಾನ ಮಾಡಿದೆವು. ಬಟ್ಟೆ, ಚಪ್ಪಲಿ, ಶೂ, ಜಾನುವಾರು ಮೇವು, ಬೆಚ್ಚನೆಯ ಹೊದಿಕೆ, ಛತ್ರಿ... ಹೀಗೆ ಹಲವು ರೀತಿಯ ನೆರವಿನ ಮಹಾಪೂರವೇ ಹರಿದು ಬಂದಿತು' ಎಂದು ಸ್ಮರಿಸಿಕೊಳ್ಳುತ್ತಾರೆ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ.

## ಸಮುದಾಯ ಕಟ್ಟಿದ ಸ್ವಾಮೀಜಿ

ಅಲೆಮಾರಿ ಹಾಗೂ ಅರೆ ಅಲೆಮಾರಿ ಲಕ್ಷಣಗಳನ್ನು ಹೊಂದಿದ ಭೋವಿ ಸಮುದಾಯವನ್ನು ಕಟ್ಟುವಲ್ಲಿ ಸ್ವಾಮೀಜಿ ಅವರ ಶ್ರಮ ಅಪಾರವಾದುದು. ಕರ್ನಾಟಕದ ಮೂಲೆ-ಮೂಲೆಯ ಭೋವಿ ಕಾಲೊನಿ, ಹಟ್ಟಗಳನ್ನು ಸ್ವಾಮೀಜಿ ಸುತ್ತಿದ್ದಾರೆ. ಇವರ ಪರಿಶ್ರಮದ ಫಲವಾಗಿ ಹಲವು ಗ್ರಾಮಗಳು ವ್ಯಸನಮುಕ್ತವಾಗಿವೆ. ಪ್ರಾಣಿ ಬಲಿ ನಿಷೇಧಕ್ಕೆ ವಾಗ್ದಾನ ನೀಡಿವೆ.

ವರ್ಷಕ್ಕೊಮ್ಮೆ ನಡೆಯುವ ಮಾರಮ್ಮ, ಹುಲಿಗೆಮ್ಮನ ಜಾತ್ರೆಗಳು ಸಮುದಾಯದ ಆರ್ಥಿಕತೆಯ ಮೇಲೆ ಉಂಟುಮಾಡುವ ವ್ಯತಿರಿಕ್ತ ಪರಿಣಾಮಗಳ ಬಗ್ಗೆ ಸ್ವಾಮೀಜಿಗೆ ಸ್ಪಷ್ಟತೆ ಇತ್ತು. ಹೀಗಾಗಿ ಗಳಿಕೆ-ಬಳಕೆ-ಉಳಿಕೆ ಸೂತ್ರವನ್ನು ಭಕ್ತರ ಮುಂದಿಟ

### ನಕಲಿ ಬಿಲ್ ಸೃಷ್ಟಿಸಿ ಬಿಬಿಎಂಪಿಗೆ ₹1.72 ಕೋಟಿ ನಷ್ಟ: ಡಿಎಸ್‌ಎಸ್ ಆರೋಪ

# ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್ ವಿತರಣೆ: ತನಿಖೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬಿಬಿಎಂಪಿಯ ಶಾಲಾ-ಕಾಲೇಜುಗಳಲ್ಲಿ 2020-21ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್, ಬೆಲ್ಟ್ ಹಾಗೂ ಸ್ವೆಟರ್‌ಗಳನ್ನು ವಿತರಿಸಿದ ಬಗ್ಗೆ ಬೋಗಸ್ ಬಿಲ್ ಸೃಷ್ಟಿಸಿ ಬಿಬಿಎಂಪಿಗೆ ಆರ್ಥಿಕ ನಷ್ಟ ಉಂಟು ಮಾಡಲಾಗಿದೆ' ಎಂದು ಆರೋಪಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ದೂರು ನೀಡಿದೆ.

'ಲಾಕ್‌ಡೌನ್ ಸಂದರ್ಭದಲ್ಲಿ ಶಾಲೆಗಳೇ ತೆರೆದಿಲ್ಲ. ಈ ವೇಳೆ ವಿದ್ಯಾರ್ಥಿಗಳಿಗೆ ಶೂ, ಸ್ವೆಟರ್ ಗಳನ್ನು ವಿತರಿಸಲಾಗಿದೆ ಎಂದು ನಕಲಿ ಬಿಲ್‌ಗಳನ್ನು ಸೃಷ್ಟಿಸಿ, ₹1.72 ಕೋಟಿ ಪಾವತಿ ಮಾಡಿಕೊಂಡಿದ್ದು, ಬಿಬಿಎಂಪಿಗೆ ಆರ್ಥಿಕವಾಗಿ ನಷ್ಟವಾಗಿದೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಡಾ.ಸಿ.ಎಸ್. ರಘು ಒತ್ತಾಯಿಸಿದ್ದಾರೆ.

'ಈ ಅಕ್ರಮದ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಪೋಲಾಗಿರುವ ಸಾರ್ವಜನಿಕರ ತೆರಿಗೆ ಹಣವನ್ನು ತಪ್ಪಿತಸ್ಥರಿಂದ ವಸೂಲಿ ಮಾಡಬೇಕು' ಎಂದು ಅವರು ಆಗ್ರಹಿಸಿದರು.

**ಲಾಕ್‌ಡೌನ್ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಶೂ ಮತ್ತು ಸ್ವೆಟರ್ ವಿತರಿಸಿರುವ ಬಗ್ಗೆ ಸಂಶಯ ವ್ಯಕ್ತಪಡಿಸಿ ನೀಡಿರುವ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಶಿಕ್ಷಣ ವಿಭಾಗದ ವಿಶೇಷ ಆಯುಕ್ತರಿಗೆ ಸೂಚನೆ ನೀಡಿದ್ದೇನೆ**
**ಗೌರವ್ ಗುಪ್ತ,**
ಮುಖ್ಯ ಆಯುಕ್ತರು, ಬಿಬಿಎಂಪಿ

### 'ಯಾವುದೇ ಅಕ್ರಮ ನಡೆದಿಲ್ಲ'

'ಯಾವುದೇ ಅಕ್ರಮ ನಡೆದಿಲ್ಲ. ಶೂ, ಸ್ವೆಟರ್ ಸೇರಿದಂತೆ ಎಲ್ಲ ಪರಿಕರಗಳನ್ನು ಸ್ವೀಕರಿಸಲಾಗಿದೆ ಎಂದು ಎಲ್ಲ ಮುಖ್ಯಶಿಕ್ಷಕರು ಸಹಿ ಮಾಡಿದ್ದಾರೆ. ಸ್ವೀಕೃತಿ ಪತ್ರಗಳೂ ಇವೆ. ಪ್ರತಿಯೊಂದಕ್ಕೂ ದಾಖಲೆ ಇದೆ. ಯಾರು ಬೇಕಾದರೂ ಪರಿಶೀಲನೆ ನಡೆಸಬಹುದು' ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ನಿರ್ದೇಶಕ ಹನುಮಂತಯ್ಯ ಪ್ರತಿಕ್ರಿಯಿಸಿದರು.

'2020-21ನೇ ಸಾಲಿನ ಪಾಲಿಕೆಯ ಬಜೆಟ್‌ನಲ್ಲಿ ಬಿಬಿಎಂಪಿ ಶಾಲಾ ಕಾಲೇಜುಗಳಿಗೆ ಅವಶ್ಯವಿರುವ ಮೂಲಸೌಕರ್ಯ ಹಾಗೂ ಇತರ ಸೌಲಭ್ಯಗಳನ್ನು ತುರ್ತಾಗಿ ಒದಗಿಸಲು ಕೆಎಚ್‌ಡಿಸಿ ಹಾಗೂ ಎಂಎಸ್‌ಐಎಲ್ ಮತಿಯಿಂದ ಅಗತ್ಯ ಸಲಕರಣೆಗಳನ್ನು ಖರೀದಿಸಿರುವುದಾಗಿ ಹೇಳಲಾಗಿದೆ. ಈ ಪೈಕಿ, ₹ 400 ಬೆಲೆಯ ಸ್ವೆಟರ್ ಅನ್ನು ₹ 1,400 ಎಂದು ನಮೂದಿಸಿ ಬಿಲ್ ಮಾಡಲಾಗಿದೆ' ಎಂದು ಅವರು ದೂರಿದರು.

'ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ ಅವರು, ಮೊದಲು ಈ ಪರಿಕರಗಳ ಖರೀದಿಗೆ ಅನುಮೋದನೆ ನೀಡಿಲ್ಲ. ಆದರೆ, ಕೆಲವು ತಿಂಗಳು ಕಳೆದ ನಂತರ, ಅಂದರೆ 2021ರ ಮಾರ್ಚ್ 6ರಂದು ಕಾರ್ಯಾದೇಶ ನೀಡಿದ್ದಾರೆ. ಆಗ, ಶಾಲಾ-ಕಾಲೇಜುಗಳು ಪ್ರಾರಂಭವೇ ಆಗಿರಲಿಲ್ಲ. ಅಲ್ಲದೆ, ಕಾರ್ಯಾದೇಶದಲ್ಲಿ ಒಂದು ಕಡೆ ಸ್ವೆಟರ್ ಮತ್ತಿತರ ವಸ್ತುಗಳು ಎಂದು ಉಲ್ಲೇಖಿಸಿದ್ದರೆ ಮತ್ತೊಂದೆಡೆ ಪುಸ್ತಕಗಳನ್ನು ಪೂರೈಸಲಾಗಿದೆ ಎಂದು ನಮೂದಾಗಿದೆ' ಎಂದರು.

'ವಿದ್ಯಾರ್ಥಿಗಳಿಗೆ ಶೂ-ಸ್ವೆಟರ್ ನೀಡಿರುವ ಬಗ್ಗೆ ಒಂದೇ ಒಂದು ಛಾಯಾಚಿತ್ರವನ್ನೂ ವರದಿಯ ಜೊತೆಗೆ ಲಗತ್ತಿಸಿಲ್ಲ. ಕೇವಲ ಶಾಲೆಗಳಿಗೆ ನೀಡಿದ್ದೇವೆ ಎಂದು ಮುಚ್ಚಳಿಕೆ ಆಧಾರದಲ್ಲೇ ಹಣ ಪಾವತಿ ಮಾಡಲಾಗಿದೆ. ಬಿಬಿಎಂಪಿ ಶಿಕ್ಷಣ ವಿಭಾಗದ ಅಧಿಕಾರಿಗಳು ಕೂಡ ಶಾಲಾ ಮುಖ್ಯಶಿಕ್ಷಕರುಗಳಿಂದ ಸುಮ್ಮನೆ ಸಹಿ ಹಾಕಿಸಿಕೊಂಡು ಅಕ್ರಮ ಎಸಗಿದ್ದಾರೆ. ಯಾವುದೇ ಕಾಮಗಾರಿ ಪೂರ್ಣಗೊಂಡು ನಾಲ್ಕಾರು ವರ್ಷ ಕಳೆದರೂ ಬಿಬಿಎಂಪಿಯಿಂದ ಬಿಲ್ ಪಾವತಿಯಾಗಿರುವುದಿಲ್ಲ. ಆದರೆ, ಈ ಪ್ರಕರಣದಲ್ಲಿ ಕಾರ್ಯಾದೇಶವಾಗಿ 15 ದಿನಗಳಲ್ಲಿ ₹1.72 ಕೋಟಿ ಪಾವತಿಯಾಗಿದೆ' ಎಂದೂ ಅವರು ಆರೋಪಿಸಿದರು.

ರೂಪದರ್ಶಿಯೊಬ್ಬರು ಆಭರಣಗಳನ್ನು ಪ್ರದರ್ಶಿಸಿದರು

## ವಜ್ರದ ಆಭರಣಗಳ ಪ್ರದರ್ಶನ

**ಬೆಂಗಳೂರು:** ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಸಂಸ್ಥೆಯು ಕಮ್ಮನಹಳ್ಳಿಯಲ್ಲಿರುವ ತನ್ನ ಮಳಿಗೆಯಲ್ಲಿ ಹಮ್ಮಿಕೊಂಡಿರುವ ವಜ್ರದ ಆಭರಣಗಳ ಪ್ರದರ್ಶನಕ್ಕೆ ಶನಿವಾರ ಚಾಲನೆ ನೀಡಲಾಯಿತು.

'ಮೈನ್' ಹೆಸರಿನ ಈ ಪ್ರದರ್ಶನ ಇದೇ 25ರವರೆಗೂ ನಡೆಯಲಿದೆ. ಗ್ರಾಹಕರು ಇಷ್ಟದ ಆಭರಣಗಳ ಖರೀದಿಗೆ ಅವಕಾಶ ಇದೆ.

'ಒಂಟಿ ಹರಳಿನ ಆಭರಣ, ನವವಧುವನ್ನು ಗಮನದಲ್ಲಿಟ್ಟು ಕೊಂಡು ವಿನ್ಯಾಸ ಮಾಡಿರುವ ನೆಕ್ಲೇಸ್‌ಗಳು, ಪುರುಷರು ಧರಿಸುವ ಆಭರಣಗಳೂ ಲಭ್ಯ ಇವೆ. ಗ್ರಾಹಕರು ಕೊಂಡುಕೊಳ್ಳುವ ವಜ್ರದ ಆಭರಣದ ಮೇಲೆ ಗರಿಷ್ಠ ಶೇಕಡ 20ರಷ್ಟು ರಿಯಾಯಿತಿಯನ್ನೂ ನೀಡಲಾಗಿದೆ' ಎಂದು ಸಂಸ್ಥೆಯ ಪ್ರತಿನಿಧಿಯು ತಿಳಿಸಿದರು.

## 'ಕಾಂಗ್ರೆಸ್‌ನದು ಗೋಸುಂಬೆ ರಾಜಕಾರಣ'

**ಚಿಕ್ಕಮಗಳೂರು:** 'ಕಾಂಗ್ರೆಸ್‌ನವರಿಗೆ ದೂರುವುದಕ್ಕೆ ಮೋದಿ ಬೇಕು, ಒಳ್ಳೆಯದಕ್ಕಾದ್ರೆ ಬೇಡ. ಕಾಂಗ್ರೆಸ್‌ನದು ಗೋಸುಂಬೆ ರಾಜಕಾರಣ' ಎಂದು ಶಾಸಕ ಸಿ.ಟಿ.ರವಿ ಕಟಕಿಯಾಡಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಕೋವಿಡ್ ಪ್ರತಿರೋಧಕ ಲಸಿಕೆಯನ್ನು ಎಲ್ಲರಿಗೂ ಉಚಿತವಾಗಿ ನೀಡುವುದಾಗಿ ಪ್ರಧಾನಿ ಹೇಳಿದಾಗ, ಕಾಂಗ್ರೆಸ್‌ನವರು 'ಥ್ಯಾಂಕ್ಯು ಸುಪ್ರೀಂ ಕೋರ್ಟ್' ಎಂದಿದ್ದರು' ಎಂದರು.

'ಲಸಿಕೆ ಬಗ್ಗೆ ಕಾಂಗ್ರೆಸ್‌ನವರು ಅಪಪ್ರಚಾರ ಮಾಡಿದ್ದರು. ಲಸಿಕೆ ಹಾಕಿಸಿಕೊಂಡರೆ ಮಕ್ಕಳಾಗಲ್ಲ ಎಂದಿದ್ದರು. ಡಿ.ಕೆ.ಶಿವಕುಮಾರ್ 'ಟ್ವೀಟ್' ತೋರಿಸ್ಲಾ? ಸಿದ್ದರಾಮಯ್ಯ ನೀಡಿದ್ದ ಹೇಳಿಕೆ ಹೇಳ್ಲಾ?' ಎಂದು ತಿವಿದರು.

## ರೂಬಿಕ್ಸ್ ಕ್ಯೂಬ್ ಜೋಡಣೆ: ಪುನರ್ವ ಚಂದ್ರಮೌಳಿ ದಾಖಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಚಾಮರಾಜಪೇಟೆಯ ಏಳು ವರ್ಷದ ಪುನರ್ವ ಚಂದ್ರಮೌಳಿ ರೂಬಿಕ್ಸ್ ಕ್ಯೂಬ್ ಜೋಡಣೆಯಲ್ಲಿ ಇಂಟರ್‌ನ್ಯಾಷನಲ್, ಏಷಿಯಾ ಮತ್ತು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗಳಲ್ಲಿ ದಾಖಲೆ ಬರೆದಿದ್ದಾರೆ.

ಕಳೆದ ಏಪ್ರಿಲ್‌ನಲ್ಲಿ ಅತಿ ವೇಗವಾಗಿ ರೂಬಿಕ್ಸ್ ಕ್ಯೂಬ್ ಜೋಡಣೆಯಲ್ಲಿ ಇಂಟರ್‌ನ್ಯಾಷನಲ್ ಬುಕ್ ಆಫ್ ರೆಕಾರ್ಡ್ಸ್, 31 ನಿಮಿಷಗಳಲ್ಲಿ 35 ಬಗೆಯ ರೂಬಿಕ್ಸ್ ಕ್ಯೂಬ್ ಜೋಡಿಸುವ ಮೂಲಕ ಇಂಡಿಯಾ ಬುಕ್ ಆಫ್ ರೆಕಾರ್ಡ್ ಹಾಗೂ ಏಷಿಯಾ ಬುಕ್ ಆಫ್ ರೆಕಾರ್ಡ್ಸ್‌ಗಳಿಗೆ ಸೇರ್ಪಡೆಯಾಗಿದ್ದಾರೆ.

ಕೆ.ಅರುಣಾ ಮತ್ತು ಪಿ.ಜಿ. ಚಂದ್ರಮೌಳಿ ದಂಪತಿಯ ಪುತ್ರಿಯಾಗಿರುವ ಪುನರ್ವ, ರಿಚ್‌ಮಂಡ್ ವೃತ್ತದಲ್ಲಿರುವ ಬಾಲ್ವಿನ್ ಬಾಲಕಿಯ ಶಾಲೆಯಲ್ಲಿ 2ನೇ ತರಗತಿ ಓದುತ್ತಿದ್ದಾರೆ. ಶ್ಲೋಕ ಪಠಿಸುವುದು, ಸ್ಕೇಟಿಂಗ್, ಈಜು, ನೃತ್ಯದಲ್ಲಿ ಆಸಕ್ತಿ ಹೊಂದಿರುವ ಪುನರ್ವ, ನಗರದ ಬ್ರೇನ್ ಸ್ಟುಡಿಯೊ ಸಂಸ್ಥೆಯ ಶ್ರೀನಿವಾಸ ಮೂರ್ತಿ ಅವರಿಂದ ರೂಬಿಕ್ಸ್ ಕ್ಯೂಬ್ ಜೋಡಣೆಯ ತರಬೇತಿ ಪಡೆದಿದ್ದರು.

ಪ್ರಶಸ್ತಿಗಳೊಂದಿಗೆ ಪುನರ್ವ ಚಂದ್ರಮೌಳಿ

## 'ನಿಮ್ಮನ್ನು ಇತರರ ಜೊತೆ ಹೋಲಿಸಿಕೊಳ್ಳದಿರಿ'

**ಬೆಂಗಳೂರು:** 'ನಿಮ್ಮನ್ನು ಬೇರೆಯವರ ಜೊತೆ ಹೋಲಿಸಿಕೊಳ್ಳಬೇಡಿ. ಎಲ್ಲರಿಗೂ ಅವರದ್ದೇ ಆದ ಜ್ಞಾನ ಇರುತ್ತದೆ. ಅದನ್ನು ಅರಿತು ಮುನ್ನಡೆಯಬೇಕು' ಎಂದು ವಿಜ್ಞಾನಿ ಸಂತೋಷ್‌ಕುಮಾರ್ ಪಟ್ನಾಯಕ್, ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪಿಇಎಸ್ ವಿಶ್ವವಿದ್ಯಾಲಯವು ಹಮ್ಮಿಕೊಂಡಿದ್ದ 'ಫಾರ್ಮಸಿ ಮತ್ತು ಜೀವ ವಿಜ್ಞಾನ ಉದ್ಯೋಗಗಳಲ್ಲಿ ಯಶಸ್ಸಿಗೆ ಮಾದರಿ ಬದಲಾವಣೆಗಳು' ವಿಷಯದ ಕುರಿತ ವೆಬಿನಾರ್‌ನಲ್ಲಿ ಶನಿವಾರ ಅವರು ಮಾತನಾಡಿದರು.

'ಪದವಿ, ಸ್ನಾತಕೋತ್ತರ ಪದವಿ ಮುಗಿದ ಕೂಡಲೇ ಕೆಲವರು ಕೆಲಸಕ್ಕಾಗಿ ಎಡತಾಕುತ್ತಾರೆ. ಈ ಪೈಕಿ ಹಲವರಿಗೆ ಸಾಮಾನ್ಯ ಜ್ಞಾನ, ಸಂವಹನ ಕೌಶಲ ಇರುವುದಿಲ್ಲ. ಹೀಗಾಗಿ ಹೊಸಬರಿಗೆ ಕೆಲಸ ನೀಡಲು ಕಂಪನಿಗಳು ಹಿಂದೇಟು ಹಾಕುತ್ತವೆ. ದೊಡ್ಡ ಕಂಪನಿಗಳು ಅಪಾಯವನ್ನು ಮೈಮೇಲೆ ಎಳೆದುಕೊಳ್ಳಲು ಬಯಸುವುದಿಲ್ಲ. ಸಂಸ್ಥೆಗೆ ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುವಾಗ ಅನೇಕ ಮಾನದಂಡಗಳನ್ನು ಅನುಸರಿಸುತ್ತವೆ. ಉದ್ಯೋಗ ಆಕಾಂಕ್ಷಿಗಳ ಜ್ಞಾನಮಟ್ಟವೇನು, ಅವರಿಂದ ಕಂಪನಿಗೆ ಆಗುವ ಲಾಭವೇನು? ಅವರು ಸಮರ್ಥರೇ ಎಂಬುದನ್ನು ಗಮನಿಸುತ್ತವೆ' ಎಂದರು.

'ನಾನು ಏನು ಮಾಡಬೇಕು. ನನ್ನ ಗುರಿ ಏನು ಎಂಬ ಸ್ಪಷ್ಟತೆ ನಮ್ಮಲ್ಲಿರ ಬೇಕು. ನಮ್ಮ ಬೆಳವಣಿಗೆಗೆ ಸಹಕರಿಸುವವರ ಜೊತೆ ಹೆಚ್ಚಿನ ಸಮಯ ಕಳೆಯಬೇಕು. ಅವರು ನೀಡುವ ಸಲಹೆಗಳನ್ನು ಮುಕ್ತವಾಗಿ ಸ್ವೀಕರಿಸಬೇಕು' ಎಂದು ಅವರು ಸಲಹೆ ನೀಡಿದರು.

## ಎನ್‌ಟಿಎಸ್‌ಇ: ಶ್ರೀಚೈತನ್ಯ ಶಾಲೆ ಸಾಧನೆ

**ಬೆಂಗಳೂರು:** ರಾಷ್ಟ್ರೀಯ ಪ್ರತಿಭಾ ಶೋಧ ಪರೀಕ್ಷೆಯ (ಎನ್‌ಟಿಎಸ್‌ಇ) ಎರಡನೇ ಹಂತದ ಫಲಿತಾಂಶ ಪ್ರಕಟವಾಗಿದ್ದು, ಈ ಹಂತದಲ್ಲಿಯೂ ಶ್ರೀ ಚೈತನ್ಯ ಶಾಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ರಾಷ್ಟ್ರಮಟ್ಟದಲ್ಲಿ 155 ವಿದ್ಯಾರ್ಥಿಗಳು ಈ ವಿದ್ಯಾಸಂಸ್ಥೆಯಿಂದಲೇ ಆಯ್ಕೆಯಾಗಿದ್ದಾರೆ.

'ಎನ್‌ಟಿಎಸ್‌ಇ ಎರಡನೇ ಹಂತದ ಪರೀಕ್ಷೆಯಲ್ಲಿ ಕರ್ನಾಟಕದಿಂದ 38 ವಿದ್ಯಾರ್ಥಿಗಳು ನಮ್ಮ ಸಂಸ್ಥೆಯಿಂದಲೇ ಆಯ್ಕೆಯಾಗಿದ್ದಾರೆ' ಎಂದು ಚೈತನ್ಯ ವಿದ್ಯಾಸಂಸ್ಥೆಯ ಸಂಸ್ಥಾಪಕ ಡಾ.ಬಿ.ಎಸ್. ರಾವ್ ಸಂತಸ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸರ್ಕಾರವು ನಡೆಸುವ ಈ ಪರೀಕ್ಷೆಯಲ್ಲಿ ಆಯ್ಕೆಯಾದ ಪ್ರತಿಯೊಬ್ಬ ವಿದ್ಯಾರ್ಥಿಯ ಶಿಕ್ಷಣದ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುತ್ತದೆ.

'ಎನ್‌ಟಿಎಸ್‌ಇ ಪರೀಕ್ಷೆಗಾಗಿಯೇ ನಮ್ಮ ಸಂಸ್ಥೆಯ ಶಾಲೆಗಳಲ್ಲಿ ವಿಶೇಷ ತರಗತಿ ನಡೆಸಲಾಗುತ್ತದೆ. ಪ್ರತಿ ವಿದ್ಯಾರ್ಥಿಯ ಶೈಕ್ಷಣಿಕ ಸಾಧನೆಯ ಮೇಲೆ ವಿಶೇಷ ಗಮನ ಹರಿಸಿ ಬೋಧಿಸುವ ಕಾರಣ ಈ ಸಾಧನೆ ಸಾಧ್ಯವಾಗಿದೆ' ಎಂದು ವಿದ್ಯಾಸಂಸ್ಥೆಯ ನಿರ್ದೇಶಕಿ ಸೀಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 'ಜೈನ್ ಸಮೂಹದಿಂದ ಐತಿಹಾಸಿಕ ಕಲ್ಲುಕಟ್ಟಡ ನವೀಕರಣ'

**ಬೆಂಗಳೂರು:** 'ಮಲ್ಲೇಶ್ವರದ 18ನೇ ತಿರುವಿನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಐತಿಹಾಸಿಕ ಕಲ್ಲು ಕಟ್ಟಡ ನವೀಕರಿಸುವ ಜವಾಬ್ದಾರಿಯನ್ನು ಜೈನ್ ಸಮೂಹ ವಹಿಸಿಕೊಂಡಿದೆ' ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಶನಿವಾರ ತಿಳಿಸಿದರು.

ಜೈನ್ ಸಮೂಹ ಸಂಸ್ಥೆಗಳ ಮುಖ್ಯಸ್ಥ ಚೆನ್‌ರಾಜ್ ರಾಯ್‌ಚಂದ್ ಹಾಗೂ ಇತರ ಅಧಿಕಾರಿಗಳೊಂದಿಗೆ ಕಟ್ಟಡ ಪರಿಶೀಲಿಸಿದ ಬಳಿಕ ಅವರು ಮಾತನಾಡಿದರು.

'ಈ ಕಟ್ಟಡ ನಾಡಿನ ಹೆಮ್ಮೆ. ಇದನ್ನು ಸಂರಕ್ಷಿಸುವುದು ನಮ್ಮ ಜವಾಬ್ದಾರಿ. ಈ ಕಟ್ಟಡ ಹಾಗೂ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಆರ್.ಸಿ.ಕಾಲೇಜಿನ ಕಟ್ಟಡಗಳನ್ನು ನವೀಕರಿಸಲು ನೆರವಾಗುವಂತೆ ಕೇಳಿಕೊಂಡಿದ್ದೆ. ಅದಕ್ಕೆ ಜೈನ್ ಸಮೂಹದವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಈ ಕಟ್ಟಡಗಳು ಪರಂಪರೆಯ ಹೆಗ್ಗುರುತುಗಳು. ನವೀಕರಣದ ಪೂರ್ಣ ವೆಚ್ಚವನ್ನು ಜೈನ್ ಸಮೂಹದವರೇ ಭರಿಸಲಿದ್ದಾರೆ. ಇದು ಸ್ವಾಗತಾರ್ಹ ನಡೆ' ಎಂದು ತಿಳಿಸಿದರು.

## ಉತ್ತರ ಪ್ರದೇಶ: ಕನ್ವರ್ ಯಾತ್ರೆ ರದ್ದು

**ಲಖನೌ(ಪಿಟಿಐ):** ಕೋವಿಡ್ 19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಉತ್ತರ ಪ್ರದೇಶ ಸರ್ಕಾರವು ಈ ಬಾರಿಯ ಕನ್ವರ್ ಯಾತ್ರೆಯನ್ನು ರದ್ದು ಮಾಡಿದೆ.

ಈ ಬಗ್ಗೆ ರಾಜ್ಯದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನವನೀತ್ ಸೆಹಗಲ್ ಅವರು ಶನಿವಾರ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ. ಯಾತ್ರೆಯನ್ನು ಸ್ಥಗಿತಗೊಳಿಸುವಂತೆ ಕನ್ವರ್ ಸಂಘಗಳಿಗೆ ಉತ್ತರ ಪ್ರದೇಶ ಸರ್ಕಾರವು ಮನವಿ ಮಾಡಿತ್ತು. ಅದರಂತೆ ಸಂಘಗಳು ಯಾತ್ರೆ ರದ್ದು ಮಾಡಿವೆ. ಯಾತ್ರೆಗೆ ಉತ್ತರ ಪ್ರದೇಶ ಸರ್ಕಾರವು ಈ ಮೊದಲು ಅನುಮತಿ ನೀಡಿತ್ತು. ಈ ಬಗ್ಗೆ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತವಾಗಿ ಮೊಕದ್ದಮೆ ದಾಖಲಿಸಿಕೊಂಡು ವಿಚಾರಣೆ ಆರಂಭಿಸಿತ್ತು.

'ಧಾರ್ಮಿಕ ಆಚರಣೆಗಳಿಗಿಂತಲೂ ದೇಶದ ನಾಗರಿಕರ ಬದುಕುವ ಹಕ್ಕು ಮುಖ್ಯ. ಹಾಗಾಗಿ, ಕನ್ವರ್ ಯಾತ್ರೆಗೆ ಅನುಮತಿ ನೀಡಿರುವ ನಿರ್ಧಾರವನ್ನು ಮರುಪರಿಶೀಲಿಸಬೇಕು' ಎಂದು ಉತ್ತರ ಪ್ರದೇಶ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ಸೂಚಿಸಿತ್ತು.

## ಆರೋಗ್ಯ ತಪಾಸಣೆ ಇಂದು

**ರಾಜರಾಜೇಶ್ವರಿ ನಗರ:** ಶಾಂತ ಮಲ್ಲಿಸ್ವೆಷಾಲಿಟಿ ಆಸ್ಪತ್ರೆಯ ವತಿಯಿಂದ ಜುಲೈ 18ರಂದು ಬೆಳಿಗ್ಗೆ 8ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿದೆ. ಕಣ್ಣು, ಕಿವಿ, ಮೂಗು, ಮಧುಮೇಹ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಉಚಿತ ಚಿಕಿತ್ಸೆ ಹಾಗೂ ಔಷಧ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. **ವಿಳಾಸ:** ವೆಂಕಟೇಶ್ವರ ಕಾಂಪ್ಲೆಕ್ಸ್, ಬಿ.ಇ.ಎಲ್ ಬಡಾವಣೆ, ಮಾಗಡಿ ರಸ್ತೆ ಸಂಪರ್ಕಕ್ಕೆ: 84949 44985.

RAMRAJ©
face mask
WASHABLE & REUSABLE
WOVEN FABRIC
MADE IN INDIA
2 LAYER | FIT TO ALL | ANTI DUST | PERFECT FIT | ANTI BACTERIAL | ANTI POLLUTION
UNISEX DESIGN | SOFT ELASTIC EARLOOP | SOFT TOUCH CARBON FINISH FABRIC
Special concession for all corporate order.
Contact : 73730 45147
SHOWROOMS
KEMPEGOWDA ROAD | MALLESHWARAM | KORAMANGALA | BASAVESHWAR NAGAR | RR NAGAR | YESHWANTHPUR
VIJAYA NAGAR | RAJAJI NAGAR | BASAVANAGUDI | JAYA NAGAR | HOSPET | BANASHANKARI | R.T NAGAR
KANAKAPURA | TUMKUR | RAMNAGARA | HESARAGATTA | NELAMANGALA | RAMAMURTHY NAGAR | JP NAGAR | CHINTAMANI
Available at company showroom & all leading textile shops / www.ramrajcotton.in

ಪಂಜಾಬ ನೆಶನಲ ಬೆಂಕ punjab national bank ...ಭರೋಸೆ ಕಾ ಪ್ರತೀಕ! ...the name you can BANK upon!
ವಲಯ ಕಚೇರಿ ಹೈದರಾಬಾದ್ 6-1-73, 2ನೇ ಮಹಡಿ, ಸಯೀದ್ ಪ್ಲಾಜಾ, ಲಕಡಿ-ಕಾ-ಪೂಲ್, ಹೈದರಾಬಾದ್-500 004, ಫೋನ್: 040-23233088, ಇಮೇಲ್ ಐಡಿ: zohydgad@pnb.co.in
ನಿಯೋಜನೆಗಾಗಿ ಅರ್ಜಿ ಆಹ್ವಾನ ಪ್ರಕಟಣೆ
ಪಂಜಾಬ್ ನ್ಯಾಷನಲ್ ಬ್ಯಾಂಕ್ ವಲಯ ಕಚೇರಿ, ಹೈದರಾಬಾದ್ ಇವರು, ತಮ್ಮ ವ್ಯಾಪ್ತಿಯಲ್ಲಿನ ಶಾಖೆಗಳು/ಕಚೇರಿಗಳು/ಎಟಿಎಂ ಕೇಂದ್ರಗಳಾದ್ಯಂತ ಸಮಗ್ರ ವಿದ್ಯುತ್ ಸುರಕ್ಷತಾ ಪರಿಶೋಧನೆ ಕೈಗೊಳ್ಳಲು, ವಿದ್ಯುತ್ ಸುರಕ್ಷತಾ ಪರಿಶೋಧಕರು/ಪರಿಶೋಧನಾ ಸಂಸ್ಥೆಗಳನ್ನು ನಿಯೋಜಿಸಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಸದರಿ ನಿಯೋಜನೆಗೆ ಸಂಬಂಧಿತ ನಮೂನೆಗಳನ್ನು ಮತ್ತು ಇನ್ನಿತರ ವಿವರಗಳನ್ನು www.pnbindia.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ನಿಯೋಜನೆಗೆ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ 02/08/2021 ರಂದು 17.00 ಗಂಟೆವರೆಗೆ.
ಮೇಲ್ಕಾಣಿಸಿದ ಕಾಮಗಾರಿಗೆ ಸಂಬಂಧಿಸಿದಂತೆ ಯಾವುದೇ 

ಪರಸ್ಪರ ಅಂತರ ಕಾಯ್ದುಕೊಳ್ಳಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪೌಷ್ಟಿಕ ಆಹಾರ ಸೇವಿಸಿ

# ಲಿಂಗಾಯತರು ಬಿಜೆಪಿ ಆಸ್ತಿಯಲ್ಲ: ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಕಲಬುರ್ಗಿ: 'ಬಿಜೆಪಿಯವರು ಲಿಂಗಾಯತರನ್ನು ತಮ್ಮ ಆಸ್ತಿ ಎಂದು ತಿಳಿದುಕೊಂಡಿದ್ದಾರೆ. ಆ ಸಮುದಾಯದಲ್ಲಿ ಕಾಂಗ್ರೆಸ್ ಬೆಂಬಲಿಸುವವರೂ ಇದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ಕಾಂಗ್ರೆಸ್‌ನಲ್ಲಿ ಲಿಂಗಾಯತ ಸಮುದಾಯದ ಎಂ.ಬಿ. ಪಾಟೀಲ, ಎಸ್.ಆರ್. ಪಾಟೀಲ, ಈಶ್ವರ ಖಂಡ್ರೆ ಅವರಂತಹ ನಾಯಕರೂ ಇದ್ದಾರೆ' ಎಂದು ಶನಿವಾರ ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

# 'ಎಸ್ಸೆಸ್ಸೆಲ್ಸಿ ಪರೀಕ್ಷೆ ನಾಳೆ: ಸಿದ್ಧತೆ ಪೂರ್ಣ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 2020-21ನೇ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ಸರಳೀಕೃತ ವ್ಯವಸ್ಥೆಯಲ್ಲಿ ಇದೇ 19 ಮತ್ತು 22ರಂದು ನಡೆಯಲಿದ್ದು, ಎಲ್ಲ ಸಿದ್ಧತೆ ಪೂರ್ಣಗೊಂಡಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

'ಕಳೆದ ಬಾರಿಗಿಂತ ಈ ಬಾರಿ ಹೆಚ್ಚಿನ ಸಿದ್ಧತೆಗಳನ್ನು ಮಾಡಲಾಗಿದೆ. 14,929 ಪ್ರೌಢಶಾಲೆಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ನೋಂದಾಯಿಸಿದ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಆಯಾ ಮುಖ್ಯೋಪಾಧ್ಯಾಯರು ಮಂಡಳಿಯ ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಂಡು ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ನೀಡಿದ್ದಾರೆ. ಪ್ರವೇಶ ಪತ್ರ ಪಡೆಯಲು ಸಾಧ್ಯವಾಗದೇ ಇದ್ದರೆ, ಸಂಬಂಧಿಸಿದ ಬಿಇಒ ಅಥವಾ ಡಿಡಿಪಿಐಗಳನ್ನು ಸಂಪರ್ಕಿಸಿ ಪಡೆಯಬಹುದು. ಇದರ ಸಮನ್ವಯಕ್ಕೆ ಜಿಲ್ಲಾ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ' ಎಂದರು.

**ಅಂಕಿ-ಅಂಶಗಳು**

**8,76,508**
ಪರೀಕ್ಷೆಗೆ ನೋಂದಾಯಿತ ವಿದ್ಯಾರ್ಥಿಗಳು

**4,884**
ಒಟ್ಟು ಪರೀಕ್ಷಾ ಕೇಂದ್ರಗಳು

**1,19,469**
ಪರೀಕ್ಷಾ ಪ್ರಕ್ರಿಯೆಗೆ ನಿಯೋಜಿತ ಸಿಬ್ಬಂದಿ

'ಎಲ್ಲ ಪರೀಕ್ಷಾ ಕೇಂದ್ರಗಳು ಮತ್ತು ಆವರಣವನ್ನು ಭಾನುವಾರ (ಜುಲೈ 16) ಸ್ಯಾನಿಟೈಜ್ ಮಾಡಲಾಗುವುದು. ಪರೀಕ್ಷೆ ಮುಗಿದ ಬಳಿಕವೂ ಸ್ಯಾನಿಟೈಜ್ ಮಾಡಲಾಗುತ್ತದೆ. ಲಸಿಕೆ ಪಡೆದ ವರನ್ನಷ್ಟೇ ಪರೀಕ್ಷಾ ಪ್ರಕ್ರಿಯೆಯಲ್ಲಿ ಭಾಗವಹಿಸಲಿದ್ದಾರೆ. ಪರೀಕ್ಷಾ ಕೊಠಡಿಯಲ್ಲಿ 12 ಮಕ್ಕಳಿರಬೇಕು. ಒಂದು ಡೆಸ್ಕ್‌ಗೆ ಒಬ್ಬ ಪರೀಕ್ಷಾರ್ಥಿ ಇರಲಿದ್ದಾರೆ. ಈ ಬಾರಿ ಪರೀಕ್ಷಾ ಕೇಂದ್ರಗಳನ್ನು ದ್ವಿಗುಣಗೊಳಿಸಲಾಗಿದೆ. ಕೊಠಡಿಗಳನ್ನು ಮೂರು ಪಟ್ಟು ಹೆಚ್ಚಿಸಲಾಗಿದೆ' ಎಂದರು.

'ಕೆಮ್ಮು, ನೆಗಡಿ, ಜ್ವರ ಲಕ್ಷಣಗಳಿರುವ ವಿದ್ಯಾರ್ಥಿಗಳಿಗಾಗಿ ಪ್ರತಿ ಕೇಂದ್ರದಲ್ಲಿ ಎರಡು ವಿಶೇಷ ಕೊಠಡಿಗಳನ್ನು ಕಾಯ್ದಿರಿಸಲಾಗಿದೆ. ಸಿಬ್ಬಂದಿ ಮತ್ತು ಪರೀಕ್ಷಾರ್ಥಿಗಳು ಪರೀಕ್ಷಾ ಕೇಂದ್ರದ ಪ್ರವೇಶವಾದೊಡನೆ ಆರೋಗ್ಯ ತಪಾಸಣಾ ಕೇಂದ್ರ ಪ್ರವೇಶಿಸುವರು. ಆರೋಗ್ಯ ಕೇಂದ್ರಗಳು ಬೆಳಿಗ್ಗೆ 8.30ಕ್ಕೆ ಅರಂಭವಾಗಿ ಪರೀಕ್ಷಾ ಪ್ರಕ್ರಿಯೆ ಮುಗಿಯುವವರೆಗೆ ತೆರೆದಿರಲಿವೆ. ಥರ್ಮಲ್ ಸ್ಕ್ಯಾನರ್, ಪಲ್ಸ್ ಆಕ್ಸಿಮೀಟರ್, ಪ್ರಥಮ ಚಿಕಿತ್ಸಾ ಪೆಟ್ಟಿಗೆಗಳು ಇರಲಿವೆ. ಮಾಸ್ಕ್ ಧರಿಸದ ವಿದ್ಯಾರ್ಥಿಗಳಿಗೆ ಆರೋಗ್ಯ ಕೇಂದ್ರಗಳಲ್ಲೇ ಮಾಸ್ಕ್ ನೀಡಲಾಗುವುದು' ಎಂದರು.

**ಕೋವಿಡ್ ಕೇರ್ ಸೆಂಟರ್ ಸ್ಥಾಪನೆ:** ಪರೀಕ್ಷಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದ್ದರೆ ಅಂಥವರಿಗೆ ತಾಲ್ಲೂಕಿಗೊಂದು ಕೋವಿಡ್ ಆರೈಕೆ ಕೇಂದ್ರಗಳನ್ನು ಸ್ಥಾಪಿಸಿ, ಅಲ್ಲಿಯೇ ಪರೀಕ್ಷೆ ಬರೆಯಲು ವ್ಯವಸ್ಥೆ ಮಾಡಲಾಗುತ್ತದೆ. ಕುಟುಂಬದಲ್ಲಿ ಯಾರಿಗಾದರೂ ಸೋಂಕು ತಗುಲಿದ್ದು, ಪರೀಕ್ಷಾರ್ಥಿ ಐಸೋಲೇಷನ್‌ನಲ್ಲಿದ್ದರೆ ಅವರನ್ನು ತಪಾಸಣೆ ನಡೆಸಿ ಆರೋಗ್ಯವಾಗಿರುವುದು ಕಂಡುಬಂದರೆ ಸಮೀಪದ ವಿದ್ಯಾರ್ಥಿ ಕೋವಿಡ್ ಆರೈಕೆ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುತ್ತದೆ. ಈ ಕೇಂದ್ರದಲ್ಲಿ ಒಂದು ಅಂಬುಲೆನ್ಸ್ ವಾಹನ ಕಾಯ್ದಿರಿಸಲಾಗುವುದು' ಎಂದೂ ವಿವರಿಸಿದರು.

---

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಧಾರವಾಡ
**ಕಾರ್ಯನಿರ್ವಾಹಕ ಇಂಜಿನೀಯರವರ ಕಚೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಧಾರವಾಡ**

ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಕ.ಇಂ.2/ಇ-ಟೆಂಡರ/2021-22/706 ದಿನಾಂಕ:16/07/2021

**ಅಲ್ಪಾವಧಿ ಟೆಂಡರ ಪ್ರಕಟಣೆ - 18/2021-22 (ಇ-ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)**

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜನೀಯರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಧಾರವಾಡ ಇವರಿಂದ 2020-21 ನೇ ಸಾಲಿನ ಜೆ.ಜೆ.ಎಮ್. ಯೋಜನೆಯಡಿಯಲ್ಲಿ ಅಹ್ವಾನಿಸಲಾದ ಐಟಂವಾರು ಟೆಂಡರನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 2000 ಹಾಗೂ Standard Document ನಂತೆ KW- 1 & KW-2, KW-3, KW-4 ತನ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಗಾಗಿ ಭಾಗವಹಿಸಬಹುದು ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು.

**ಗುತ್ತಿಗೆ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ (Calander of Events)**

1) ಖಾಲಿ ಟೆಂಡರ ಫಾರ್ಮಗಾಗಿ ಇ-ಪ್ರೊಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೈಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ : **02.08.2021 ಸಾಯಂಕಾಲ 4.00 ಘಂಟೆಗೆ**

2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **03.08.2021 ಸಾಯಂಕಾಲ 4.30 ಘಂಟೆಗೆ**

3) ಆರ್ಥಿಕ ಬಿಡ್ ತೆರೆಯುವ ದಿನಾಂಕ (Two cover) : ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ

**ಗುತ್ತಿಗೆದಾರರ ಅರ್ಹತೆ: ಇ-ಪೋರ್ಟಲ್‌ನಲ್ಲಿ ಇದ್ದಂತೆ ಕಾಮಗಾರಿಯ ವಿವರ ಈ ಕೆಳಗಿನಂತಿದೆ.**

| ಕ್ರ.ಸಂ. | ಕಾಮಗಾರಿ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಕಾಮಗಾರಿ ಪೂರ್ಣ ಗೊಳಿಸುವ ಕಾಲಾವಧಿ | ವರ್ಗ |
|---|---|---|---|---|
| 1 | **Indent No:30483** Providing FHTC's to 778 Households in BANDIWAD habitation of BANDIWAD village, Hubballi taluk Dharwad district by Augmentation of SVS BANDIWAD villages in Dharwad district (40 LPCD) | 249.00 | 180 ದಿನಗಳು | ಸಾಮಾನ್ಯ |
| 2 | **Indent No30480:** Providing FHTC's to 1009 Households in Adaragunchi habitation of Adaragunchi village, Hubballi taluk Dharwad district by Augmentation of SVS Adaragunchi villages in Dharwad district (44.67 LPCD) | 234.00 | 180 ದಿನಗಳು | ಸಾಮಾನ್ಯ |

ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತೀಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಂ.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ **www.eproc.karnataka.gov.in** ನಲ್ಲಿ ಪಡೆಯಬಹುದು. ಟೆಂಡರ ಫಾರ್ಮುಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಆಸಕ್ತ ಗುತ್ತಿಗೆದಾರರು ವಿವರಗಳನ್ನು ಮತ್ತು ಷರತ್ತುಗಳನ್ನು ವೆಬ್‌ಸೈಟ್ **www.eproc.karnataka.gov.in** ನಲ್ಲಿ ಲಾಗ್‌ಇನ್ ಮಾಡಿ ನೋಡಬಹುದು. ಸದರಿ ಟೆಂಡರನಲ್ಲಿ ತಿದ್ದುಪಡಿಗಳಿದ್ದಲ್ಲಿ ಇ-ಪ್ರೊಕ್ಯೂರಮೆಂಟ ವೆಬಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ಸಹಿ/- ಕಾರ್ಯನಿವಾಹಕ ಇಂಜನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಧಾರವಾಡ.

ವಾ.ಸಾ.ಇ./ಧಾ/280/2021-22/ದೇಶಪಾಂಡೆಪಬ್ಲಿಸಿಟಿ

**ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯುತ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.**




---

## ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ನಂ:ದಾಮಪಾ:ಕಾಅ2:ಇ.ಟೆಂಡರ್:11:2021-22 ದಿನಾಂಕ: 15-07-2021

**ಟೆಂಡರ್ ಪ್ರಕಟಣೆ** (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999-2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ನೊಂದಾಯಿತ ಅರ್ಹ ಸರಬರಾಜುದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಡಬಲ್ ಕವರ್ ಪದ್ಧತಿಯಲ್ಲಿ ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು/ ಏಜನ್ಸಿದಾರರು/ಸರಬರಾಜುದಾರರು ಇ-ಪ್ರಕ್ಯೂರ್‌ಮೆಂಟ್ ವೆಬ್ ಸೈಟ್ **www.eproc.karnataka.gov.in** ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ಪ್ರಕಟಣೆಯ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ **www.davanagerecity.mrc.gov.in** ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಪಾಲಿಕೆಯ ಕಛೇರಿ ವೇಳೆಯಲ್ಲಿ ಹಾಗೂ ಇ-ಪ್ರಕ್ಯೂರ್‌ಮೆಂಟ್ ಸಹಾಯಕ ದೂರವಾಣಿ ಸಂಖ್ಯೆ: **+91-8046010000 +91-8068948777** ರಿಂದ ಮಾಹಿತಿ ಪಡೆಯಬಹುದು.

| ಕ್ರ.ಸಂ. | CATEGORY | ಇ-ಪ್ರಕ್ಯೂರ್‌ಮೆಂಟ್ ಉಲ್ಲೇಖ | ಬಿಡ್ ನಂ | ಕಾಮಗಾರಿಯ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಟೆಂಡರ್‌ಗೆ ಇಟ್ಟಿರುವ ಮೊತ್ತ (ರೂ.ಗಳಲ್ಲಿ) | ಗುತ್ತಿಗೆದಾರರ ದರ್ಜೆ | ಟೆಂಡರ್ ನಮೂನೆ | ಕಾಮಗಾರಿ ಪೂರ್ಣ ಗೊಳಿಸಲು ಬೇಕಾದ ಅವಧಿ ಮಳೆಗಾಲ ಸೇರಿ |
|---|---|---|---|---|---|---|---|---|---|
| | | | | ಸ್ವಚ್ಛ ಭಾರತ್ ಮಿಷನ್ ಯೋಜನೆ : | | | | | |
| 1 | – | DMA/ 2021-22/ IND 12287 | – | 1) ತ್ಯಾಜ್ಯ ಸಂಸ್ಕರಣೆಗಾಗಿ 200 ಟಿಪಿಡಿ ಸಾಮರ್ಥ್ಯದ 01 ಸಂಖ್ಯೆ ತ್ಯಾಜ್ಯ ಸಂಸ್ಕರಣಾ ಸೌಲಭ್ಯ ಖರೀದಿಸಿ ಅಳವಡಿಸುವುದು. 2) ತ್ಯಾಜ್ಯ ಸಂಸ್ಕರಣೆಗಾಗಿ 01 ಸಂಖ್ಯೆ ಆಟೋಮಾಟಿಕ್ ಬೇಲಿಂಗ್ ಯಂತ್ರ ಖರೀದಿಸಿ ಅಳವಡಿಸುವುದು. | 463.00 | – | ನೊಂದಾಯಿತ ಏಜನ್ಸಿ | KG-2 (TWO COVER) | 4 ತಿಂಗಳು |

ಸೂಚನೆ : ಈ ಪ್ರಕಟಣೆಯಲ್ಲಿನ ಅಂದಾಜು ಮೊತ್ತ, ಟೆಂಡರ್‌ಗಿಟ್ಟ ಮೊತ್ತ, ದಿನಾಂಕ ಮತ್ತು ಇತರೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ. (1) ಪ್ರೀ ಬಿಡ್ ಮೀಟಿಂಗ್ ದಿನಾಂಕ & ವೇಳೆ : **04-08-2021** ಸಮಯ : 11.00 (2) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ: **30-08-2021** ಸಮಯ : 16.30 (3) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **30-08-2021** ಸಮಯ : 17.00 (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ: **01-09-2021** ಸಮಯ : 11.00 (5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ವೇಳೆ: **03-09-2021** ಸಮಯ : 11.00 (1) ಕಾಮಗಾರಿಗಳು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಜಿ-2 ರ ನಿಬಂಧನೆಗಳಿಗೆ ಒಳಪಟ್ಟಿರುತ್ತವೆ. (2) ಷರತ್ತುಗಳನ್ನೊಳಗೊಂಡ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. (3) ಹೆಚ್ಚಿನ ಮಾಹಿತಿಯನ್ನು ಮಹಾನಗರ ಪಾಲಿಕೆಯ ಅಭಿಯಂತರರನ್ನು ಕಛೇರಿ ವೇಳೆಯಲ್ಲಿ ಖುದ್ದಾಗಿ ಬೇಟಿ ಮಾಡಿ ಪಡೆಯಬಹುದು ಮತ್ತು ಇತರೆ ಮಾಹಿತಿಗಾಗಿ ಮಹಾನಗರ ಪಾಲಿಕೆಯ ದೂರವಾಣಿ ಸಂಖ್ಯೆ. 08192-234444 ಸಂಪರ್ಕಿಸಬಹುದು.

ವಾಸಾಇ/ದಾವಣಗೆರೆ/234/ಎಂಸಿಎ/2021-22

ಸಹಿ/- ಆಯುಕ್ತರು ಮಹಾನಗರ ಪಾಲಿಕೆ, ದಾವಣಗೆರೆ.

---

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವಕ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು - 560001. ದೂರವಾಣಿ: 080-22215601, 22211246 ಫ್ಯಾಕ್ಸ್: 22215602

ಸಂ. ಡಿವೈಇಎಸ್/ತಾಂಶಾ/ಕ್ರೀ.ಯೋ/105/2020-21 ದಿನಾಂಕ: 17.07.2021

**ಟೆಂಡರ್ ಪ್ರಕಟಣೆ** (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) **(5ನೇ ಕರೆ)**

ಉಪ ನಿರ್ದೇಶಕರು (ಆಡಳಿತ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವಕ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560001, ಕರ್ನಾಟಕ, ಭಾರತ ಇವರು ಕರ್ನಾಟಕ ರಾಜ್ಯದಲ್ಲಿರುವ ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಅಳವಡಿಸುತ್ತಿರುವ 400ಮೀ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್‌ಗೆ ಅವಶ್ಯವಿರುವ ಅಥ್ಲೆಟಿಕ್ ಕ್ರೀಡಾ ಉಪಕರಣ/ ಸಾಮಗ್ರಿಗಳನ್ನು ಸರಬರಾಜು ಮಾಡಲು, ಗುತ್ತಿಗೆದಾರರನ್ನು ನೇಮಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದೆ.

ಕಾಮಗಾರಿ ವಿವರ : ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಅಳವಡಿಸುತ್ತಿರುವ 400 ಮೀ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್‌ಗೆ ಅವಶ್ಯವಿರುವ ಅಥ್ಲೆಟಿಕ್ ಕ್ರೀಡಾ ಉಪಕರಣ / ಸಾಮಗ್ರಿಗಳನ್ನು ಸರಬರಾಜು ಮಾಡುವ ಕುರಿತು

ಟೆಂಡರ್ ಮೊತ್ತ : ರೂ. 21,85,800/-

ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

1) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **26.07.2021** ಸಮಯ **16.00** ಗಂಟೆ.

2) ಹಣಕಾಸು ಬಿಡ್ ತೆರೆಯುವ ದಿನಾಂಕ: **27.07.2021** ಸಮಯ **16.30** ಗಂಟೆ

ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/-
ಉಪ ನಿರ್ದೇಶಕರು (ಆಡಳಿತ)
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

DIPR/DDU/ZEN/R.O:876/2021-22

**ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.**




---

## ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು-572 103,
ದೂರವಾಣಿ : 0816-2254546

ಸಂಖ್ಯೆತುವಿ/ತಾವಿ/ಟೆಂ.ಪ್ರ/2021-22/**01** ದಿನಾಂಕ: **15.07.2021**

**ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)**

ತುಮಕೂರು ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ವಿಭಾಗದಿಂದ ಈ ಕೆಳಕಂಡ ವಿದ್ಯುತ್ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.

| ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ (ರೂಗಳಲ್ಲಿ) | ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ | ಗುತ್ತಿಗೆದಾರರ ದರ್ಜೆ |
|---|---|---|---|---|
| ತುಮಕೂರು ವಿಶ್ವವಿದ್ಯಾನಿಲಯದ ಕಲಾ ಕಾಲೇಜಿನ ಮುಂಭಾಗ ಹಾಗೂ ವಿಜ್ಞಾನ ಕಾಲೇಜಿನ ಆಟದ ಮೈದಾನದಲ್ಲಿ ಕೊರೆದಿರುವ ಕೊಳವೆ ಬಾವಿಗಳಿಗೆ ಪಂಪ

ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ 243ಕ್ಕೆ ಹೆಚ್ಚಳ: ಸಮಿತಿ ರಚನೆಯಾಗಿ 9 ತಿಂಗಳ ಬಳಿಕ ಮೊದಲ ಸಭೆ

# ವಾರ್ಡ್‌ಗಳ ಮರುವಿಂಗಡಣೆ ಪ್ರಕ್ರಿಯೆ ಶುರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ಕೌನ್ಸಿಲ್‌ನ ಒಟ್ಟು ಸದಸ್ಯರ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಿಸಿ ನಗರಾಭಿವೃದ್ಧಿ ಇಲಾಖೆಯು ಅಧಿಸೂಚನೆ ಹೊರಡಿಸಿ 9 ತಿಂಗಳ ಬಳಿಕ ಬಿಬಿಎಂಪಿ ಮುಖ್ಯ ಆಯುಕ್ತರ ಅಧ್ಯಕ್ಷತೆಯ ಅಧ್ಯಕ್ಷತೆಯ ಸಮಿತಿಯು ಶನಿವಾರ ತನ್ನ ಮೊದಲ ಸಭೆಯನ್ನು ನಡೆಸಿದೆ. ಇದರೊಂದಿಗೆ ಬಿಬಿಎಂಪಿ ವ್ಯಾಪ್ತಿ ವಿಸ್ತರಣೆ, ವಾರ್ಡ್‌ಗಳ ಹಾಗೂ ವಲಯಗಳ ಮರುವಿಂಗಡಣೆ ಪ್ರಕ್ರಿಯೆಗೆ ಅಧಿಕೃತ ಚಾಲನೆ ಸಿಕ್ಕಂತಾಗಿದೆ.

ಸರ್ಕಾರ 2020ರ ಮಾರ್ಚ್ 24ರಂದು ಬಿಬಿಎಂಪಿ ಮಸೂದೆಯನ್ನು ವಿಧಾನಮಂಡಲದಲ್ಲಿ ಮಂಡಿಸಿತ್ತು. ಈ ಮಸೂದೆಯನ್ನು ಶಾಸಕ ಎಸ್. ರಘು ಅಧ್ಯಕ್ಷತೆಯ ವಿಧಾನ ಮಂಡಲದ ಜಂಟಿ ಸಲಹಾ ಸಮಿತಿಯ ಪರಾಮರ್ಶೆಗೆ ಒಪ್ಪಿಸಲಾಗಿತ್ತು. ಸಮಿತಿಯು 2020ರ ಸೆ. 15ರಂದು ವಿಧಾನಸಭಾಧ್ಯಕ್ಷರಿಗೆ ಮಧ್ಯಂತರ ವರದಿಯನ್ನು ಸಲ್ಲಿಸಿತ್ತು. ಬಿಬಿಎಂಪಿ ಮಸೂದೆ ಅಂತಿಮಗೊಳ್ಳದ ಕಾರಣ ಸದ್ಯಕ್ಕೆ ವಾರ್ಡ್‌ಗಳ ಸಂಖ್ಯೆಯನ್ನು ಹೆಚ್ಚಿಸಲು 1976ರ ಕೆಎಂಸಿ ಕಾಯ್ದೆಗೆ ತಿದ್ದುಪಡಿ ತರಬೇಕು. ಬಿಬಿಎಂಪಿಯ ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 250ಕ್ಕೆ ಹೆಚ್ಚಿಸಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು.

ಸಮಿತಿಯ ಶಿಫಾರಸನ್ನು ಒಪ್ಪಿದ್ದ ಸರ್ಕಾರ ವಾರ್ಡ್‌ಗಳ ಸಂಖ್ಯೆಯನ್ನು ಗರಿಷ್ಠ 250ಕ್ಕೆ ಹೆಚ್ಚಿಸಲು ಅವಕಾಶ ಕಲ್ಪಿಸಿ 1976ರ ಕೆಎಂಸಿ ಕಾಯ್ದೆಗೆ ತಿದ್ದುಪಡಿ ತಂದಿತ್ತು. 2020ರ ಅ. 14ರಂದು ನಗರಾಭಿವೃದ್ಧಿ ಇಲಾಖೆಯು ಬಿಬಿಎಂಪಿ ಕೌನ್ಸಿಲ್ ಸದಸ್ಯರ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಿ ಅಧಿಸೂಚನೆ ಹೊರಡಿಸಿತ್ತು. ವಾರ್ಡ್‌ಗಳ ಮರುವಿಂಗಡಣೆಗಾಗಿ ಬಿಬಿಎಂಪಿ ಆಯುಕ್ತರ ಅಧ್ಯಕ್ಷತೆಯಲ್ಲಿ ಅದೇ ದಿನ ಸಮಿತಿಯನ್ನೂ ರಚಿಸಲಾಗಿತ್ತು. ಈ ಸಮಿತಿಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು, ಬಿಬಿಎಂಪಿಯ ವಿಶೇಷ ಆಯುಕ್ತರು (ಕಂದಾಯ) ಸದಸ್ಯರಾಗಿದ್ದಾರೆ.

'ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಿ ವಾರ್ಡ್ ಮರುವಿಂಗಡಣೆ ಮಾಡುವ ಕುರಿತು ಸಮಿತಿಯು ಮೊದಲ ಸಭೆಯನ್ನು ಶನಿವಾರ ನಡೆಸಿದ್ದೇವೆ. ಈ ಕುರಿತು ಏನೆಲ್ಲ ಸಿದ್ಧತೆ ನಡೆಸಲಾಗಿದೆ ಎಂಬ ಕುರಿತು ಸಮಾಲೋಚನೆ ನಡೆಸಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

'ಬಿಬಿಎಂಪಿಗೆ ಯಾವೆಲ್ಲ ಪ್ರದೇಶಗಳು ಸೇರ್ಪಡೆ ಆಗಬೇಕಿದೆ ಎಂಬ ಕುರಿತು ಸಲ್ಲಿಕೆ ಆಗಿರುವ ಬೇರೆ ಬೇರೆ ಪ್ರಸ್ತಾವನೆಗಳು ಬೇರೆ ಬೇರೆ ಹಂತದಲ್ಲಿವೆ. ಈ ಬಗ್ಗೆ ಈ ಹಂತದಲ್ಲಿ ಏನೂ ಹೇಳಲಾಗದು. ಕೆಲವು ಪ್ರಸ್ತಾವನೆಗಳು ಬೆಂಗಳೂರು ನಗರ ಜಿಲ್ಲಾಡಳಿತದ ಮುಂದಿವೆ. ಕೆಲವು ಪ್ರಸ್ತಾವನೆಗಳು ಬಿಬಿಎಂಪಿಯ ಮುಂದಿವೆ. ಯಾವ ಹಿನ್ನೆಲೆಯಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಹಿಂದೆ ಯಾವ ರೀತಿ ಮರುವಿಂಗಡಣೆ ನಡೆಸಲಾಗಿತ್ತು, ಏನು ಕ್ರಮ ಕೈಗೊಳ್ಳಲಾಗಿತ್ತು. ಇನ್ನು ಮುಂದೆ ಏನು ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಎಂಬ ಪ್ರಾರಂಭಿಕ ಹಂತದ ಸಮಾಲೋಚನೆ ನಡೆಸಿದ್ದೇವೆ' ಎಂದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಎನ್.ಮಂಜುನಾಥ್, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಯುಕ್ತ ರಾಜೇಶ್ ಗೌಡ, ಬಿಬಿಎಂಪಿ ವಿಶೇಷ ಆಯುಕ್ತ ಕಂದಾಯ ಎಸ್. ಬಸವರಾಜು ಅವರು ಸಭೆಯಲ್ಲಿ ಭಾಗವಹಿಸಿದರು.

ಬಿಬಿಎಂಪಿ ವ್ಯಾಪ್ತಿಯನ್ನು ಈಗಿರುವಷ್ಟೇ ಉಳಿಸಿಕೊಂಡು ವಾರ್ಡ್‌ಗಳ ಸಂಖ್ಯೆಯನ್ನು ಮಾತ್ರ ಹೆಚ್ಚಿಸಲು ಸರ್ಕಾರ ಆರಂಭದಲ್ಲಿ ಚಿಂತನೆ ನಡೆಸಿತ್ತು. ನಂತರ ಗಡಿ ಪ್ರದೇಶದಲ್ಲಿ 1 ಕಿ.ಮೀ ವ್ಯಾಪ್ತಿಯ ಗ್ರಾಮಗಳನ್ನು ಬಿಬಿಎಂಪಿ ತೆಕ್ಕೆಗೆಸೇರಿಸಿಕೊಳ್ಳಲು ನಿರ್ಧರಿಸಿತ್ತು. ಯಾವ ಪ್ರದೇಶಗಳು ಬಿಬಿಎಂಪಿಗೆ ಸೇರ್ಪಡೆಯಾಗಬೇಕು ಎಂಬ ಕುರಿತು ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಲಿದೆ. ಹೊಸ ವಾರ್ಡ್‌ಗಳ ಹಾಗೂ ವಲಯಗಳ ವ್ಯಾಪ್ತಿ ಹಾಗೂ ಗಡಿಗಳನ್ನೂ ನಿರ್ಧರಿಸುವ ಕುರಿತೂ ಸಲಹೆ ನೀಡಲಿದೆ.

## ಬಿಬಿಎಂಪಿ ಚುನಾವಣೆ ತೂಗುಯ್ಯಾಲೆಯಲ್ಲಿ

ನಿಯಮ ಪ್ರಕಾರ 2020ರ ಸೆ.10ರ ಒಳಗೆ ಬಿಬಿಎಂಪಿ ಚುನಾವಣೆ ನಡೆಯಬೇಕಿತ್ತು. ಬಿಬಿಎಂಪಿ ವಿಸ್ತರಣೆ ಮತ್ತು ವಾರ್ಡ್‌ಗಳ ಮರುವಿಂಗಡಣೆ ಪ್ರಕ್ರಿಯೆಗಳಿಂದಾಗಿ ಚುನಾವಣೆ ಮುಂದಕ್ಕೆ ಹೋಗಿದೆ. ಈ ಪ್ರಕ್ರಿಯೆಗಳು ಪೂರ್ಣಗೊಳ್ಳಲು ಎಷ್ಟು ಸಮಯ ತಗಲುತ್ತದೆ ಎಂಬುದು ಇನ್ನೂ ಖಚಿತವಾಗಿಲ್ಲ. ಇನ್ನೊಂದೆಡೆ ಚುನಾವಣೆ ಮುಂದೂಡಿದ್ದನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿದ್ದು, ಇನ್ನಷ್ಟೇ ಅಂತಿಮ ತೀರ್ಪು ಪ್ರಕಟವಾಗಬೇಕಿದೆ.

ಬಿಬಿಎಂಪಿ ಚುನಾವಣೆಯನ್ನು ಮುಂದೂಡಿದ್ದನ್ನು ಪ್ರಶ್ನಿಸಿ ಕಾಂಗ್ರೆಸ್ ಮುಖಂಡರಾದ ಎಂ.ಶಿವರಾಜು ಹಾಗೂ ಅಬ್ದುಲ್ ವಾಜಿದ್ ಅವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ್ದ ಹೈಕೋರ್ಟ್‌ನ ವಿಭಾಗೀಯ ಪೀಠವು 1976 ಕೆಎಂಸಿ ಕಾರ್ಯಗೆ ತಿದ್ದುಪಡಿ ತಂದು ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಂಡಿದ್ದರೂ 198 ವಾರ್ಡ್‌ಗಳಿಗೆ ಚುನಾವಣೆ ನಡೆಸಬೇಕು ಎಂದು 2020ರ ಡಿಸೆಂಬರ್ 4ರಂದು ಆದೇಶ ಮಾಡಿತ್ತು. ಈ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಡಿ.10ರಂದು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು.

ಆ ಬಳಿಕ, 2020ರ ಬಿಬಿಎಂಪಿ ಕಾಯ್ದೆಯನ್ನು ಸರ್ಕಾರವು ವಿಧಾನ ಮಂಡಲದಲ್ಲಿ ಅಂಗೀಕರಿಸಿ, ಜಾರಿಗೊಳಿಸಿತ್ತು. ಪಾಲಿಕೆಯ ಅಡಳಿತವು 2021ರ ಜ. 11ರಿಂದ ಬಿಬಿಎಂಪಿ ಕಾಯ್ದೆ ಪ್ರಕಾರ ನಡೆಯುತ್ತಿದೆ.

## ವರ್ಷದ ಬಳಿಕ ಮತ್ತೆ ಮರುವಿಂಗಡಣೆ

2011ರ ಜನಗಣತಿ ಆಧಾರದಲ್ಲಿ ಬಿಬಿಎಂಪಿ ವಾರ್ಡ್‌ಗಳ ವಾರ್ಡ್ ಮರುವಿಂಗಡಣೆ ನಡೆಸಲು ಸರ್ಕಾರ 2020ರ ಮಾರ್ಚ್ 2ರಂದು ಕರಡು ಅಧಿಸೂಚನೆ ಪ್ರಕಟಿಸಿತ್ತು. ಈ ಕುರಿತ ಅಂತಿಮ ಅಧಿಸೂಚನೆಯನ್ನು 2020ರ ಜೂನ್ 23ರಂದು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿತ್ತು. ಮರುವಿಂಗಡಣೆಗೊಂಡ ವಾರ್ಡ್‌ಗಳ ಮತದಾರರ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗದ ಸೂಚನೆ ಮೇರೆಗೆ ಪರಿಷ್ಕರಿಸಲಾಗಿತ್ತು. ವಾರ್ಡ್‌ಗಳ ಮರುವಿಂಗಡಣೆಯಾಗಿ ವರ್ಷ ಪೂರ್ಣಗೊಂಡ ಬೆನ್ನಲ್ಲೇ ಬಿಬಿಎಂಪಿಯ ವಾರ್ಡ್‌ಗಳನ್ನು ಮತ್ತೆ ಮರುವಿಂಗಡಣೆ ಮಾಡುವ ಪ್ರಕ್ರಿಯೆ ಆರಂಭವಾಗಿದೆ.

## ಸುದ್ದಿ 2 ನಿಮಿಷ

### ಪೊಲೀಸರ ಕರ್ತವ್ಯಕ್ಕೆ ಅಡ್ಡಿ: ವಿದೇಶಿ ಪ್ರಜೆ ಬಂಧನ

**ಬೆಂಗಳೂರು:** ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಆರೋಪದಡಿ ವಿದೇಶಿ ಪ್ರಜೆಯೊಬ್ಬರನ್ನು ಕೆ.ಆರ್.ಪುರ ಪೊಲೀಸರು ಬಂಧಿಸಿದ್ದಾರೆ.

'ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ವಿದೇಶಿ ಪ್ರಜೆ, ರಸ್ತೆಯಲ್ಲಿ ಸ್ನೇಹಿತರ ಜೊತೆ ಗಲಾಟೆ ಮಾಡುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆಯೇ ಗಸ್ತಿನಲ್ಲಿದ್ದ ಸಿಬ್ಬಂದಿ ಸ್ಥಳಕ್ಕೆ ಹೋಗಿದ್ದರು. ಜಗಳ ಬಿಡಿಸಲು ಹೋದ ಪೊಲೀಸರ ಮೇಲೆ ಸಿಟ್ಟಾಗಿದ್ದ ಆರೋಪಿ, ಕರ್ತವ್ಯಕ್ಕೆ ಅಡ್ಡಿಪಡಿಸಿ ಹಲ್ಲೆಗೆ ಯತ್ನಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೃತ್ಯದ ಬಳಿಕ ಆರೋಪಿ ತಲೆಮರೆಸಿಕೊಂಡಿದ್ದರು. ಸಿಬ್ಬಂದಿ ನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಇತ್ತೀಚೆಗೆ ಆರೋಪಿ ಸಿಕ್ಕಿಬಿದ್ದರು' ಎಂದೂ ತಿಳಿಸಿವೆ.

### 'ಮನೆ ಬಾಗಿಲಿಗೆ ಸರ್ಕಾರಿ ಸೌಲಭ್ಯ'

**ಬೆಂಗಳೂರು:** 'ಪಿಂಚಣಿ ಸೌಲಭ್ಯ ಪಡೆಯಲು ಅರ್ಹತೆ ಹೊಂದಿರುವ ಮಲ್ಲೇಶ್ವರ ಕ್ಷೇತ್ರದ ನಿವಾಸಿಗಳು ದಾಖಲೆಗಳನ್ನು ಶಾಸಕರ ಕಚೇರಿ ತಂದೊಪ್ಪಿಸಿದರೆ, ಅವರ ಮನೆ ಬಾಗಿಲಿಗೆ ಪಿಂಚಣಿ ಮಂಜೂರಾತಿ ಪತ್ರ ತಲುಪಿಸಲಾಗುವುದು' ಎಂದು ಉಪಮುಖ್ಯಮಂತ್ರಿ ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಮಲ್ಲೇಶ್ವರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ 150 ಫಲಾನುಭವಿಗಳಿಗೆ ಪಿಂಚಣಿ ಪತ್ರ, ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ಪಿಂಚಣಿ ಸೇರಿದಂತೆ ವಿವಿಧ ಸರ್ಕಾರಿ ಸೌಲಭ್ಯಗಳ ಪತ್ರಗಳನ್ನು ವಿತರಿಸಿ ಅವರು ಮಾತನಾಡಿದರು.

'ಸರ್ಕಾರ ಅನೇಕ ಜನರಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸುತ್ತಿದೆ. ಅರ್ಹರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು. ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಕ್ಷೇತ್ರದಲ್ಲಿ ಯಾರೂ ಶಾಸಕರ ಕಚೇರಿ ಅಥವಾ ಸರ್ಕಾರಿ ಕಚೇರಿಗಳಿಗೆ ಅಲೆಯಬೇಕಿಲ್ಲ. ದಾಖಲೆ ಒದಗಿಸಿದರೆ, ಅವು ನಿಮ್ಮ ಮನೆ ಬಾಗಿಲಿಗೆ ತಲುಪಲಿವೆ' ಎಂದು ಹೇಳಿದರು.

ಕೋವಿಡ್‌ನಿಂದ ಬಂಧುಗಳನ್ನು ಕಳೆದುಕೊಂಡ ಸಂತ್ರಸ್ತ ಕುಟುಂಬಗಳಿಗೆ ಶಾಸಕ ಎಂ.ಕೃಷ್ಣಪ್ಪ ಅವರು ₹25 ಸಾವಿರ ಮೊತ್ತದ ಚೆಕ್‌ಗಳನ್ನು ವಿಜಯನಗರ ಕ್ಷೇತ್ರದ ಚೋಳೂರು ಪಾಳ್ಯದಲ್ಲಿ ಶನಿವಾರ ವಿತರಿಸಿದರು. ಕೆಪಿಸಿಸಿಯ ವಿ.ಆರ್.ಸುದರ್ಶನ್, ಮುಖಂಡರಾದ ಜೆ.ಕೃಷ್ಣಪ್ಪ, ನಾರಾಯಣ್, ಶ್ರೀನಾಥ್ ಹಾಗೂ ಇತರರು ಇದ್ದರು.

# ತಳ್ಳುಗಾಡಿಯಲ್ಲಿ ಧ್ವನಿವರ್ಧಕ ಬಳಕೆ: ದೂರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಅನುಮತಿ ಇಲ್ಲದೇ ಧ್ವನಿವರ್ಧಕ ಬಳಸಲು ಅವಕಾಶವಿಲ್ಲ. ತಳ್ಳುಗಾಡಿಯಲ್ಲಿ ಧ್ವನಿವರ್ಧಕ ಬಳಕೆ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು' ಎಂದು ನಗರದ ಪೊಲೀಸ್ ಕಮಿಷನರ್ ಕಮಲ್ ಪಂಥ್ ತಿಳಿಸಿದರು.

ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯ ಪೊಲೀಸ್ ಸಂಬಂಧಿತ ಸಮಸ್ಯೆಗಳನ್ನು ಆಲಿಸಲು ಸಾಮಾಜಿಕ ಜಾಲತಾಣದಲ್ಲಿ ನಡೆಸಿದ ನೇರ ಸಂವಾದ ಕಾರ್ಯಕ್ರಮದಲ್ಲಿ ಸಾರ್ವಜನಿಕರೊಬ್ಬರ ಪ್ರಶ್ನೆಗೆ ಅವರು ಶನಿವಾರ ಉತ್ತರಿಸಿದರು.

'ತರಕಾರಿ ಸೇರಿ ವಿವಿಧ ವಸ್ತುಗಳನ್ನು ಮಾರಾಟ ಮಾಡಲು ಬರುವ ತಳ್ಳುಗಾಡಿಯಲ್ಲಿ ಧ್ವನಿವರ್ಧಕ ಬಳಸಲಾಗುತ್ತಿದ್ದು, ಕಿರಿಕಿರಿ ಆಗುತ್ತಿದೆ' ಎಂದು ಸಾರ್ವಜನಿಕರೊಬ್ಬರು ದೂರಿದರು.

ಮನೆ ಕೆಲಸಗಾರರೊಬ್ಬರು, 'ಮನೆ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದೇನೆ. ಕೆಲ ಅಪಾರ್ಟ್‌ಮೆಂಟ್ ಸಮುಚ್ಚಯದ ಸಂಘಗಳು ಹೊರಗಿನವರ ಪ್ರವೇಶ ನಿರ್ಬಂಧಿಸಿರಬಹುದು. ಹೀಗಾಗಿ, ಎಲ್ಲರೂ ಸಹಕರಿಸಬೇಕು' ಎಂದರು.

**ರಸ್ತೆ ವಿಸ್ತರಣೆಗೆ ಚಿಂತನೆ:** 'ನಗರದ ಕೆಲ ರಸ್ತೆಗಳಲ್ಲಿ ವಾಹನಗಳ ಓಡಾಟ ಹೆಚ್ಚಿದೆ. ಅಂಥ ರಸ್ತೆಗಳ ವಿಸ್ತರಣೆಗೆ ಕ್ರಮ ಕೈಗೊಳ್ಳಿ' ಎಂದು ಸಾರ್ವಜನಿಕರೊಬ್ಬರು ವಿನಂತಿಸಿದರು.

'ರಸ್ತೆ ವಿಸ್ತರಣೆ ತ್ವರಿತವಾಗಿ ಆಗುವ ಕೆಲಸವಲ್ಲ. ಈ ಬಗ್ಗೆ ಚಿಂತನೆ ನಡೆಸಲಾಗುವುದು. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ಜೊತೆಗೆ ಚರ್ಚಿಸಲಾಗುವುದು' ಎಂದು ಕಮಲ್ ಪಂತ್ ಹೇಳಿದರು.

ಕಮಲ್ ಪಂಥ್

## ದುರ್ವರ್ತನೆ ತೋರಿದರೆ ಶಿಸ್ತು ಕ್ರಮ: ಎಚ್ಚರಿಕೆ

**ಬೆಂಗಳೂರು:** 'ಸಂಚಾರ ವಿಭಾಗದ ಪೊಲೀಸರು ಹಾಗೂ ಟೋಯಿಂಗ್ ವಾಹನಗಳ ಸಿಬ್ಬಂದಿ ಸಾರ್ವಜನಿಕರ ಜೊತೆ ತಾಳ್ಮೆಯಿಂದ ವರ್ತಿಸಬೇಕು. ದುರ್ವರ್ತನೆ ತೋರಿದ ಬಗ್ಗೆ ದೂರುಗಳು ಬಂದರೆ ಅಂಥ ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಎಚ್ಚರಿಕೆ ನೀಡಿದರು.

ಸಾಮಾಜಿಕ ಜಾಲತಾಣದಲ್ಲಿ ಶನಿವಾರ ನೇರಪ್ರಸಾರದಲ್ಲಿ ಅವರು ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸಿದರು.

'ಚಿಕ್ಕಪೇಟೆ ಹಾಗೂ ಇತರೆ ಪ್ರದೇಶಗಳಲ್ಲಿ ಟೋಯಿಂಗ್ ಸಿಬ್ಬಂದಿ ಅನುಚಿತವಾಗಿ ವರ್ತಿಸುತ್ತಾರೆ. ಬಹುತೇಕ ಪೊಲೀಸರು ಸಹ ದುರ್ವರ್ತನೆ ತೋರುತ್ತಿದ್ದಾರೆ' ಎಂದು ಸಾರ್ವಜನಿಕರು ದೂರಿದರು.

ರವಿಕಾಂತೇಗೌಡ, 'ಸಾರ್ವಜನಿಕರ ಜೊತೆ ಹೇಗೆ ವರ್ತಿಸಬೇಕೆಂಬ ಬಗ್ಗೆ ಪ್ರತಿಯೊಬ್ಬ ಸಿಬ್ಬಂದಿಗೂ ತರಬೇತಿ ನೀಡಲಾಗುತ್ತಿದೆ. ಆಕಸ್ಮಾತ್ ಯಾರಾದರೂ ದುರ್ವರ್ತನೆ ತೋರಿದರೆ ಸಾರ್ವಜನಿಕರು ದೂರು ನೀಡಬಹುದು' ಎಂದರು.

'ರಸ್ತೆಗಳು ಹದಗೆಟ್ಟಿವೆ. ಕೆಲವೆಡೆ ಬೀದಿ ದೀಪಗಳಿಲ್ಲ. ಅಲ್ಲೆಲ್ಲ ಅಪಘಾತಗಳು ಹೆಚ್ಚುತ್ತಿವೆ. ಇದಕ್ಕೆ ಪರಿಹಾರ ಇಲ್ಲವೇ' ಎಂಬ ಪ್ರಶ್ನೆಗೆ ಉತ್ತರಿಸಿದ ರವಿಕಾಂತೇಗೌಡ, 'ರಸ್ತೆ ಸುರಕ್ಷತೆ ದೃಷ್ಟಿಯಿಂದ ಎಲ್ಲ ಕ್ರಮ ಕೈಗೊಳ್ಳಲಾಗಿದೆ. ಹದಗೆಟ್ಟ ರಸ್ತೆಗಳು ಹಾಗೂ ಬೀದಿದೀಪ ಅಳವಡಿಕೆ ಬಗ್ಗೆ ಬಿಬಿಎಂಪಿಗೆ ಮಾಹಿತಿ ನೀಡಲಾಗಿದೆ' ಎಂದರು.

**ಭಾರಿ ವಾಹನ ನಿರ್ಬಂಧ:** ಸಂಚಾರ ದಟ್ಟಣೆ ಸಮಸ್ಯೆ ಬಗ್ಗೆ ಮಾತನಾಡಿದ ರವಿಕಾಂತೇಗೌಡ, 'ಕೆಲ ರಸ್ತೆಗಳಲ್ಲಿ ಭಾರಿ ವಾಹನ ಓಡಾಟಕ್ಕೆ ಅನುಮತಿ ನೀಡಲಾಗುತ್ತಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಪ್ರತಿಯೊಂದು ರಸ್ತೆಯಲ್ಲಿ ವಾಹನಗಳ ದಟ್ಟಣೆ ಉಂಟಾಗುತ್ತಿದೆ. ಅಂಥ ರಸ್ತೆಗಳಲ್ಲಿ ಭಾರಿ ವಾಹನಗಳ ಓಡಾಟ ನಿರ್ಬಂಧಿಸಲಾಗಿದೆ' ಎಂದರು.

**ಪಾದಚಾರಿ ಮಾರ್ಗದಲ್ಲಿ ಅಡ್ಡಿಪಡಿಸಿದರೆ ಕ್ರಮ:** 'ಪಾದಚಾರಿ ಹಾಗೂ ಸೈಕಲ್ ಮಾರ್ಗದಲ್ಲೇ ಕೆಲವರು ಅಂಗಡಿ ಇಟ್ಟುಕೊಳ್ಳುತ್ತಿದ್ದಾರೆ. ಸಾಮಗ್ರಿಗಳನ್ನು ಇಟ್ಟು ಸಾರ್ವಜನಿಕರ ಓಡಾಟಕ್ಕೆ ಅಡ್ಡಿಪಡಿಸುತ್ತಿದ್ದಾರೆ' ಎಂದು ವ್ಯಕ್ತಿಯೊಬ್ಬರು ದೂರಿದರು. 'ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗುತ್ತಿದೆ. ನಿಖರ ಸ್ಥಳದ ಮಾಹಿತಿ ನೀಡಿದರೆ ಕ್ರಮ ಕೈಗೊಳ್ಳಲಾಗುವುದು' ಎಂದು ರವಿಕಾಂತೇಗೌಡ ಹೇಳಿದರು.



ಕೋವಿಡ್‌ನಿಂದ ಬಂಧುಗಳನ್ನು ಕಳೆದುಕೊಂಡ ಸಂತ್ರಸ್ತ ಕುಟುಂಬಗಳಿಗೆ ಶಾಸಕ ಎಂ.ಕೃಷ್ಣಪ್ಪ ಅವರು ₹25 ಸಾವಿರ ಮೊತ್ತದ ಚೆಕ್‌ಗಳನ್ನು ವಿಜಯನಗರ ಕ್ಷೇತ್ರದ ಚೋಳೂರು ಪಾಳ್ಯದಲ್ಲಿ ಶನಿವಾರ ವಿತರಿಸಿದರು. ಕೆಪಿಸಿಸಿಯ ವಿ.ಆರ್.ಸುದರ್ಶನ್, ಮುಖಂಡರಾದ ಜೆ.ಕೃಷ್ಣಪ್ಪ, ನಾರಾಯಣ್, ಶ್ರೀನಾಥ್ ಹಾಗೂ ಇತರರು ಇದ್ದರು.

## ರಾಜ್ಯ ಕೋವಿಡ್ ಅಂಕಿ-ಅಂಶ

**28,82,239** ಒಟ್ಟು ಸೋಂಕಿತರು
(28,80,370 ನಿನ್ನೆಯ ವಿವರ)

**30,082** ಸಕ್ರಿಯ ಪ್ರಕರಣಗಳು

**28,16,013** ಗುಣಮುಖರಾದವರು

**36,121** ಒಟ್ಟು ಸಾವು

ದಿನದ ಏರಿಕೆ
ಹೊ

### ಶುಲ್ಕ ಕಟ್ಟಿಸಿಕೊಂಡು ನೋಂದಾಯಿಸಿಕೊಳ್ಳದ ಖಾಸಗಿ ಶಾಲಾ ಆಡಳಿತ ಮಂಡಳಿಗಳು

# ಎಸ್ಸೆಸ್ಸೆಲ್ಸಿ ಪರೀಕ್ಷೆ ಅವಕಾಶಕ್ಕೇ ಕತ್ತರಿ!

• ರಾಜೇಶ್ ರೈ ಚಟ್ಲ

**ಬೆಂಗಳೂರು:** ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ ಎಂದು ರಾಜ್ಯ ಸರ್ಕಾರ ಸಮರ್ಥಿಸಿಕೊಂಡರೆ, ಬೋಧನಾ ಶುಲ್ಕ ಪಾವತಿಸಿಲ್ಲ ಎಂಬ ಕಾರಣಕ್ಕೆ ರಾಜ್ಯದಾದ್ಯಂತ ಸಾವಿರಾರು ವಿದ್ಯಾರ್ಥಿಗಳ ಪರೀಕ್ಷೆ ಬರೆಯುವ ಅವಕಾಶವನ್ನೇ ಖಾಸಗಿ ಶಾಲಾ ಆಡಳಿತ ಮಂಡಳಿಗಳು ಕಸಿದುಕೊಂಡಿವೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ಇದೇ 19 ಮತ್ತು 22 ರಂದು ನಡೆಯಲಿವೆ. ಒಂಬತ್ತನೇ ತರಗತಿಯಿಂದ 10ನೇ ತರಗತಿಗೆ ಬಡ್ತಿ ಪಡೆದ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾನರಹಿತ ವಿದ್ಯಾರ್ಥಿಗಳನ್ನು 'ವಿದ್ಯಾರ್ಥಿಗಳ ಸಾಧನೆ ಟ್ರ್ಯಾಕಿಂಗ್ ವ್ಯವಸ್ಥೆ'ಯಲ್ಲಿ (ಎಸ್‌ಎಟಿಎಸ್) ನೋಂದಣಿ ಮಾಡಿಕೊಳ್ಳಲಾಗಿದೆ. ಹೀಗೆ ನೋಂದಣಿ ಆಗಿರುವ ವಿದ್ಯಾರ್ಥಿಗಳ ಪೈಕಿ, ಬೋಧನಾ ಶುಲ್ಕ ಕಟ್ಟದ ಅನೇಕರಿಗೆ ಕೆಲವು ಖಾಸಗಿ ಶಾಲೆಗಳು ಆನ್‌ಲೈನ್ ತರಗತಿ ಸ್ಥಗಿತಗೊಳಿಸಿದ್ದವು. ಇದೀಗ, ಎಸ್ಸೆಸ್ಸೆಲ್ಸಿ ಪರೀಕ್ಷೆಗೂ ಶುಲ್ಕ ಕಟ್ಟಿಸಿಕೊಂಡಿಲ್ಲ ಎಂಬ ಸಂಗತಿ ಬಹಿರಂಗವಾಗಿದೆ.

ವಾರ್ಷಿಕ ಪರೀಕ್ಷೆಗೆ ಶುಲ್ಕ ಪಾವತಿಸಿ, ಅರ್ಜಿ ಸಲ್ಲಿಸುವಂತೆ ಪ್ರಕಟಣೆ ಹೊರಡಿಸಿದ್ದ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಎಸ್‌ಎಟಿಎಸ್‌ನಲ್ಲಿ ನೋಂದಣಿ ಆಗಿರುವ ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸುವ ಹೊಣೆ ಆಯಾ ಶಾಲೆಗಳದ್ದು. ಬೋಧನಾ ಶುಲ್ಕ ಕಟ್ಟಿಲ್ಲವೆಂದು ಹಾಲ್‌ಟಿಕೆಟ್ ನೀಡಲು ಖಾಸಗಿ ಶಾಲೆಗಳು ಹಿಂದೇಟು ಹಾಕಿರುವ ಸಂದರ್ಭದಲ್ಲಿ, ಅನೇಕ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಹಣ ಕಟ್ಟಿಸಿಕೊಳ್ಳದ ವಿಷಯ ಗೊತ್ತಾಗುತ್ತಿದೆ. ಕೆಲವು ಶಾಲೆಗಳು ಪರೀಕ್ಷೆಗೆ ನೋಂದಾಯಿಸಿದ ಬಳಿಕ ಶುಲ್ಕ ಪಾವತಿಸಲು ಪೋಷಕರಿಗೆ ಒತ್ತಡ ಹೇರುತ್ತಿರುವ ಆರೋಪವೂ ಕೇಳಿಬಂದಿದೆ.

ಪ್ರಜಾವಾಣಿ ವಿಶೇಷ

**19 ಮತ್ತು 22 ರಂದು ಪರೀಕ್ಷೆ ಬರೆಯುವ ಅವಕಾಶದಿಂದ ವಂಚಿತರಾದವರಿಗೆ ಆಗಸ್ಟ್‌ನಲ್ಲಿ ಮತ್ತೆ ಪರೀಕ್ಷೆ ನಡೆಸಿ ಅವಕಾಶ ನೀಡಲಾಗುವುದು. ವಿದ್ಯಾರ್ಥಿಗಳು ಆತಂಕಪಡಬೇಕಿಲ್ಲ**
**ಎಸ್. ಸುರೇಶ್‌ಕುಮಾರ್**
ಸಚಿವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

**ಪರೀಕ್ಷೆ ಬರೆಯುವ ಮಕ್ಕಳ ಹಕ್ಕು ಕಸಿದುಕೊಂಡ ಖಾಸಗಿ ಶಾಲೆಗಳ ವಿಚಾರದಲ್ಲಿ ಸರ್ಕಾರ ಬಿಗಿ ನಿಲುವು ತಳೆಯಬೇಕು. ಈ ವಿಷಯದಲ್ಲಿ ಬಿಇಒಗಳಿಗೆ ಹೆಚ್ಚಿನ ಹೊಣೆಗಾರಿಕೆ ನೀಡಬೇಕು**
**ನಾಗಸಿಂಹ ಜಿ. ರಾವ್,** ರಾಜ್ಯ ಸಂಚಾಲಕ, ಶಿಕ್ಷಣ ಹಕ್ಕು ಕಾರ್ಯಪಡೆ

### ಆರು ಬಾರಿ ಅವಧಿ ವಿಸ್ತರಣೆ

'ಈ ಹಿಂದಿನ ಸಂದರ್ಭಗಳಲ್ಲಿ, ಪರೀಕ್ಷೆಗೆ ಅರ್ಜಿ ಸಲ್ಲಿಸಲು ಮೊದಲ ಪ್ರಕಟಣೆ ಹೊರಡಿಸಿದ ಬಳಿಕ ಎರಡು ಬಾರಿ ದಿನಾಂಕ ವಿಸ್ತರಿಸಲಾಗುತ್ತಿತ್ತು. ಆದರೆ, ಈ ಬಾರಿ ಕೋವಿಡ್ ಕಾರಣಕ್ಕೆ ದಾಖಲೆಯ ಸಂಖ್ಯೆಯಲ್ಲಿ ಅವಧಿ ವಿಸ್ತರಿಸಿ ಅವಕಾಶ ಮಾಡಿಕೊಡಲಾಗಿದೆ. ಆದರೂ ನಾನಾ ಕಾರಣಗಳಿಗೆ ಎಲ್ಲ ವಿದ್ಯಾರ್ಥಿಗಳು ಶುಲ್ಕ ಕಟ್ಟಿ, ನೋಂದಣಿ ಮಾಡಿಕೊಂಡಿಲ್ಲ. ಅಂಥ ಮಕ್ಕಳು ಪರೀಕ್ಷೆ ಬರೆಯುವ ಅವಕಾಶದಿಂದ ವಂಚಿತರಾಗಿದ್ದಾರೆ' ಎಂದು ಪರೀಕ್ಷಾ ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಪರೀಕ್ಷೆಯ ಶುಲ್ಕ ಕಟ್ಟಲು ಸಾಧ್ಯವಾಗದ ಮಕ್ಕಳ ಶುಲ್ಕವನ್ನು ಸರ್ಕಾರಿ ಶಾಲೆಗಳಲ್ಲಿ ಮುಖ್ಯ ಶಿಕ್ಷಕರು, ಅಧ್ಯಾಪಕರು ಕಟ್ಟಿದ ನಿದರ್ಶನಗಳಿವೆ. ಈ ವಿಷಯದಲ್ಲಿ ಮಕ್ಕಳ ಪೋಷಕರಿಗೂ ಜವಾಬ್ದಾರಿ ಇದೆ. ಹಿಂದೆ ಶಾಲೆಗಳಿಗೆ ಹಾಜರಾತಿ ಕಡ್ಡಾಯ ಆಗಿತ್ತು. ನಿರ್ದಿಷ್ಟ ಪ್ರಮಾಣದ ಹಾಜರಾತಿ ಇಲ್ಲದವರಿಗೆ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅವಕಾಶವನ್ನೇ ನೀಡುತ್ತಿರಲಿಲ್ಲ' ಎಂದೂ ಅವರು ಹೇಳಿದರು.

# ಪರೀಕ್ಷೆಗೆ ಸಜ್ಜಾಗಿವೆ ಶಾಲೆಗಳು

## ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಿಗೆ ಸುರೇಶ್ ಕುಮಾರ್ ಭೇಟಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಇದೇ 19 ಮತ್ತು 22ರಂದು ನಡೆಯಲಿರುವ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಪೂರ್ವಭಾವಿಯಾಗಿ ನಡೆದ ಅಣಕು ಪರೀಕ್ಷೆ ಪರಿಶೀಲಿಸಲು ಬೆಂಗಳೂರಿನ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಶನಿವಾರ ಭೇಟಿ ನೀಡಿದರು.

ಮಲ್ಲೇಶ್ವರದ ಸರ್ಕಾರಿ ಪ್ರೌಢಶಾಲೆ, ಎಂಇಎ ಪ್ರೌಢಶಾಲೆ, ಸದಾಶಿವ ನಗರದ ಪೂರ್ಣಪ್ರಜ್ಞಾ ವಿದ್ಯಾಸಂಸ್ಥೆ, ಪೀಣ್ಯ ದಾಸರಹಳ್ಳಿಯ ಸರ್ಕಾರಿ ಪ್ರೌಢಶಾಲೆಗಳಲ್ಲಿನ ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಅಣಕು ಪರೀಕ್ಷೆಗಳನ್ನು ಹಾಗೂ ಪರೀಕ್ಷಾ ಪೂರ್ವಭಾವಿ ಸಿದ್ಧತೆಗಳನ್ನು ಅವರು ಪರಿಶೀಲಿಸಿದರು.

ಬಳಿಕ ಮಾತನಾಡಿದ ಸಚಿವರು,'ವಿದ್ಯಾರ್ಥಿಗಳ ಸುರಕ್ಷತಾ ದೃಷ್ಟಿಯಿಂದ ಕಳೆದ ಬಾರಿಗಿಂತ ಪರೀಕ್ಷಾ ಕೇಂದ್ರಗಳ ಸಂಖ್ಯೆ ಹೆಚ್ಚಿಸಲಾಗಿದೆ. ಪರೀಕ್ಷಾ ಕರ್ತವ್ಯಕ್ಕೂ ಈ ಬಾರಿ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ' ಎಂದರು.

'ಒಂದು ಕೊಠಡಿಯಲ್ಲಿ 12ಕ್ಕಿಂತ ಹೆಚ್ಚು ಮಂದಿ ಇರಬಾರದು. ಕೊಠಡಿಯ ಹೊರಗೆ ಮತ್ತು ಒಳಗೆ ಸಾಮಾಜಿಕ ಅಂತರ ಕಾಯ್ದುಕೊಳ್ಳಲಾಗುತ್ತದೆ. ಕೆಲವೆಡೆ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಪ್ರವೇಶ ದ್ವಾರ, ಸ್ಯಾನಿಟೈಸ್ ವ್ಯವಸ್ಥೆ, ದೇಹದ ಉಷ್ಣಾಂಶ ತಪಾಸಣೆ ವ್ಯವಸ್ಥೆ ಕಲ್ಪಿಸಲಾಗಿದೆ. ಮಾಸ್ಕ್ ವಿತರಣೆಗೂ ಕ್ರಮ ಕೈಗೊಳ್ಳಲಾಗಿದೆ' ಎಂದು ವಿವರಿಸಿದರು.

ಮಲ್ಲೇಶ್ವರದ ಸರ್ಕಾರಿ ಪ್ರೌಢಶಾಲೆಯ ಪರೀಕ್ಷಾ ಕೇಂದ್ರದಲ್ಲಿ ನಡೆದ ಎಸ್ಸೆಸ್ಸೆಲ್ಸಿ ಅಣಕು ಪರೀಕ್ಷೆಯನ್ನು ಸಚಿವ ಎಸ್‌ಸುರೇಶ್ ಕುಮಾರ್ ಪರಿಶೀಲಿಸಿದರು

–ಪ್ರಜಾವಾಣಿ ಚಿತ್ರ

**490 ಪರೀಕ್ಷಾ ಕೇಂದ್ರಗಳು ಸಜ್ಜು:** 'ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬಿಬಿಎಂಪಿಯ ಶಾಲೆಗಳು ಹಾಗೂ ಖಾಸಗಿ ಶಾಲೆಗಳು ಸೇರಿದಂತೆ ಒಟ್ಟು 490 ಕೇಂದ್ರಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯಲಿದೆ. ಪಾಲಿಕೆ ವತಿಯಿಂದ ಪರೀಕ್ಷಾ ಕೇಂದ್ರಗಳನ್ನು ಈಗಾಗಲೇ ಸ್ಯಾನಿಟೈಸ್ ಮಾಡಲಾಗಿದೆ. ಕೇಂದ್ರಗಳಲ್ಲಿ ಪರೀಕ್ಷಾರ್ಥಿಗಳ ಅನುಕೂಲಕ್ಕಾಗಿ ಆಶಾ ಕಾರ್ಯಕರ್ತರು, ವೈದ್ಯಕೀಯ ಹಾಗೂ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ' ಎಂದು ಬಿಬಿಎಂಪಿಯ ಶಿಕ್ಷಣ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

# ಐಸಿಯು ಕಂಟೇನರ್ ಘಟಕಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

**ಯಲಹಂಕ:** 'ಸರ್ಕಾರಿ ಆಸ್ಪತ್ರೆಯಲ್ಲಿ ಆಧುನಿಕ ಉಪಕರಣಗಳನ್ನು ಅಳವಡಿಸಿ, ಮೇಲ್ದರ್ಜೆಗೇರಿಸುವ ಕಾರ್ಯಕ್ಕೆ ಸರ್ಕಾರದಿಂದ ₹3 ಕೋಟಿ ಅನುದಾನ ಬಿಡುಗಡೆಯಾಗಿದೆ' ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದರು.

ಎಕ್ಸಾನ್ ಮೊಬೈಲ್ ಸರ್ವೀಸರ್ ಆ್ಯಂಡ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಹಾಗೂ ಸಮರ್ಥನಂ ಅಂಗವಿಕಲರ ಸಂಸ್ಥೆಯ ಸಹಯೋಗದಲ್ಲಿ ಸರ್ಕಾರಿ ಆಸ್ಪತ್ರೆಗೆ ದೇಣಿಗೆ ನೀಡಿರುವ ₹35 ಲಕ್ಷ ವೆಚ್ಚದ 5 ಹಾಸಿಗೆಯ ಐಸಿಯು ಕಂಟೇನರ್ ಘಟಕ ಉದ್ಘಾಟಿಸಿ ಅವರು ಮಾತನಾಡಿದರು.

'ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ, ಸಿಟಿ ಸ್ಕ್ಯಾನ್ ಮತ್ತಿತರ ಸೇವೆಗಳಿಗೆ ಅಗತ್ಯವಿರುವ ಹಾಗೂ ಸೌರಶಕ್ತಿ, ಅಗ್ನಿಶಾಮಕ ಸಾಮಗ್ರಿಗಳು ಮತ್ತಿತರ ಸೌಲಭ್ಯಗಳನ್ನು ಒಳಗೊಂಡಂತೆ ಆಧುನಿಕ ಉಪಕರಣ ಅಳವಡಿಸುವ ಕಾರ್ಯ ಶೀಘ್ರದಲ್ಲೇ ಆರಂಭವಾಗಲಿದೆ' ಎಂದರು.

ಐಸಿಯು ಕಂಟೇನರ್ ಘಟಕವನ್ನು ಶಾಸಕ ಎಸ್.ಆರ್.ವಿಶ್ವನಾಥ್ ವೀಕ್ಷಿಸಿದರು. ಮಹಾಂತೇಶ್, ಎಕ್ಸಾನ್ ಮೊಬೈಲ್ ಸಂಸ್ಥೆಯ ಮುಖ್ಯಕಾರ್ಯನಿರ್ವಹಣಾ ಅಧಿಕಾರಿ ನವೀನ್ ಶುಕ್ಲ, ಸತೀಶ್ ಶರ್ಮ, ಹರ್ಷಿತಾ, ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಅಸ್ಮಾ ತಬಸ್ಸುಮ್ ಹಾಗೂ ಇತರರು ಇದ್ದರು

'ನೂತನ ಐಸಿಯು ಕಂಟೇನರ್ ಘಟಕವನ್ನು ಅಗತ್ಯವಿರುವ ಕಡೆಗೆ ಸ್ಥಳಾಂತರಿಸಬಹುದು. ವೆಂಟಿಲೇಟರ್ ಆಗಿಯೂ ಪರಿವರ್ತಿಸಬಹುದು. ಇಂತಹ ಘಟಕಕ್ಕೆ ದೇಣಿಗೆ ನೀಡಿರುವುದು ಶ್ಲಾಘನೀಯ' ಎಂದರು.

ಸಮರ್ಥನಂ ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ ಮಹಾಂತೇಶ್,'ಐಸಿಯು ಮಾಡ್ಯುಲರ್ ಮೊಬೈಲ್ ಕಂಟೇನರ್ ಘಟಕವನ್ನು ಎಕ್ಸಾನ್ ಸಂಸ್ಥೆಯ ಸಹಕಾರದಲ್ಲಿ ಅಳವಡಿಸಲಾಗಿದೆ. ಸಂಭಾವ್ಯ ಮೂರನೇ ಅಲೆಯ ಸಂದರ್ಭದಲ್ಲಿ ಹಾಗೂ ನಂತರವೂ ಇದನ್ನು ಬಳಸಬಹುದು' ಎಂದು ಹೇಳಿದರು.

# ಬೆಂಗಳೂರು ದಕ್ಷಿಣ: ಕೆರೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಉದ್ಯಮಿಯೊಬ್ಬರು ಕೆರೆಯ ಪ್ರದೇಶದಲ್ಲಿ ಮಾಡಿಕೊಂಡಿದ್ದ ಒತ್ತುವರಿಯನ್ನು ಜಿಲ್ಲಾಧಿಕಾರಿ ಜೆ.ಮಂಜುನಾಥ್ ನೇತೃತ್ವದಲ್ಲಿ ತೆರವುಗೊಳಿಸಲಾಯಿತು. ತಾಲ್ಲೂಕಿನ ಕೋಳೂರು ಗುರುರಾಯನ ಪುರ ಗ್ರಾಮದ ಕೆರೆಯನ್ನು ಉದ್ಯಮಿಯೊಬ್ಬರು ಒತ್ತುವರಿ ಮಾಡಿಕೊಂಡಿದ್ದರು.

ಶ್ರೀ ಭಾಗ್ಯಲಕ್ಷ್ಮಿ ಫಾರ್ಮ್ಸ್ ಹೆಸರಿನಲ್ಲಿ ಸ್ವಂತ ಹಿಡುವಳಿಯ ನೂರಾರು ಎಕರೆಯಲ್ಲಿ ಫಾರ್ಮ ಹೌಸ್, ನರ್ಸರಿ, ಜೈವಿಕ ಗೊಬ್ಬರ ತಯಾರಿಕಾ ಉದ್ಯಮ, ಪಾರ್ಕ್ ಮುಂತಾದವುಗಳನ್ನು ಉದ್ಯಮಿಯೊಬ್ಬರು ಕೆರೆ ಪ್ರದೇಶ ಒತ್ತುವರಿ ಮಾಡಿಕೊಂಡು, ತಮ್ಮ ಫಾರ್ಮ್ ಹೌಸ್ ಹಾಗೂ ತೋಟಕ್ಕೆ ರಸ್ತೆ ಮಾಡಿಕೊಂಡಿದ್ದಲ್ಲದೆ, ಕೆರೆ ಅಂಗಳದಲ್ಲಿ ಕಾಫಿ ಗಿಡ, ಹೂದೋಟ ಮಾಡಿಕೊಂಡಿರುವುದರ ಬಗ್ಗೆ ಗ್ರಾಮಸ್ಥರು ಜಿಲ್ಲಾಧಿಕಾರಿಗೆ ಮಾಹಿತಿ ನೀಡಿದರು.

ಉದ್ಯಮಿ ಕುಟುಂಬದವರು ತೋಟದೊಳಗೆ ಅನೇಕ ಸಣ್ಣ ಸಣ್ಣ ಕೆರೆಗಳನ್ನು ನಿರ್ಮಿಸಿಕೊಂಡು ಕಾಲುವೆಗೆ ಚೆಕ್ ಡ್ಯಾಮ್ ಗಳನ್ನು ನಿರ್ಮಾಣ ಮಾಡಿ ನೀರಿನ ಹರಿವನ್ನು ತಮ್ಮ ಖಾಸಗಿ ಕೆರೆಗಳತ್ತ ತಿರುಗಿಸಿಕೊಂಡಿದ್ದರು. ಇದರಿಂದಾಗಿ ಕಾಲುವೆಯಲ್ಲಿ ನೀರು ಹರಿದು ಕೆರೆಗೆ ಸೇರದೆ ಸರ್ಕಾರಿ ಕೆರೆಯು ಬೇಸಿಗೆಯಲ್ಲಿ ಬತ್ತಿಹೋಗುತ್ತಿತ್ತು ಎಂದು ಸ್ಥಳೀಯರು ದೂರಿದರು.

ಉಪವಿಭಾಗಾಧಿಕಾರಿ ಡಾ ಎಂ. ಜಿ. ಶಿವಣ್ಣ, 'ಕೆರೆಯ ವ್ಯಾಪ್ತಿಯ ಬಗ್ಗೆ ವಾರದೊಳಗೆ ಸರ್ವೇ ಮಾಡಿಸಿ ವರದಿ ಸಲ್ಲಿಸಬೇಕು ಎಂದು ತಹಶೀಲ್ದಾರ್ ಗೆ ಸೂಚಿಸಿದರು. ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ದೂರು ದಾಖಲಿಸುವ ಬಗ್ಗೆ ಮೇಲಧಿಕಾರಿಗಳೊಂದಿಗೆ ಚರ್ಚಿಸುವುದಾಗಿಯೂ ಹೇಳಿದರು.

**ಭೂಮಿ ವಶಕ್ಕೆ:** ಯಲಚಗುಪ್ಪೆಯ ಸರ್ವೇ ನಂಬರ್ 132 ಸರ್ಕಾರಿ ಕೆರೆ ಅಂಗಳದಲ್ಲಿನ 12 ಗುಂಟೆ ಜಮೀನನ್ನು ಡೆವಲಪರ್ ಒಬ್ಬರು ನಿವೇಶನ ವಿಂಗಡಿಸಿ ಬಡಾವಣೆ ಅಭಿವೃದ್ಧಿ ಪಡಿಸಿರುವುದನ್ನು ಅಧಿಕಾರಿಗಳು ಪತ್ತೆ ಹಚ್ಚಿದರು. ಜೆಸಿಬಿ ಯಂತ್ರ ಬಳಸಿ ಚರಂಡಿ, ರಸ್ತೆ ನಾಶ ಮಾಡಿ ಭೂಮಿ ಸಮತಟ್ಟು ಮಾಡಿ ವಶಕ್ಕೆ ಪಡೆಯಲಾಯಿತು.

## ಗ್ರಾ.ಪಂ ಸದಸ್ಯೆ ಕೈಕಚ್ಚಿದ ಜವಾನ!

**ಮಾಗಡಿ:** ತಾಲ್ಲೂಕಿನ ಬೆಳಗುಂಬ ಗ್ರಾಮ ಪಂಚಾಯಿತಿಯಲ್ಲಿ ಶನಿವಾರ ನಡೆದ ಸಾಮಾನ್ಯ ಸಭೆಯಲ್ಲಿ ಜವಾನ ಮತ್ತವರ ಕುಟುಂಬದವರು ಗ್ರಾ.ಪಂ. ಸದಸ್ಯೆ ಯಶೋದಮ್ಮ ಬೈರಪ್ಪ ಅವರ ಬಲಗೈ ಕಚ್ಚಿ ಗಾಯಗೊಳಿಸಿದ್ದಾರೆ.

ಗ್ರಾ.ಪಂ.ಜವಾನರಾಗಿಕಾರ್ಯನಿರ್ವಹಿಸುತ್ತಿದ್ದ ನರಸಿಂಹಮೂರ್ತಿ ಎಂಬುವರನ್ನು ಕರ್ತವ್ಯ ನಿರ್ಲಕ್ಷ್ಯದ ಆರೋಪದ ಮೇಲೆ ಅಮಾನತು ಮಾಡುವಂತೆ ಜೂನ್ 11ರಂದು ನಡೆದ ಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಗಿತ್ತು. ಈ ಸಂಬಂಧ ನೌಕರನಿಗೂ ನೋಟಿಸ್ ನೀಡಲಾಗಿತ್ತು.

# ಕೆಎಸ್ಆರ್‌ಟಿಸಿ ನೌಕರರ ಕೂಟಕ್ಕೆ ನೀಡಿದ್ದ ಬೆಂಬಲ ವಾಪಸ್: ಹರೀಶ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕಾರ್ಮಿಕರ ಬೇಡಿಕೆ ಈಡೇರಿಕೆಗಾಗಿ ಈ ಹಿಂದೆ ನಡೆದಿದ್ದ ಬೃಹತ್ ಮುಷ್ಕರಕ್ಕೆ ನಾವೂ ಕೈಜೋಡಿಸಿದ್ದೆವು. ಆದರೆ ಈಗ ಕೆಎಸ್ಆರ್‌ಟಿಸಿ ನೌಕರರ ಕೂಟ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಏಕಪಕ್ಷೀಯ ನಿರ್ಧಾರಗಳನ್ನು ಕೈಗೊಳ್ಳುತ್ತಿದೆ. ಹೀಗಾಗಿ ಈ ಕೂಟಕ್ಕೆ ನೀಡಿದ್ದ ಬೆಂಬಲ ಹಿಂಪಡೆಯುತ್ತಿದ್ದೇವೆ' ಎಂದು ಕೆಎಸ್ಆರ್‌ಟಿಸಿ ಒಕ್ಕೂಟಗಳ ಅಧಿಕಾರಿಗಳು ಹಾಗೂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪಿ.ಹರೀಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು 'ಮುಷ್ಕರದ ವೇಳೆ ಅನೇಕ ನೌಕರರನ್ನು ವಜಾಗೊಳಿಸಲಾಗಿದೆ. ಕೆಲವರನ್ನು ಅಮಾನತು ಮಾಡಲಾಗಿದೆ. ಹಲವರ ಮೇಲೆ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಿಸಲಾಗಿದೆ. ಇದನ್ನೆಲ್ಲಾ ಸರಿಪಡಿಸಬೇಕು ಎಂಬುದು ನಮ್ಮ ಮನವಿಯಾಗಿತ್ತು. ಕೆಎಸ್ಆರ್‌ಟಿಸಿ ನೌಕರರ ಕೂಟದ ಅಧ್ಯಕ್ಷ ಆರ್.ಚಂದ್ರಶೇಖರ್ ಹಾಗೂ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಈ ನಿಟ್ಟಿನಲ್ಲಿ ಯಾವ ನಿರ್ಣಯಗಳನ್ನೂ ಕೈಗೊಳ್ಳಲಿಲ್ಲ. ಇದರಿಂದ ನಮಗೆ ಬೇಸರವಾಗಿದೆ' ಎಂದರು.

ಪ್ರಧಾನ ಕಾರ್ಯದರ್ಶಿ ಚನ್ನಕೇಶವ, 'ಚಂದ್ರಶೇಖರ್ ತಮಗೆ ಬೇಕಾದ ರೀತಿಯಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಸಂಘದ ಪದಾಧಿಕಾರಿಗಳನ್ನೂ ಉಚ್ಚಾಟಿಸಿದ್ದಾರೆ. ಅವರ ಸ್ವಾರ್ಥದಿಂದಾಗಿ ನೌಕರರಿಗೆ ನಾಲ್ಕು ತಿಂಗಳಿಂದ ಸಂಬಳ ಸಿಕ್ಕಿಲ್ಲ. ಇದರಿಂದ ಹಲವು ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ' ಎಂದು ದೂರಿದರು.

'ಸಾರಿಗೆ ಸಚಿವರನ್ನು ಭೇಟಿಯಾಗಿ ನಮ್ಮ ಸಮಸ್ಯೆಗಳನ್ನು ಹೇಳಿಕೊಂಡಿದ್ದೇವೆ. ಬೇಡಿಕೆಗಳನ್ನು ಈಡೇರಿಸುವಂತೆಯೂ ಮನವಿ ಮಾಡಿದ್ದೇವೆ. ಕೋವಿಡ್ ನಿಂದಾಗಿ ಆರ್ಥಿಕ ಹಿನ್ನಡೆ ಉಂಟಾಗಿದ್ದು, ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ನಮ್ಮೆಲ್ಲಾ ಬೇಡಿಕೆಗಳನ್ನು ಈಡೇರಿಸುವ ಭರವಸೆಯನ್ನು ಅವರು ನೀಡಿದ್ದಾರೆ. ವಿವಿಧ ಘಟಕಗಳಲ್ಲಿ ನೌಕರರಿಗೆ ಕಿರುಕುಳ ಆಗುತ್ತಿರುವ ವಿಚಾರವನ್ನೂ ಅವರ ಗಮನಕ್ಕೆ ತಂದಿದ್ದೇವೆ. ಈ ಸಂಬಂಧ ವ್ಯವಸ್ಥಾಪಕ ನಿರ್ದೇಶಕರ ಜೊತೆ ಸಭೆ ನಡೆಸಿ ಚರ್ಚಿಸುವುದಾಗಿ ಹೇಳಿದ್ದಾರೆ. ನಮ್ಮ ಸಮಸ್ಯೆಯನ್ನು ಸಚಿವ ಆರ್.ಅಶೋಕ ಹಾಗೂ ಬಸವರಾಜ ಬೊಮ್ಮಾಯಿ ಅವರ ಗಮನಕ್ಕೂ ತಂದಿದ್ದೇವೆ' ಎಂದು ಹೇಳಿದರು.

ಉಪಾಧ್ಯಕ್ಷ ಕೆ.ನಾಗೇಶ್, ಖಜಾಂಚಿ ಎಚ್.ಆರ್.ಜಗದೀಶ್ ಇದ್ದರು.

## ಮೇಕೆದಾಟು ಯೋಜನೆಗೆ ಅನುಮತಿ ಇಲ್ಲ: ದುರೈ ಮುರುಗನ್

**ನವದೆಹಲಿ/ಚೆನ್ನೈ:** ತಮಿಳುನಾಡಿನ ಸರ್ವಪಕ್ಷ ನಿಯೋಗವು ಮೇಕೆದಾಟು ಯೋಜನೆ ಕುರಿತು ಕೇಂದ್ರ ಜಲಶಕ್ತಿ ಇಲಾಖೆ ಸಚಿವರನ್ನು ಭೇಟಿ ಮಾಡಿ ಚರ್ಚಿಸಿತು. 'ಯೋಜನೆ ಕುರಿತು ಕರ್ನಾಟಕ ಸರ್ಕಾರ ಸಿದ್ಧಪಡಿಸಿದ ವಿವರವಾದ ಯೋಜನಾ ವರ

ಕಟುವಾದ ಮಾತುಗಳಿಂದಲೇ ಸರ್ಕಾರಕ್ಕೆ ಚಾಟಿ ಬೀಸುತ್ತಿದ್ದ ಮುತ್ಸದ್ದಿ ಜಿ.ಮಾದೇಗೌಡ

# ಹೋರಾಟದ ಬದುಕಿನ ಸಮಾಜಮುಖಿ ರಾಜಕಾರಣಿ

• ಸುನಂದಾ ಜಯರಾಂ

**ತಮಿಳುನಾಡಿಗೆ ಕಾವೇರಿ ನೀರು ಬಿಟ್ಟರೆ ಜನ ದಂಗೆ ಏಳುತ್ತಾರೆ....**

–ಈ ಕಟುವಾದ ಮಾತಿನಿಂದ ಮುತ್ಸದ್ದಿ ನಾಯಕ ಜಿ.ಮಾದೇಗೌಡ ಅವರು ರಾಜ್ಯದ ಗಮನ ಸೆಳೆಯುತ್ತಿದ್ದರು. ಯಾವುದೇ ಸರ್ಕಾರವಿರಲಿ, ಮುಖ್ಯಮಂತ್ರಿಗೆ ಕರೆಮಾಡಿ ಏಕವಚನದಲ್ಲಿ ಆಕ್ರೋಶ ಹೊರಹಾಕುತ್ತಿದ್ದರು.

1991, ಜುಲೈ 25ರಂದು ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ತೀರ್ಪು ಹೊರ ಬಂದಾಗ ಮಂಡ್ಯ ಜಿಲ್ಲೆ ಅಕ್ಷರಶಃ ಬೆಂಕಿಯ ಉಂಡೆಯಾಗಿತ್ತು. ಪ್ರತಿವರ್ಷ ತಮಿಳುನಾಡಿಗೆ 205 ಟಿಎಂಸಿ ಅಡಿ ನೀರು ಹರಿಸಲು ಗೆಜೆಟ್ ಅಧಿಸೂಚನೆ ಹೊರಬಿತ್ತು. ರಾಜ್ಯಕ್ಕೆ ಆದ ಘೋರ ಅನ್ಯಾಯದ ವಿರುದ್ಧ ಜಿ.ಮಾದೇಗೌಡರು ಉಗ್ರ ಹೋರಾಟಕ್ಕೆ ಕರೆ ಕೊಟ್ಟರು. ಆಗಲೇ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ರಚನೆಯಾಯಿತು.

ಎಲ್ಲಾ ಪಕ್ಷದ ಹೋರಾಟ ರೈತ ಸಂಘಟನೆಗಳ, ಪ್ರಗತಿಪರ ಸಂಘಟನೆಗಳನ್ನು ಒಗ್ಗೂಡಿಸಲು ಸಮಿತಿಯ ಅಧ್ಯಕ್ಷರನ್ನಾಗಿ ಮಾದೇಗೌಡರನ್ನು ಆಯ್ಕೆ ಮಾಡಲಾಯಿತು. ಉತ್ತರ ಕರ್ನಾಟಕದ ಜನರ ಆಶಯದಂತೆ ಕೃಷ್ಣ- ಕಾವೇರಿ ಹೋರಾಟ ಸಮಿತಿಯ ಅಧ್ಯಕ್ಷರಾಗಿಯೂ ಆಯ್ಕೆಯಾದರು. ನಂತರ ನಡೆದದ್ದು ಇತಿಹಾಸ. ದೀರ್ಘ ರಾಜಕೀಯ ಇತಿಹಾಸದ ಜೊತೆಗೆ ಅವರೊಬ್ಬ ಹೋರಾಟಗಾರರಾಗಿ ಜನಮಾನಸದಲ್ಲಿ ಉಳಿದರು.

ಎಸ್.ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದಾಗ ತಮಿಳುನಾಡಿಗೆ ನೀರು ಹರಿಸುವುದಿಲ್ಲ ಎಂದು ಕೈಗೊಂಡ ನಿರ್ಧಾರದ ಹಿಂದೆ ಜಿ.ಮಾದೇಗೌಡರು ಪ್ರಮುಖ ಕಾರಣಕರ್ತರಾಗಿದ್ದರು. ಕಾವೇರಿ ಹೋರಾಟಕ್ಕಾಗಿ ಲೋಕಸಭಾ ಸದಸ್ಯತ್ವ ಸ್ಥಾನಕ್ಕೂ ರಾಜೀನಾಮೆ ಕೊಟ್ಟರು.

ಗೌಡರನ್ನು ಸಾರ್ವಜನಿಕರು ಒರಟು ಸ್ವಭಾವ, ಹಠ, ಕೋಪದ ವ್ಯಕ್ತಿ ಬಹಳ ಬುದ್ಧಿವಂತ ರಾಜಕಾರಣಿ ಹೀಗೆಲ್ಲಾ ಅಭಿಪ್ರಾಯ ಪಡುತ್ತಿದ್ದರು. ನಾನು ಅವರನ್ನು ಹತ್ತಿರದಿಂದ ಗಮನಿಸಿದ ಹಾಗೆ ಆ ಭಾವನೆಗಳು ರೈತರು, ಸಾರ್ವಜನಿಕರಿಗಾಗಿ ಕೆಲಸಗಳನ್ನು ಮಾಡಿಸುವಾಗ ಮಾತ್ರ ಎಂಬುದು ಗೊತ್ತಾಯಿತು. ಹಾಸ್ಯಪ್ರಜ್ಞೆ ಹೊಂದಿದ್ದ ಅವರು ಸೌಮ್ಯ, ಹೃದಯವಂತ ಹಾಗೂ ಸಾಮಾನ್ಯ ಜನರ ಜೊತೆಯಲ್ಲಿ ಸಲೀಸಾಗಿ ಬೆರೆಯುವ ವ್ಯಕ್ತಿಯಾಗಿದ್ದರು. ಸಾರ್ವಜನಿಕರು ಸಹ ಅವರ ಜೊತೆ ಸಲೀಸಾಗಿ ಬೆರೆಯಬಹುದಿತ್ತು.

ಮದ್ದೂರು ತಾಲ್ಲೂಕು, ಗುರುದೇವರಹಳ್ಳಿ 1928ರಲ್ಲಿ ಜನಿಸಿದ ಜಿ.ಮಾದೇಗೌಡರು ಬಿಎ ಎಲ್ಎಲ್ ಬಿ ವಿದ್ಯಾಭ್ಯಾಸದೊಂದಿಗೆ ಕೃಷಿ, ರಾಜಕೀಯ, ಸಾಮಾಜಿಕ ಶಿಕ್ಷಣ, ಆರೋಗ್ಯ, ಕ್ರೀಡೆ ಇನ್ನಿತರ ಕ್ಷೇತ್ರಗಳ ಪರಿಣತಿಯೊಂದಿಗೆ ಸಮಾಜಮುಖಿಯಾಗಿ ಗುರುತಿಸಿಕೊಂಡಿದ್ದರು.

6 ಬಾರಿ ವಿಧಾನಸಭೆ ಸದಸ್ಯರಾಗಿ, ಕ್ಯಾಬಿನೆಟ್ ಸಚಿವರಾಗಿ, ಎರಡು ಬಾರಿ ಸಂಸತ್ ಸದಸ್ಯರಾಗಿ, ಮೈಷುಗರ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಮಾದೇಗೌಡರಿಗೆ ರಾಜಕಾರಣ, ಹೋರಾಟ ಮನೋಭಾವ ಜನ್ಮಜಾತವಾಗಿ ಬಂದಿತ್ತು. ಜನ ಸಮುದಾಯದ ಹಿತಕ್ಕಾಗಿ ರಚನಾತ್ಮಕ ಯೋಜನೆಗಳೊಂದಿಗೆ ಹೋರಾಟಕ್ಕಿಳಿದಿದ್ದರು. ಶ್ರದ್ಧೆಯಿಂದ ಅವುಗಳನ್ನು ಜಾರಿಗೊಳಿಸಲು ನಿರಂತರವಾಗಿ ಶ್ರಮವಹಿಸುತ್ತಿದ್ದರು. ಹುಟ್ಟೂರಿನಲ್ಲಿ ಸ್ವಂತ ಭೂಮಿಯನ್ನು ದಾನ ಮಾಡಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಿದ್ದರು.

ಗ್ರಾಮೀಣ ಪ್ರದೇಶದ ಮಕ್ಕಳಿಗೆ ಸ್ಥಳೀಯವಾಗಿ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಕಾಳಮುದ್ದನ ದೊಡ್ಡಿ (ಕೆ.ಎಂ.ದೊಡ್ಡಿ) ಗ್ರಾಮಕ್ಕೆ ಹೊಸ ರೂಪ ಕೊಟ್ಟರು. ಈಗ ಅದು ಭಾರತೀನಗರವಾಗಿ ರೂಪುಗೊಂಡಿದ್ದು ಶೈಕ್ಷಣಿಕ ಕಾಶಿಯಾಗಿ ಗುರುತಿಸಿಕೊಂಡಿದೆ. ರೈತರ ಆರ್ಥಿಕ ಅಭಿವೃದ್ಧಿಗಾಗಿ ಭಾರತಿ ಸಹಕಾರ ಸಕ್ಕರೆ ಕಾರ್ಖಾನೆ ಸ್ಥಾಪಿಸಿ ಕೈಗಾರೀಕರಣಕ್ಕೆ ನಾಂದಿ ನಾಡಿದರು.ನಂತರ ಅದು ಈಗಿನ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯಾಗಿದೆ. ಧಾರ್ಮಿಕ ವಿಚಾರವಾಗಿ ಹಾಗೂ ಪ್ರವಾಸಿ ತಾಣದ ಆಲೋಚನೆಯಿಂದ ಆತ್ಮಲಿಂಗೇಶ್ವರ ದೇವಸ್ಥಾನ ನಿರ್ಮಿಸಿದರು. ಈಗ ಅದು ರಾಜ್ಯದ ಪ್ರಮುಖ ಪ್ರವಾಸಿತಾಣವಾಗಿ ರೂಪುಗೊಂಡಿದೆ. ಮೈಷುಗರ್ ಕಾರ್ಖಾನೆ ಸರ್ಕಾರಿ ಸ್ವಾಮ್ಯದಲ್ಲೇ ಉಳಿಯಬೇಕು ಎಂಬುದು ಅವರ ಬಲವಾದ ನಿಲುವಾಗಿತ್ತು.

ಆರೋಗ್ಯ ಸೇವೆಗಾಗಿ ಪ್ರಕೃತಿಧಾಮ (ನೈಸರ್ಗಿಕ ಚಿಕಿತ್ಸೆ) ಹಾಗೂ ತಮ್ಮ ಹೆಸರಿನಲ್ಲಿ ಜಿ ಮಾದೇಗೌಡ ಆಸ್ಪತ್ರೆಯನ್ನು ನಿರ್ಮಿಸಿದರು. ಮಂಡ್ಯ ನಗರದ ಮಧ್ಯಭಾಗದಲ್ಲಿ ಗಾಂಧಿ ಭವನ ನಿರ್ಮಾಣ ಮಾಡಿ ವಿವಿಧ ಚಟುವಟಿಕೆ ಆರಂಭಿಸಿದರು. ಮಂಡ್ಯ ತಾಲ್ಲೂಕಿನ ಎಚ್.ಮಲ್ಲಿಗೆರೆ ಗ್ರಾಮ ವ್ಯಾಪ್ತಿಯಲ್ಲಿ ಗಾಂಧಿ ಗ್ರಾಮ ನಿರ್ಮಾಣ ಮಾಡಲು 20 ಎಕರೆ ಭೂಮಿಯನ್ನು ಮಂಜೂರು ಮಾಡಿಸಿದ್ದರು.

ಬದುಕಿನಲ್ಲಿ ಬಹಳ ಎತ್ತರಕ್ಕೆ ಬೆಳೆದಿರುವ ಅವರ ಬಗ್ಗೆ ಮುಂದಿನ ಪೀಳಿಗೆಗೆ ಅಧ್ಯಯನಕ್ಕೆ ಅವಕಾಶವಾಗಬೇಕು. ತಮ್ಮ ಜೀವನದಲ್ಲಿ ಬಹಳಷ್ಟು ಸಮಯವನ್ನು ಸಮಾಜಕ್ಕಾಗಿ ಮೀಸಲಿಟ್ಟ ಜಿ.ಮಾದೇಗೌಡರು ರಾಜ್ಯದಲ್ಲಿ ದಾಖಲೆಯಾಗಿ ಉಳಿಯುತ್ತಾರೆ.

ಲೇಖಕಿ: ಸಂಘಟನಾ ಕಾರ್ಯದರ್ಶಿ, ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ

ಮಂಡ್ಯದ ಗಾಂಧಿಭವನದಲ್ಲಿ ಸಂಗ್ರಹ ಮಾಡಲಾಗಿರುವ ಅಪರೂಪದ ಛಾಯಾಚಿತ್ರಗಳೆದುರು ಜಿ.ಮಾದೇಗೌಡ

## ಜಿ.ಮಾದೇಗೌಡ ನಿಧನ

ಮಂಡ್ಯ: ಅನಾರೋಗ್ಯದಿಂದ ಬಳಲುತ್ತಿದ್ದ ರೈತ ಹಿತರಕ್ಷಣಾ ಸಮಿತಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ, ಮಾಜಿ ಸಂಸದ ಜಿ.ಮಾದೇಗೌಡ (94) ಶನಿವಾರ ಭಾರತೀನಗರದ ಜಿ.ಮಾದೇಗೌಡ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನಿಧನರಾದರು.

ಶ್ವಾಸಕೋಶ ಸಮಸ್ಯೆಯಿಂದ ಬಳಲುತ್ತಿದ್ದ ಅವರು ಐಸಿಯುನಲ್ಲಿ ಚಿಕಿತ್ಸೆ ಪಡೆಯತ್ತಿದ್ದರು. ಮಾದೇಗೌಡರು ಕಾವೇರಿ ಹೋರಾಟದಲ್ಲಿ ಮುಂಚೂಣಿ ನಾಯಕರಾಗಿದ್ದರು. 1962ರಿಂದ ಕಿರುಗಾವಲು ವಿಧಾನಸಭಾ ಕ್ಷೇತ್ರದಿಂದ ಸತತ 6 ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಶಾಸಕರಾಗಿ ಆಯ್ಕೆಯಾಗಿದ್ದರು.

1980-83ರವರೆಗೆ ಗುಂಡೂರಾವ್ ಸಂಪುಟದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಚಿವರಾಗಿದ್ದರು.

ಕಿರುಗಾವಲು ಮಳವಳ್ಳಿ ಕ್ಷೇತ್ರದೊಂದಿಗೆ ಸೇರಿಕೊಂಡ ನಂತರ ಮಂಡ್ಯಕ್ಕೆ ಬಂದರು. 1989, 1995ರಲ್ಲಿ 2 ಬಾರಿ ಲೋಕಸಭಾ ಸದಸ್ಯರಾಗಿ ಗೆಲುವು ಸಾಧಿಸಿದ್ದರು. 1996ರಲ್ಲಿ ಕಾವೇರಿ ಹೋರಾಟ ತೀವ್ರಗೊಂಡಿದ್ದಾಗ ಸಂಸತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿ ಹೋರಾಟದಲ್ಲಿ ಪಾಲ್ಗೊಂಡರು. ಅದೇ ವರ್ಷ (1996) ನಡೆದ ಲೋಕಸಭಾ ಚುನಾವಣೆಯಲ್ಲಿ ಕೆ.ಆರ್.ಪೇಟೆ ಕೃಷ್ಣ ವಿರುದ್ಧ ಸೋಲು ಕಂಡರು. ನಂತರ 1998ರ ಲೋಕಸಭಾ ಚುನಾವಣೆಯಲ್ಲಿ ಅಂಬರೀಷ್ ವಿರುದ್ಧ ಸೋಲು ಕಂಡಿದ್ದರು. ನಂತರ ಅವರು ಸಕ್ರಿಯ ರಾಜಕಾರಣದಲ್ಲಿ ಇದ್ದರೂ ಚುನಾವಣೆಗೆ ಸ್ಪರ್ಧೆ ಮಾಡಲಿಲ್ಲ.

ವಿಧಾನಪರಿಷತ್ ಮಾಜಿ ಸದಸ್ಯ ಮಧು ಜಿ. ಮಾದೇಗೌಡ, ಮಿಮ್ಸ್ ನಿವೃತ್ತ ನಿರ್ದೇಶಕ ಡಾ.ಜಿ. ಎಂ.ಪ್ರಕಾಶ್ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಪಾರ್ಥಿವ ದೇಹವನ್ನು ನಗರದ ಗಾಂಧಿಭವನದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗುವುದು, ಭಾನುವಾರ ಭಾರತೀನಗರ ಸಮೀಪದ ಹನುಮಂತನಗರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಸುದ್ದಿ 2 ನಿಮಿಷ

### ಭೋವಿ ಜನೋತ್ಸವ ಇಂದು

**ಚಿತ್ರದುರ್ಗ:** ಭೋವಿ ಗುರುಪೀಠದ ಪೀಠಾಧ್ಯಕ್ಷ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಜನ್ಮದಿನದ ಅಂಗವಾಗಿ 'ಭೋವಿ ಜನೋತ್ಸವ' ಸಮಾರಂಭವನ್ನು ಕೋವಿಡ್ ಕಾರಣಕ್ಕೆ ಭಾನುವಾರ ಸರಳವಾಗಿ ಆಯೋಜಿಸಲಾಗಿದೆ.

ಸ್ವಾಮೀಜಿ ಅವರ 11ನೇ ಪಟ್ಟಾಧಿಕಾರ ಮಹೋತ್ಸವ, 35ನೇ ಜನ್ಮ ದಿನೋತ್ಸವ ಹಾಗೂ ಸಮಾಜ ಸೇವಾದೀಕ್ಷೆಯ 22ನೇ ವಾರ್ಷಿಕೋತ್ಸವದ ಅಂಗವಾಗಿ ಜುಲೈ 18ರಂದು ಆನ್‌ಲೈನ್ ಮೂಲಕ ಭೋವಿ ಜನೋತ್ಸವ ಹಮ್ಮಿಕೊಳ್ಳಲಾಗಿದೆ. ಧಾರ್ಮಿಕ ಕಾರ್ಯಕ್ರಮಗಳು ಮಠದಲ್ಲಿ ನಡೆಯಲಿವೆ. ಕೋವಿಡ್ ಕಾಲದಲ್ಲಿ ಕಾರ್ಯನಿರ್ವಹಿಸಿದ ವೈದ್ಯರಿಗೆ ಸನ್ಮಾನ ಹಾಗೂ ರಕ್ತದಾನ ಶಿಬಿರ ನಡೆಯಲಿದೆ.

ಅರಣ್ಯ ಸಚಿವ ಅರವಿಂದ ಲಿಂಬಾವಳಿ, ಕೆವಿಸ್‌ಆರ್‌ಟಿಸಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಚಂದ್ರಪ್ಪ, ಶಾಸಕರಾದ ಅಖಂಡ ಶ್ರೀನಿವಾಸಮೂರ್ತಿ, ಗೂಳಿಹಟ್ಟಿ ಶೇಖರ್, ಶಾಸಕ ಡಿ.ಎಸ್. ಹೂಲಗೇರಿ, ವೆಂಕಟರಮಣಪ್ಪ, ವಿಧಾನ ಪರಿಷತ್ ಸದಸ್ಯ ಸುನೀಲ್ ವಲ್ಯಾಪುರೆ, ಹಟ್ಟಿ ಚಿನ್ನದಗಣಿ ನಿಗಮದ ಅಧ್ಯಕ್ಷ ಮಾನಪ್ಪ ವಜ್ಜಲ್ ಹಾಗೂ ಭೋವಿ ಸಮಾಜದ ಮುಖಂಡರು ವರ್ಚುವಲ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಭಕ್ತರು www.bhovigurupeetha.com ಹಾಗೂ www.bhovigurupeetha.in ಜಾಲತಾಣದಲ್ಲಿ ಕಾರ್ಯಕ್ರಮವನ್ನು ವೀಕ್ಷಿಸಬಹುದು ಎಂದು ಗುರುಪೀಠದ ಪ್ರಕಟಣೆ ತಿಳಿಸಿದೆ.



### ಪತಂಗಗಳ ದಾಖಲೀಕರಣ ವಾರ

**ಮಂಗಳೂರು:** ಹತ್ತನೇ ರಾಷ್ಟ್ರೀಯ ಪತಂಗ ವಾರವನ್ನು (ಎನ್‌ಎಂಡಬ್ಲ್ಯೂ) ಶನಿವಾರ (ಜುಲೈ17)ದಿಂದ ಇದೇ 25ರವರೆಗೆ ಆಚರಿಸಲಾಗುತ್ತಿದೆ. ಈ ಅವಧಿಯಲ್ಲಿ ರಾಜ್ಯದೆಲ್ಲೆಡೆಯ ಪರಿಸರಪ್ರೇಮಿಗಳು ತಮ್ಮ ಸುತ್ತಮುತ್ತ ಕಾಣುವ ಪತಂಗಗಳನ್ನು ಸೆರೆಹಿಡಿದು iNaturalist.org ಇಲ್ಲಿ ಅಪ್‌ಲೋಡ್ ಮಾಡಬಹುದು ಎಂದು ಎನ್‌ಎಂಡಬ್ಲ್ಯೂ ತಂಡ ತಿಳಿಸಿದೆ.

ಪರಿಸರದಲ್ಲಿ ಪ್ರಾಣಿ–ಪಕ್ಷಿಗಳ ಆಹಾರ, ಪರಾಗಸ್ಪರ್ಶ ಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುವ ಪತಂಗಗಳ ಅಧ್ಯಯನಕ್ಕೆ ಪತಂಗ ವಾರದಲ್ಲಿ ನಡೆಯುವ ದಾಖಲೀಕರಣ ಸಹಕಾರಿಯಾಗಿದೆ ಎಂದು ಎನ್‌ಎಂಡಬ್ಲ್ಯೂ ತಂಡದ ಸದಸ್ಯರಾದ ಕೇಶವಮೂರ್ತಿ, ಮುದ್ದಾಸರ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿ https://nationalmothweek.org ಈ ವೆಬ್‌ಸೈಟ್ ವೀಕ್ಷಿಸಬಹುದು.

### ಒಕ್ಕಲಿಗ ಅಭಿವೃದ್ಧಿ ನಿಗಮ ಸ್ಥಾಪನೆಗೆ ಆದೇಶ

**ಬೆಂಗಳೂರು:** ಪ್ರಸಕ್ತ ವರ್ಷದ ಬಜೆಟ್ ಘೋಷಣೆಯಂತೆ ಒಕ್ಕಲಿಗ ಅಭಿವೃದ್ಧಿ ನಿಗಮ ಸ್ಥಾಪನೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಶನಿವಾರ ಆದೇಶ ಹೊರಡಿಸಿದೆ.

'ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯ ಪ್ರವರ್ಗ '3ಎ' ವ್ಯಾಪ್ತಿಯಲ್ಲಿರುವ ಒಕ್ಕಲಿಗ, ವಕ್ಕಲಿಗ, ಹಳ್ಳಿಕಾರ್ ಒಕ್ಕಲಿಗ, ನಾಮಧಾರಿ ಒಕ್ಕಲಿಗ, ಗಂಗಟ್‌ಕಾರ್ ಒಕ್ಕಲಿಗ, ದಾಸ ಒಕ್ಕಲಿಗ, ರೆಡ್ಡಿ ಒಕ್ಕಲಿಗ, ಮರಸು ಒಕ್ಕಲಿಗ, ಗೌಡ, ಹಳ್ಳಿಕಾರ್, ಕುಂಚಿಟಿಗ, ಕಾಪು, ಹೆಗ್ಗಡೆ, ಕಮ್ಮ, ರಡ್ಡಿ, ಗೌಂಡರ್, ನಾಮಧಾರಿ ಗೌಡ, ಉಪ್ಪಿನ ಕೊಳಗ ಮತ್ತು ಉತ್ತಮ ಕೊಳಗ ಉಪ ಪಂಗಡಗಳ ಅಭಿವೃದ್ಧಿಗಾಗಿ ಒಕ್ಕಲಿಗ ಅಭಿವೃದ್ಧಿ ನಿಗಮ ಸ್ಥಾಪಿಸಿ ಆದೇಶಿಸಲಾಗಿದೆ' ಎಂದು ಇಲಾಖೆ ತಿಳಿಸಿದೆ. ಒಕ್ಕಲಿಗ ಅಭಿವೃದ್ಧಿ ನಿಗಮದ ಚಟುವಟಿಕೆಗಳಿಗೆ ₹ 500 ಕೋಟಿ ಅನುದಾನ ಒದಗಿಸುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಜೆಟ್‌ನಲ್ಲಿ ಪ್ರಕಟಿಸಿದ್ದರು. ಅದಕ್ಕೆ ಪೂರಕವಾಗಿ ಆದೇಶ ಹೊರಡಿಸಿದ್ದು, 2013ರ ಕಂಪನಿ ಕಾಯ್ದೆಯಡಿ ನಿಗಮವನ್ನು ನೋಂದಾಯಿಸಿ, ಅಗತ್ಯವಿರುವ ಹುದ್ದೆಗಳ ಸೃಜನೆಗೆ ಅವಕಾಶ ಕಲ್ಪಿಸಲಾಗಿದೆ.

'ಪ್ರಜಾವಾಣಿ' ನನ್ನ ಎರಡನೇ ಮನೆ– ಮನದ ಮಾತು ತೆರೆದಿಟ್ಟ ಹಿರಿಯ ನಟ ಅನಂತನಾಗ್

# 'ಸಿನಿಮಾ ಪ್ರಶಸ್ತಿಗೂ ಜನರೇ ತೀರ್ಪುಗಾರರಾಗಲಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಇದೀಗ ಪದ್ಮ ಪ್ರಶಸ್ತಿಗೆ ಹೇಗೆ ಜನರಿಂದಲೇ ನಾಮನಿರ್ದೇಶನವನ್ನು ಕೇಳಲಾಗುತ್ತಿದೆಯೋ ಅದೇ ರೀತಿಯ ಬದಲಾವಣೆ ಚಿತ್ರರಂಗಕ್ಕೂ ಬರಬೇಕು. ಚಿತ್ರರಂಗದ ಪ್ರಶಸ್ತಿ ವ್ಯವಸ್ಥೆಯಲ್ಲೂ ಇದೇ ರೀತಿ ಜನರ ಭಾಗವಹಿಸುವಿಕೆ ಇರಬೇಕು. ಈ ರೀತಿಯ ಹೊಸ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ಚಿತ್ರರಂಗದ ಪ್ರಶಸ್ತಿಯಲ್ಲಿ ಜಾರಿಗೊಳಿಸಬೇಕು' ಎಂದು ಹಿರಿಯ ನಟ ಅನಂತನಾಗ್ ಆಗ್ರಹಿಸಿದ್ದಾರೆ.

'ಪ್ರಜಾವಾಣಿ' ಸೆಲೆಬ್ರಿಟಿ ಲೈವ್‌ನಲ್ಲಿ ಭಾಗವಹಿಸಿದ್ದ ಅನಂತನಾಗ್ ಅವರು ತಮ್ಮ ಸಿನಿಪಯಣ, ಪದ್ಮಶ್ರೀ ಪ್ರಶಸ್ತಿಗೆ ಅನಂತನಾಗ್ ಅವರನ್ನು ನಾಮನಿರ್ದೇಶನ ಮಾಡಿ ಸಾಮಾಜಿಕ ಜಾಲತಾಣದಲ್ಲಿ ನಡೆಯುತ್ತಿರುವ ಅಭಿಯಾನ, ಯುವಪ್ರತಿಭೆಗಳ ಮೂಲಕ ತನ್ನ ತಮ್ಮ ಶಂಕರನನ್ನು ಕಂಡ ಬಗೆ, ರಾಜಕೀಯ ಪಯಣದ ಬಗ್ಗೆ ಮನಸ್ಸುಬಿಚ್ಚಿ ಮಾತನಾಡಿದರು.

'ಹೇಮಂತ್ ರಾವ್ ನಿರ್ದೇಶನದ ಮೊದಲ ಚಿತ್ರ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು'. ಎಂತಹ ಯಶಸ್ವಿಯಾದರೂ ಈ ಚಿತ್ರಕ್ಕೆ ಒಂದೂ ಪ್ರಶಸ್ತಿ ಕೊಡಲಿಲ್ಲ. ನನಗೆ ಸಿಗಲಿಲ್ಲ ಎಂದು ನಾನು ಕೇಳುತ್ತಿಲ್ಲ. ಒಂದೇ ಒಂದು ವಿಭಾಗದಲ್ಲೂ ಪ್ರಶಸ್ತಿ ಸಿಗದಂತೆ ನೋಡಿಕೊಂಡಿದ್ದಾರೆ. ಹೀಗಿದ್ದಾಗ ಸರ್ಕಾರಗಳು ಯಾಕೆ ಈ ರೀತಿ ಪ್ರಶಸ್ತಿಗಳನ್ನು ನೀಡಬೇಕು. ಈ ತೀರ್ಪುಗಾರರ ಸಮಿತಿಗೆ ನೇಮಕ ಮಾಡುವವರು ಯಾರು? ತೀರ್ಪುಗಾರರ ಆಯ್ಕೆಗೆ ಮಾನದಂಡಗಳೇನು? ಮತ್ತರಕ್ಕೆ ಮದ್ದಿಲ್ಲ ಎನ್ನುತ್ತಾರೆ. ಗಲ್ಲಾಪೆಟ್ಟಿಗೆಯಲ್ಲಿ ಇದರ ಯಶಸ್ಸು ಕಂಡು ಮತ್ತರ ಹುಟ್ಟಿಕೊಂಡಿತ್ತು' ಎಂದು ಅನಂತನಾಗ್ ಆಕ್ರೋಶ ವ್ಯಕ್ತಪಡಿಸಿದರು.

**ಈ ಪರಿಸ್ಥಿತಿ ಅಗತ್ಯವಿತ್ತು:** ಪದ್ಮಪ್ರಶಸ್ತಿಗೆ ಜನರಿಂದಲೇ ನಾಮನಿರ್ದೇಶನ ಕೇಳುವ ಅಗತ್ಯವಿತ್ತೇ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, 'ಪದ್ಮ ಪ್ರಶಸ್ತಿಯನ್ನು ಯಾವ ಆಧಾರದ ಮೇಲೆ ಕೊಡುತ್ತಾರೆ ಎನ್ನುವುದು ಯಾರಿಗೂ ಗೊತ್ತಿರಲಿಲ್ಲ. ನಮ್ಮ ದೇಶದಲ್ಲಿ ಪದ್ಮ ಪ್ರಶಸ್ತಿಯಾಗಲಿ ಅಥವಾ ಅತ್ಯುತ್ತಮ ನಟ, ನಟಿ ಮುಂತಾದ ಪ್ರಶಸ್ತಿಗಳನ್ನು ಕೊಡುವ ವ್ಯವಸ್ಥೆ ಸರಿ ಇಲ್ಲ. ಸ್ವಜನಪಕ್ಷಪಾತ, ಪೂರ್ವಗ್ರಹ ಈ ವ್ಯವಸ್ಥೆಯಲ್ಲಿದೆ. 'ಯಾರ್ಯಾರಿಗೋ ಕೊಡುತ್ತಿದ್ದಾರಲ್ಲ' ಎನ್ನುವ ಭಾವನೆ ಜನರಂತೆಯೇ ಕೆಲವೊಮ್ಮೆ ನನಗೇ ಅನಿಸಿದ್ದಿದೆ. ಜನರೇ ಪದ್ಮ ಪ್ರಶಸ್ತಿಯನ್ನು ಕಡೆಗಣಿಸಲು ಆರಂಭಿಸಿದರು. ಮೊದಲ ಬಾರಿಗೆ ಜನರ ಭಾಗವಹಿಸುವಿಕೆಗೆ ಅವಕಾಶ ಸಿಕ್ಕಿದೆ. ಈ ಪರಿಸ್ಥಿತಿ ಅಗತ್ಯವಿತ್ತು' ಎಂದರು.

'ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಇದರಲ್ಲಿ ಭಾಗವಹಿಸುವುದನ್ನು ನಿಲ್ಲಿಸಿ, ಜನರ ಆಯ್ಕೆಗೇ ಬಿಡಬೇಕು. ಕಳೆದ ನಾಲ್ಕೈದು ದಿನಗಳಿಂದ ನನ್ನ ಮೇಲೆ ಅಭಿಮಾನ, ಪ್ರೀತಿ ವಿಶ್ವಾಸದ ಮಹಾಪೂರವೇ ಹರಿದುಬಂತು. ಅಭಿಮಾನದ ಮಹಾಪೂರದಲ್ಲಿ ಕೊಚ್ಚಿಕೊಂಡು ಹೋಗುವ ಭಯಬಂತು. ನಾನೀಗ ಏನಾಗಿದ್ದೇನೋ ಎಲ್ಲವೂ ಚಿತ್ರರಂಗದಿಂದ' ಎಂದು ಮುಗುಳ್ನಕ್ಕರು ಅನಂತನಾಗ್.

**'ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್' ಎರಡನೇ ಮನೆ:** 'ಶಾಲಾ ದಿನಗಳು ಕರಾವಳಿಯಲ್ಲಿ, ನಂತರ ಮುಂಬೈನಲ್ಲಿ ಜೀವನ. ಕಲಾ ವಿಭಾಗ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗದಲ್ಲಿ ಕಲಿತರೂ ತೇರ್ಗಡೆ ಹೊಂದಿದ್ದು ರಂಗಭೂಮಿಯಲ್ಲಿ ಮಾತ್ರ. 1973ರಲ್ಲಿ 'ಸಂಕಲ್ಪ' ಚಿತ್ರಕ್ಕೆ ನನ್ನನ್ನು ಆಯ್ಕೆ ಮಾಡಿದರವೇ ವೈ.ಎನ್.ಕೆ, ಗಿರೀಶ ಕಾರ್ನ

# ಆಟವಿಲ್ಲ, ಶಿಬಿರವಿಲ್ಲ; ನಿರ್ವಹಣೆಯ ಹೊರೆ!

• ಕೆ.ಓಂಕಾರ ಮೂರ್ತಿ

**ಮೈಸೂರು:** ಶಿಬಿರವಿಲ್ಲ, ಆಟೋಟವಿಲ್ಲ. ಆದರೆ, ಕ್ರೀಡಾಂಗಣ, ಒಳಾಂಗಣ ಕ್ರೀಡಾಂಗಣ, ಈಜುಕೊಳಗಳನ್ನು ನಿತ್ಯ ಸ್ವಚ್ಛಗೊಳಿಸಲೇಬೇಕು. ವಿದ್ಯುತ್, ನೀರಿನ ಬಿಲ್ ಪಾವತಿಸಲೇಬೇಕು. ಕೋಚ್, ಭದ್ರತಾ ಹಾಗೂ ನಿರ್ವಹಣಾ ಸಿಬ್ಬಂದಿಗೆ ಸಂಬಳ ನೀಡಲೇಬೇಕು...

ಕೊರೊನಾ–ಲಾಕ್‌ಡೌನ್ ಪರಿಣಾಮ ಒಂದೂವರೆ ವರ್ಷದಿಂದ ಕ್ರೀಡಾಕೂಟಗಳು ಸರಿಯಾಗಿ ನಡೆದಿಲ್ಲ. ತರಬೇತಿ ನೀಡಲು, ಶಿಬಿರ ನಡೆಸಲು ರಾಜ್ಯದ ಹಲವು ಕ್ಲಬ್‌ಗಳು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳಿಗೆ ಸಾಧ್ಯವಾಗಿಲ್ಲ. ಕ್ರೀಡಾ ಇಲಾಖೆಯ ಹಲವು ಕ್ರೀಡಾಂಗಣಗಳು ಪಾಳು ಬಿದ್ದಿವೆ. ಹಲವು ಸಿಬ್ಬಂದಿ ಹಾಗೂ ಕೋಚ್‌ಗಳು ಕೆಲಸ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಸಾಮಾನ್ಯವಾಗಿ ಬೇಸಿಗೆ ಸಮಯದಲ್ಲಿ ಶಿಬಿರ ಆಯೋಜನೆ ಮೂಲಕ ಕ್ರೀಡಾ ತರಬೇತಿ ಕೇಂದ್ರಗಳಿಗೆ, ಕ್ಲಬ್‌ಗಳಿಗೆ, ಸಂಸ್ಥೆಗಳಿಗೆ ದೊಡ್ಡ ಮಟ್ಟದಲ್ಲಿ ಆದಾಯ ಲಭಿಸುತ್ತದೆ. ಅದರಿಂದಲೇ ವರ್ಷಪೂರ್ತಿ ನಿರ್ವಹಣೆ ಮಾಡಲು ಸಾಧ್ಯವಾಗುತ್ತದೆ. ಬೇಸಿಗೆಯಲ್ಲಿ ಶಾಲಾ ಕಾಲೇಜುಗಳಿಗೆ ರಜೆಯೂ ಇರುವ ಕಾರಣ

ಲಾಕ್‌ಡೌನ್ ವೇಳೆ ಮೈಸೂರಿನ ಜೆ.ಪಿ.ನಗರದ ಈಜುಕೊಳ ಪಾಚಿಗಟ್ಟಿತ್ತು.

ತರಬೇತಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಬರುತ್ತಾರೆ. ದುರದೃಷ್ಟಕರ ಎಂದರೆ ಕಳೆದ ಎರಡೂ ಬೇಸಿಗೆಗಳಲ್ಲಿ ಕೋವಿಡ್ ನಿರ್ಬಂಧಗಳ ಕಾರಣ ತರಬೇತಿಗೆ ತಡೆ ಬಿದ್ದಿತ್ತು.

ಮೈಸೂರಿನ ಜೆ.ಪಿ.ನಗರದಲ್ಲಿರುವ ಈಜುಕೊಳದ ಪರಿಸ್ಥಿತಿಯನ್ನೇ ಗಮನಿಸಿ. ಪಾಲಿಕೆಯು ಇದರ ನಿರ್ವಹಣೆಯನ್ನು 30 ವರ್ಷಗಳ ಅವಧಿಗೆ ಖಾಸಗಿಯವರಿಗೆ ಗುತ್ತಿಗೆ ನೀಡಿದೆ. ಆದರೆ, ಲಾಕ್‌ಡೌನ್ ವೇಳೆ ಸರಿಯಾಗಿ ನಿರ್ವಹಣೆ ಮಾಡಲು ಸಾಧ್ಯವಾಗದೆ ಪಾಚಿ ಬೆಳೆದುಕೊಂಡಿದೆ. 'ಬೇಸಿಗೆಯ ನಾಲ್ಕು ತಿಂಗಳಲ್ಲಿ ದುಡಿದ ಹಣದಿಂದ ವರ್ಷವಿಡೀ ಈಜುಕೊಳ ನಿರ್ವಹಿಸುತ್ತಿದ್ದೆವು. ಆದರೆ, ಕೋವಿಡ್‌ನಿಂದಾಗಿ ನಿರ್ವಹಣೆಯದ್ದೇ ದೊಡ್ಡ ಸಮಸ್ಯೆಯಾಗಿದೆ. ಈಜುಕೊಳಕ್ಕೆ ಸದಾ ನೀರು ಹರಿಸುತ್ತಲೇ ಇರಬೇಕು. ಇಲ್ಲದಿದ್ದರೆ ಟೈಲ್ಸ್ ಬಿರುಕು ಬಿಡುತ್ತವೆ, ಪೈಪ್‌ಗಳ ಒಳಗೆ ಕಸ ಸಂಗ್ರಹವಾಗುತ್ತದೆ. ಚೆನ್ನಾಗಿ ಇಟ್ಟುಕೊಳ್ಳಬೇಕೆಂದರೆ ನೀರು ಹರಿಸಬೇಕು. ಅದಕ್ಕೆ ನೀರಿನ ಬಿಲ್, ವಿದ್ಯುತ್ ಬಿಲ್ ಪಾವತಿ ಜೊತೆಗೆ ಸಿಬ್ಬಂದಿಗೂ ಸಂಬಳ ಕೊಡಬೇಕು. ಯಾರೂ ಬರದಿದ್ದರೆ ಈ ಹಣ ಹೊಂದಿಸುವುದು ಹೇಗೆ' ಎಂದು ಈಜು ಕೋಚ್ ಎಸ್.ಸುಂದರೇಶ್ ಪ್ರಶ್ನಿಸುತ್ತಾರೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಅತ್ಯುತ್ತಮ ಕ್ರೀಡಾ ಸೌಲಭ್ಯಗಳಿವೆ. ವಿವಿಧ ಕ್ರೀಡಾ ಸಂಸ್ಥೆಗಳಿಗೆ ಕ್ರೀಡಾಕೂಟ ಆಯೋಜನೆಗೆ, ಶಿಬಿರ ನಡೆಸಲು ಬಾಡಿಗೆ ನೀಡುತ್ತಿರುತ್ತಾರೆ. ಈಜುಕೊಳದಿಂದಲೇ ವರ್ಷಕ್ಕೆ ₹ 80 ಲಕ್ಷ ಆದಾಯ ಸಿಗುತ್ತದೆ. ಆದರೆ, ಒಂದೂವರೆ ವರ್ಷದಿಂದ ಬಳಕೆ ಆಗಿಲ್ಲ. ನಿರ್ವಹಣೆಗೆ ವೆಚ್ಚ ಭರಿಸಬೇಕಿದೆ, ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಿರುವ ಸಿಬ್ಬಂದಿಗೆ ಕೆಲಸವಿಲ್ಲದಿದ್ದರೂ ವೇತನ ನೀಡಬೇಕಾಗಿದೆ.

'ಈಗ ಆದಾಯವೂ ಇಲ್ಲ; ಬರೀ ಖರ್ಚು. ಕ್ರೀಡಾ ಉಪಕರಣಗಳನ್ನು ಬಳಸುತ್ತಿದ್ದರೆ ಚೆನ್ನಾಗಿರುತ್ತವೆ. ಇಲ್ಲದಿದ್ದರೆ ತುಕ್ಕು ಹಿಡಿಯುತ್ತವೆ, ದೂಳು ಹಿಡಿದು ಹಾಳಾಗುತ್ತವೆ' ಎಂದು ಮೈಸೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಪಿ.ಕೃಷ್ಣಯ್ಯ ಹೇಳುತ್ತಾರೆ.

ಗ್ರಾಮೀಣ ಭಾಗದಲ್ಲಿ ಕ್ರೀಡಾ ಇಲಾಖೆಯ ಕ್ರೀಡಾಂಗಣಗಳು ನಿರ್ವಹಣೆ ಇಲ್ಲದೆ ಸೊರಗಿವೆ. ಅಲ್ಲಿ ಕಳೆ, ಪಾಚಿ ಬೆಳೆದಿದೆ.

'ಕ್ರೀಡಾಂಗಣದ ಸ್ವಚ್ಛತೆ ಹಾಗೂ ರಕ್ಷಣೆಯೇ ಸವಾಲಾಗಿದೆ. ಮೈಸೂರಿನ ಚಾಮುಂಡಿವಿಹಾರದಲ್ಲಿರುವ ಕ್ರೀಡಾ ಇಲಾಖೆಯ ಈಜುಕೊಳವನ್ನು ಖಾಸಗಿಯವರಿಗೆ ₹ 28 ಲಕ್ಷಕ್ಕೆ ಐದು ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ. ಕೋವಿಡ್ ಕಾರಣ ಅವರಿಗೆ ನಷ್ಟವಾಗಿದೆ. ಹೀಗಾಗಿ, ಹೆಚ್ಚುವರಿಯಾಗಿ 3 ತಿಂಗಳು ಗುತ್ತಿಗೆ ಅವಧಿ ವಿಸ್ತರಿಸಬೇಕಾಗಿದೆ' ಎಂದು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಓಂಪ್ರಕಾಶ್ ಹೇಳಿದರು.

ಮಡಿಕೇರಿಯಲ್ಲಿರುವ ಜನರಲ್ ತಿಮ್ಮಯ್ಯ ಮೈದಾನವು ಅಧ್ವಾನದ ಸ್ಥಿತಿಗೆ ತಲುಪಿದೆ. ನಿರ್ವಹಣೆಯ ಕೊರತೆಯಿಂದಾಗಿ, ನಿತ್ಯ ವಾಯುವಿಹಾರ ನಡೆಸುವವರಿಗೆ ಹಾಗೂ ಅಭ್ಯಾಸ ನಡೆಸುವ ಕ್ರೀಡಾಪಟುಗಳಿಗೆ ಅಡ್ಡಿಯಾಗಿದೆ.

## ಕ್ರೀಡಾಪಟುಗಳು, ತಜ್ಞರ ಅಭಿಪ್ರಾಯ

### ಮರುಆರಂಭ ಎಲ್ಲಿಂದ ಎಂಬ ಗೊಂದಲ

ಕೊರೊನಾ ಲಾಕ್‌ಡೌನ್ ಅವಧಿಯಲ್ಲಿ ನಮಗೆ ಸರಿಯಾಗಿ ತರಬೇತಿ ಸಿಗಲಿಲ್ಲ. ಒಂದೂವರೆ ವರ್ಷದಲ್ಲಿ ನಾಲ್ಕು ತಿಂಗಳು ಮಾತ್ರ ಆಟವಾಡಿದ್ದೇವೆ. ಈಗ ಎಲ್ಲಿಂದ ತರಬೇತಿ ಆರಂಭಿಸಬೇಕು ಎಂಬ ಗೊಂದಲದಲ್ಲಿದ್ದೇವೆ. ಕ್ರೀಡಾಕೂಟಗಳು ನಡೆಯದೆ ನಮ್ಮ ಪ್ರತಿಭೆ ಕಮರುತ್ತಿದೆ. ಬಹುತೇಕ ಅಥ್ಲೀಟ್‌ಗಳಿಗೆ ಸರಿಯಾಗಿ ಅಭ್ಯಾಸ ಮಾಡಲೂ ಸಾಧ್ಯವಾಗುತ್ತಿಲ್ಲ.

**-ಮೊಹಮದ್ ಫಿರೋಜ್,** ಬ್ಯಾಡ್ಮಿಂಟನ್ ಆಟಗಾರ, ಕಲಬುರ್ಗಿ

### ಪದಕದ ಆಸೆ ಕಮರಿತು

ಮೊದಲು ಉತ್ತಮ ಅಭ್ಯಾಸ ಮಾಡುತ್ತಿದ್ದೆವು. ಈಗ ಎಲ್ಲವೂ ನಿಂತು ಹೋಗಿದೆ. ಲಾಕ್‌ಡೌನ್‌ನಿಂದಾಗಿ ಯಾವುದೇ ಟೂರ್ನಿಗಳು ನಡೆಯಲಿಲ್ಲ. ಹೀಗಾಗಿ ರಾಷ್ಟ್ರ-ಮಟ್ಟದ ಟೂರ್ನಿಯಲ್ಲಿ ಪದಕ ಗೆಲ್ಲುವ ಆಸೆ ಸಹ ಈಡೇರಲಿಲ್ಲ. ಲಾಕ್‌ಡೌನ್ ಅವಧಿಯಲ್ಲಿ ಆನ್‌ಲೈನ್ ತರಬೇತಿ ನಡೆಯುತ್ತಿತ್ತು. ಆದರೂ ಸಮರ್ಪಕವಾಗಿ ಅಭ್ಯಾಸ ಆಗಲಿಲ್ಲ.

**-ಅಶ್ವಥಿ,** ಕರಾಟೆ ಪಟು, ಕಲಬುರ್ಗಿ

### ಕುಂಠಿತಗೊಂಡ ದೈಹಿಕ ಚಟುವಟಿಕೆ

ಕೊರೊನಾದ ಬಿಕ್ಕಟ್ಟು, ಮಕ್ಕಳು ಮನೆಯಲ್ಲೇ ಇರುವಂತೆ ಮಾಡಿರುವುದರಿಂದ ಅವರ ದೈಹಿಕ ಚಟುವಟಿಕೆ ಕುಂಠಿತವಾಗಿವೆ. 'ಮೋಟಾರ್ ಎಬಿಲಿಟಿಸ್' (ತಮಗರಿವಿಲ್ಲದೇ ಮಕ್ಕಳು ರೂಢಿಸಿಕೊಳ್ಳುವ ಅಂಗಚಲನೆ) ಕ್ಷೀಣಿಸುವ ಅಪಾಯ ಇದೆ. ನಮ್ಮ ಅಂಗಗಳನ್ನು ಬಳಸಿದಷ್ಟು ಬಲಿಷ್ಠವಾಗುತ್ತವೆ. ಒಂದೊಮ್ಮೆ ಬಳಕೆ ಕಡಿಮೆಯಾದರೆ ಅಶಕ್ತವಾಗುತ್ತವೆ.

**-ಪ್ರೊ.ಶೇಷಣ್ಣ,** ದೈಹಿಕ ಶಿಕ್ಷಣ ತಜ್ಞ, ಮೈಸೂರು

### ಆನ್‌ಲೈನ್ ತರಬೇತಿಗೆ ನಿರಾಸಕ್ತಿ

ದೈಹಿಕ ಶಿಕ್ಷಣಕ್ಕೆ ತೊಂದರೆಯಾಗಬಾರದು ಎಂದು, ಫಿಟ್‌ನೆಸ್-ಯೋಗ ತರಬೇತಿಯನ್ನು ಆನ್‌ಲೈನ್ ಮೂಲಕವೇ ನೀಡಲು ಕಾಲೇಜು ಶಿಕ್ಷಣ ಇಲಾಖೆ ಸೂಚಿಸಿದೆ. ಕ್ರೀಡಾಂಗಣದಲ್ಲಿ ನಡೆಯುವ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದರಲ್ಲೇ ವಿದ್ಯಾರ್ಥಿಗಳಿಗೆ ಆಸಕ್ತಿ. ಹೀಗಾಗಿ, ಅವರು ಆನ್‌ಲೈನ್ ತರಗತಿಗೆ ನಿರೀಕ್ಷಿತ ಸಂಖ್ಯೆಯಲ್ಲಿ ಹಾಜರಾಗುತ್ತಿಲ್ಲ.

**-ಶ್ರೀಪಾಲ ಕುರಕುರಿ,** ದೈಹಿಕ ಶಿಕ್ಷಣ ನಿರ್ದೇಶಕ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಳ್ನಾವರ

# ಹಾಲು ಮಾರಾಟ ಆರಂಭಿಸಿದ ಜಿಮ್ ಟ್ರೇನರ್

• ವಿನಾಯಕ ಭಟ್

ಕಿರಣಕುಮಾರ್ ಎಸ್.ಪಿ.

**ದಾವಣಗೆರೆ:** ದಿನವೂ ಹತ್ತಾರು ಜನರಿಗೆ ದೈಹಿಕ ಕಸರತ್ತಿಗೆ ಮಾರ್ಗದರ್ಶನ ಮಾಡಿ ಅವರ ಆರೋಗ್ಯ ವೃದ್ಧಿಸಲು ಸಹಕರಿಸುತ್ತಿದ್ದ ಜಿಮ್ ತರಬೇತುದಾರ ಕಿರಣಕುಮಾರ್ ಎಸ್. ಪಿ. ಅವರು ಕೋವಿಡ್ ಲಾಕ್‌ಡೌನ್ ಪರಿಣಾಮ ಕೆಲಸ ಕಳೆದುಕೊಂಡಿದ್ದರಿಂದ, ಜೀವನ ನಿರ್ವಹಣೆಗೆ ಮನೆ-ಮನೆಗೆ ತೆರಳಿ ಹಾಲು ಮಾರಾಟಕ್ಕೆ ಮುಂದಾಗಿದ್ದಾರೆ.

ನಗರದ ಸಾಯಿ ಜಿಮ್‌ನಲ್ಲಿ ತರಬೇತುದಾರರಾಗಿದ್ದ ಹರಿಹರ ತಾಲ್ಲೂಕಿನ ದೇವರಬೆಳಕೆರೆಯ ಕಿರಣಕುಮಾರ್, ಲಾಕ್‌ಡೌನ್ ಜಾರಿಯಾದಾಗ ಸಂಕಷ್ಟಕ್ಕೆ ಸಿಲುಕಿಕೊಂಡರು. ಹೀಗಾಗಿ ತಮ್ಮ ಊರಿನಿಂದ ಹಾಲು ತಂದು ನಗರದ ಹತ್ತಾರು ಮನೆ ಹಾಗೂ ಹೋಟೆಲ್‌ಗಳಿಗೆ ಹಾಕುತ್ತಿದ್ದು, ಬದುಕಿನ ಬಂಡಿ ಸಾಗಿಸಲು ಹೆಣಗಾಡುತ್ತಿದ್ದಾರೆ.

'ಐದು ವರ್ಷಗಳಿಂದ ಜಿಮ್‌ನಲ್ಲಿ ತರಬೇತುದಾರನಾಗಿ ಕೆಲಸ ಮಾಡುತ್ತಿದ್ದೆ. ತಿಂಗಳಿಗೆ ₹ 8,000 ವೇತನವೂ ಸಿಗುತ್ತಿತ್ತು. ಕಳೆದ ವರ್ಷ ಮದುವೆಯಾದೆ. ಆದರೆ ಕೆಲವೇ ದಿನಗಳಲ್ಲಿ ಲಾಕ್‌ಡೌನ್ ಘೋಷಿಸಿದ್ದರಿಂದ ಜಿಮ್ ಬಂದ್ ಆಗಿ ಕೆಲಸ ಕಳೆದುಕೊಂಡೆ. ಜೀವನ ನಡೆಸುವುದೇ ಕಷ್ಟವಾಗಿತ್ತು. ಈಗ ಕೋವಿಡ್ ಎರಡನೇ ಅಲೆ ಬಂದು ಮತ್ತೆ ಕೆಲಸ ಇಲ್ಲದಂತಾಯಿತು. ಹೆಂಡತಿ ಖಾಸಗಿ ಆಸ್ಪತ್ರೆಯಲ್ಲಿ ನರ್ಸ್ ಆಗಿದ್ದು, ಅವರೇ

ಕೋವಿಡ್ ಲಾಕ್‌ಡೌನ್ ಕಾರಣಕ್ಕೆ ಕೆಲಸ ಕಳೆದುಕೊಂಡಿದ್ದ ದಾವಣಗೆರೆಯ ಜಿಮ್ ತರಬೇತುದಾರ ಕಿರಣಕುಮಾರ್ ಎಸ್.ಪಿ. ಅವರು ಹಾಲು ಮಾರಾಟ ಮಾಡುತ್ತಿರುವುದು –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ದುಡಿದು ಕುಟುಂಬ ನಡೆಸುವಂತಾಯಿತು. ಕುಟುಂಬ ನಿರ್ವಹಣೆಗೆ ಹಣ ಹೊಂದಿಸಲು ಕಷ್ಟವಾಗಿದ್ದರಿಂದ ಊರಿನಿಂದ ದಿನಾಲೂ ಬೆಳಿಗ್ಗೆ 25 ಲೀಟರ್ ಹಾಲು ತರಿಸಿಕೊಂಡು ಮಾರಾಟ ಮಾಡುತ್ತಿದ್ದೇನೆ. ಇದರಿಂದ ದಿನಕ್ಕೆ ₹ 250 ಸಿಗುತ್ತಿದೆ' ಎಂದು ಕಿರಣಕುಮಾರ್ ಸಂಕಟವನ್ನು ಹೇಳಿಕೊಂಡರು.

'ಬೆಂಗಳೂರಿನಲ್ಲಿ ನಡೆದಿದ್ದ ದೇಹದಾರ್ಢ್ಯ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಮೂರನೇ ಸ್ಥಾನ ಬಂದಿತ್ತು. 'ಮಿಸ್ಟರ್ ದಾವಣಗೆರೆ', 'ಮಿಸ್ಟರ್ ರಾಣೆಬೆನ್ನೂರು' ಟೈಟಲ್‌ಗಳನ್ನು ಗೆದ್ದುಕೊಂಡಿರುವುದರಿಂದ ಸ್ಥಳೀಯವಾಗಿ ಜನಪ್ರಿಯತೆ ಗಳಿಸಿದ್ದೆ' ಎಂದು ಹೇಳಿದರು.

'ಈಗ ಜಿಮ್ ತೆರೆದಿದ್ದರೂ ಕಡಿಮೆ ಹುಡುಗರು ಬರುತ್ತಿರುವುದರಿಂದ ಮಾಲೀಕರು ಕೆಲಸಕ್ಕೆ ತೆಗೆದುಕೊಂಡಿರಲಿಲ್ಲ. ಅಭ್ಯಾಸ ತಪ್ಪಬಾರದು ಎಂದು ಸಂಬಳ ಕೊಡದಿದ್ದರೂ ಜಿಮ್‌ಗೆ ಹೋಗಿ ಮಾರ್ಗದರ್ಶನ ಮಾಡುತ್ತಿದ್ದೇನೆ. ಸಂಕಷ್ಟದಲ್ಲಿರುವ ಜಿಮ್ ತರಬೇತುದಾರರಿಗೂ ಸರ್ಕಾರ ಕೋವಿಡ್ ಪರಿಹಾರ ನೀಡಿದರೆ ಅನುಕೂಲವಾಗಲಿದೆ' ಎನ್ನುತ್ತಾರೆ ಕಿರಣಕುಮಾರ್.

### ಪೈಲ್ವಾನರಿಗೂ ಸಂಕಷ್ಟ

ಕುಸ್ತಿಪಟುಗಳದ್ದೂ ಇದೇ ಕಥೆ. ನಾಡಕುಸ್ತಿ ಆಡುವವರು ಜಾತ್ರೆ, ಹಬ್ಬದ ಸಂದರ್ಭಗಳಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಭಾಗವಹಿಸಿ ಅಷ್ಟೊ ಇಷ್ಟೊ ದುಡಿಯುತ್ತಿದ್ದರು. ಅವರಿಗೆಲ್ಲ ಆದಾಯದ ಮೂಲ ತಪ್ಪಿದಂತಾಗಿದೆ.

'ಕುಸ್ತಿಪಟುಗಳಿಗೆ ತುಂಬಾನೆ ತೊಂದರೆಯಾಗಿದೆ. ಎರಡು ವರ್ಷ ಸರಿಯಾಗಿ ತರಬೇತಿಯೂ ನಡೆದಿಲ್ಲ. ಕೆಲವರು ಕೃಷಿ ಕೆಲಸಗಳಲ್ಲಿ ತೊಡಗಿದ್ದಾರೆ. ಕೆಲವು ಪೈಲ್ವಾನರಿಗೆ ಕ್ರೀಡಾ ಕೋಟಾದಡಿ ಸೇನೆ ಸೇರಿದಂತೆ ಇತರ ಕಡೆ ಇದ್ದ ಉದ್ಯೋಗಾವಕಾಶಗಳೂ ಕೈತಪ್ಪಿವೆ' ಎನ್ನುತ್ತಾರೆ ಹಿರಿಯ ಕುಸ್ತಿ ತರಬೇತುದಾರ, ದಾವಣಗೆರೆಯ ಶಿವಾನಂದ ಅವರು.

# ಸೋಂಕಿನ ದಾಳಿಗೆ ಕ್ರೀಡಾ ವಹಿವಾಟು 'ಕ್ಲೀನ್ ಬೌಲ್ಡ್'

• ಪ್ರಮೋದ

**ಹುಬ್ಬಳ್ಳಿ:** ಪ್ರತಿ ವರ್ಷ ಬೇಸಿಗೆ ಕ್ರೀಡಾ ಶಿಬಿರಗಳನ್ನು ನಡೆಸಿ ವರ್ಷಪೂರ್ತಿ ಗಳಿಸುತ್ತಿದ್ದ ಆದಾಯವನ್ನು ಅಕಾಡೆಮಿಗಳು ಹಾಗೂ ಕ್ರೀಡಾ ಸಾಮಗ್ರಿಗಳ ಮಾರಾಟಗಾರರು ಕೇವಲ ಎರಡೂರು ತಿಂಗಳುಗಳಲ್ಲಿ ಸಂಪಾದಿಸುತ್ತಿದ್ದರು. ಆದರೆ, ಎರಡು ವರ್ಷಗಳಿಂದ ಬೇಸಿಗೆ ಸಮಯದಲ್ಲಿಯೇ ಕೋವಿಡ್ ಕಾಡಿದ್ದರಿಂದ ಕ್ರೀಡಾ ವಹಿವಾಟು ಸಂಪೂರ್ಣವಾಗಿ ನೆಲಕಚ್ಚಿದೆ.

ಕ್ರೀಡಾ ಕ್ಲಬ್‌ಗಳು ಈಗ ಮೈದಾನದ ಬಾಡಿಗೆ, ನಿರ್ವಹಣೆ ಹಾಗೂ ಸಿಬ್ಬಂದಿ ವೇತನ ಪಾವತಿಸುವುದಕ್ಕೂ ಪರದಾಡುತ್ತಿವೆ. ದೆಹಲಿ, ಕೋಲ್ಕತ್ತ, ಪಂಜಾಬ್ ಮತ್ತು ಉತ್ತರ ಪ್ರದೇಶದಿಂದ ಪೂರೈಕೆಯಾಗುವ ಕ್ರೀಡಾ ಸಾಮಗ್ರಿಗಳ ಬೆಲೆಯೂ ಏರಿಕೆಯಾಗಿದೆ.

ಪ್ರಮುಖವಾಗಿ ಕ್ರಿಕೆಟ್, ಬ್ಯಾಡ್ಮಿಂಟನ್ ಹಾಗೂ ಈಜು ಶಿಬಿರಗಳಿಗೆ ಬೇಡಿಕೆ ಇರುತ್ತಿತ್ತು. ಅಕಾಡೆಮಿಗಳಲ್ಲಿ, ಶಾಲಾ ಹಾಗೂ ಕಾಲೇಜುಗಳಿಗೆ ಕ್ರೀಡಾ-ಸಾಮಗ್ರಿಗಳ ಮಾರಾಟವೂ ಜೋರಾಗಿರುತ್ತಿತ್ತು. ಸೋಂಕಿನ ಹಾವಳಿಯಿಂದ ಶಿಕ್ಷಣ ಸಂಸ್ಥೆಗಳ ಬಾಗಿಲು ತೆರೆದಿಲ್ಲ; ಯಾವ ಟೂರ್ನಿಗಳೂ ನಡೆದಿಲ್ಲ. ವ್ಯಾಪಾರವೂ ಇಲ್ಲ.

ಸಾಮಗ್ರಿಗಳು ಬಂದು ಕೆಲ ಸಮಯದ ನಂತರ ವ್ಯಾಪಾರಿಗಳು ಹಣ ಪಾವತಿಸಬಹುದಾಗಿತ್ತು. ಈಗ, ಮೊದಲು ಹಣ ಕೊಟ್ಟರಷ್ಟೇ ಉತ್ಪಾದಕ ಕಂಪನಿಗಳು ಕ್ರೀಡಾ ಪರಿಕರಗಳನ್ನು ಕಳುಹಿಸುತ್ತಿವೆ. ರಾಜ್ಯದಲ್ಲಿ ಬೆಂಗಳೂರು, ಮೈಸೂರು, ಮಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡದಲ್ಲಿ ಕ್ರೀಡಾ ಸಾಮಗ್ರಿಗಳು ಹೆಚ್ಚು ಮಾರಾಟವಾಗುತ್ತಿದ್ದವು.

ರಾಜ್ಯದ ವಿವಿಧ ಭಾಗಗಳಲ್ಲಿ ಕ್ರೀಡಾ ಮಳಿಗೆಗಳು ನಷ್ಟದ ಕಾರಣದಿಂದ ಬಾಗಿಲು ಹಾಕುತ್ತಿವೆ. ಕರ್ನಾಟಕ ಕ್ರೀಡಾ ಸರಕುಗಳ ವಿತರಕರ ಸಂಘದಲ್ಲಿ 275 ನೋಂದಾಯಿತ ಹಾಗೂ 400ಕ್ಕೂ ಹೆಚ್ಚು ನೋಂದಾವಣೆಯಾಗದ ವ್ಯಾಪಾರಿಗಳಿದ್ದಾರೆ. ಆರ್ಥಿಕ ಬಿಕ್ಕಟ್ಟಿನಿಂದಾಗಿ ರಾಜ್ಯದಲ್ಲಿ 10ಕ್ಕೂ ಹೆಚ್ಚು ಕ್ರೀಡಾ ಸಾಮಗ್ರಿಗಳ ವ್ಯಾಪಾರಿಗಳು ಅಂಗಡಿ ಬಾಗಿಲು ಮುಚ್ಚಿದ್ದಾರೆ.

ಕೋವಿಡ್ ಎರಡನೆ ಅಲೆಯ ಸಮಯದಲ್ಲಿ ಉಂಟಾದ ಗಂಭೀರ ಆರೋಗ್ಯ ಸಮಸ್ಯೆಯಿಂದ ಜನ ಸಾಕಷ್ಟು ಹಣ ಕಳೆದುಕೊಂಡಿದ್ದಾರೆ. ರಾಜಧಾನಿಯಲ್ಲಿ ವಹಿವಾಟು ಶೇ 10ಕ್ಕಿಂತಲೂ ಕಡಿಮೆಯಾಗಿದೆ. ಹಳೆಯ ಕ್ರೀಡಾ ಸಾಮಗ್ರಿಗಳನ್ನೇ ರಿಪೇರಿ ಮಾಡಿಸಿಕೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ ಎನ್ನುತ್ತಾರೆ ವ್ಯಾಪಾರಿಗಳು.

'ರಾಜ್ಯದಲ್ಲಿ ವಾರ್ಷಿಕವಾಗಿ ಅಂದಾಜು ₹300ರಿಂದ ₹350 ಕೋಟಿಯಷ್ಟು ವಹಿವಾಟು ನಡೆಸುತ್ತಿದ್ದ ಕ್ರೀಡಾ ವ್ಯಾಪಾರಿಗಳಿಗೆ, ಈಗ ಅರ್ಧದಷ್ಟು ಕೂಡ ವ್ಯಾಪಾರ ಆಗುತ್ತಿಲ್ಲ. ಅನೇಕ ಉದ್ಯೋಗಿಗಳಿಗೆ ಕಂಪನಿಗಳು ಪೂರ್ಣ ವೇತನ ಪಾವತಿಸುತ್ತಿಲ್ಲ. ಕುಟುಂಬ ನಡೆಸುವುದೇ ಕಷ್ಟವಾಗಿರುವಾಗ ಯಾವ ಪೋಷಕರೂ ತಮ್ಮ ಮಕ್ಕಳನ್ನು ಕ್ರೀಡಾ ತರಬೇತಿಗೆ ಕಳುಹಿಸುವುದಿಲ್ಲ' ಎಂದು ವಿತರಕರ ಸಂಘದ ಅಧ್ಯಕ್ಷ ಸುರೇಶ್ ಜೈನ್ ಹಾಗೂ ಕಾರ್ಯದರ್ಶಿ ಪ್ರಶಾಂತ ಕುಮಾರ್ ಹೇಳುತ್ತಾರೆ.

# ಯೋಜನೆ ಇಲ್ಲ; ಬೇಡಿಕೆಯೂ ಬಂದಿಲ್ಲ ಆಟಕ್ಕೂ ಕೋವಿಡ್ ಕಾಟ

ಕೋವಿಡ್‌ನಿಂದ ಸಂಕಷ್ಟಕ್ಕೀಡಾದವರಿಗೆ ವಿಶೇಷ ಯೋಜನೆ ಜಾರಿಗೊಳಿಸಿಲ್ಲ. ಸಮಸ್ಯೆಗೀಡಾದವರು ಮನವಿ ಮಾಡಿದರೆ ನೆರವು ನೀಡುವ ಬಗ್ಗೆ ಯೋಚಿಸಬಹುದು ಎನ್ನುವುದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ನೀತಿ.

'ಈವರೆಗೆ ಯಾರೂ ಅಹವಾಲು ಹೇಳಿಲ್ಲ. ಹೀಗಾಗಿ, ಈವರೆಗೆ ನೆರವು ನೀಡುವ ಬಗ್ಗೆ ಯೋಚಿಸಿಲ್ಲ. ಕೋಚ್‌ಗಳು ಮತ್ತು ಸಿಬ್ಬಂದಿಗೆ ವೇತನ ಪಾವತಿಯಾಗುತ್ತಿರುವುದರಿಂದ ಆಡಳಿತಾತ್ಮಕ ಸಮಸ್ಯೆಗಳಿಲ್ಲ' ಎಂದು ಇಲಾಖೆಯ ಜಂಟಿ ನಿರ್ದೇಶಕ ರಮೇಶ್ ತಿಳಿಸಿದರು.

'ಕಬಡ್ಡಿಪಟು ತೇಜಸ್ವಿನಿ ಸೇರಿದಂತೆ ಇಬ್ಬರಿಗೆ ಆರ್ಥಿಕ ನೆರವು ನೀಡಲಾಗಿದೆ. ಬೇರೆ ಯಾರಿಗೂ ನೆರವು ನೀಡುವ ಪ್ರಮೇಯ ಬಂದಿಲ್ಲ' ಎಂದು ಇಲಾಖೆಯ ಉಪನಿರ್ದೇಶಕ ಸತೀಶ್ ತಿಳಿಸಿದರು.

ನಿವೃತ್ತ ಕುಸ್ತಿಪಟುಗಳಿಗೆ ನೀಡುವ ಮಾಸಾಶನಕ್ಕೆ ಐದು ತಿಂಗಳಿಂದ ಅಡ್ಡಿಯಾಗಿತ್ತು. ಇದೀಗ

### ಪಂಜಾಬ್ ಉಸ್ತುವಾರಿ ರಾವತ್ ಭೇಟಿ ಬಳಿಕ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಹೇಳಿಕೆ

# 'ಸೋನಿಯಾ ಗಾಂಧಿ ನಿರ್ಧಾರಕ್ಕೆ ಎಲ್ಲರೂ ಬದ್ಧ'

ಚಂಡೀಗಡ (ಪಿಟಿಐ): 'ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರು ಕೈಗೊಳ್ಳುವ ಯಾವುದೇ ನಿರ್ಧಾರ ಎಲ್ಲರಿಗೂ ಒಪ್ಪಿಗೆಯಾಗುವ ರೀತಿ ಇರಲಿದೆ' ಎಂದು ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಶನಿವಾರ ಇಲ್ಲಿ ಹೇಳಿದರು.

ಅಮರಿಂದರ್ ಸಿಂಗ್

ಪಕ್ಷದ ರಾಜ್ಯ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರೀಶ್ ರಾವತ್ ಅವರನ್ನು ಭೇಟಿ ಮಾಡಿದ ನಂತರ ಅವರು ಮಾತನಾಡಿದರು.

ಮುಖಂಡ ನವಜೋತ್ ಸಿಂಗ್ ಸಿಧು ಅವರನ್ನು ಪಕ್ಷದ ಪಂಜಾಬ್ ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತದೆ ಎಂಬ ಮಾತುಗಳು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರ ಈ ಹೇಳಿಕೆ ಮಹತ್ವ ಪಡೆದುಕೊಂಡಿದೆ.

'ಹರೀಶ್ ರಾವತ್ ಅವರೊಂದಿಗಿನ ಮಾತುಕತೆ ಫಲಪ್ರದವಾಗಿತ್ತು. ನಾನು ಕೆಲವು ವಿಷಯಗಳನ್ನು ಈ ಭೇಟಿ ವೇಳೆ ಪ್ರಸ್ತಾಪಿಸಿದೆ. ಅವುಗಳನ್ನು ಪಕ್ಷದ ಅಧ್ಯಕ್ಷರ ಗಮನಕ್ಕೆ ತರುವುದಾಗಿ ಅವರು ಭರವಸೆ ನೀಡಿದರು' ಎಂದು ಅವರು ಟ್ವೀಟ್ ಸಹ ಮಾಡಿದ್ದಾರೆ.

ಅಮರಿಂದರ್ ಸಿಂಗ್ ಮತ್ತು ನವಜೋತ್ ಸಿಂಗ್ ಸಿಧು ಅವರ ನಡುವಿನ ಭಿನ್ನಾಭಿಪ್ರಾಯ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹರೀಶ್ ರಾವತ್ ಅವರು ಚಂಡೀಗಡಕ್ಕೆ ದೌಡಾಯಿಸಿದ್ದು, ಪಕ್ಷದ ಬೆಳವಣಿಗೆಗಳ ಕುರಿತು ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ.

ಅಮರಿಂದರ್ ಸಿಂಗ್ ಅವರು ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದು, ಪಕ್ಷದಲ್ಲಿನ ಬೆಳವಣಿಗೆ ಕುರಿತು ತಮ್ಮ ಅಸಮಾಧಾನ ಹೊರ ಹಾಕಿದ್ದಾರೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಅವರನ್ನು ಸಮಾಧಾನಪಡಿಸುವ ಯತ್ನವೂ ರಾವತ್ ಅವರ ಭೇಟಿಯ ಉದ್ದೇಶವಾಗಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

'ನವಜೋತ್ ಸಿಂಗ್ ಸಿಧು ಅವರನ್ನು ಪಕ್ಷದ ರಾಜ್ಯ ಘಟಕದ ಮುಖ್ಯಸ್ಥರನ್ನಾಗಿ ನೇಮಿಸಿದಲ್ಲಿ ಇದು ಚುನಾವಣೆಯಲ್ಲಿ ಪಕ್ಷದ ಭವಿಷ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ' ಎಂದೂ ಅಮರಿಂದರ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ ಎನ್ನಲಾಗಿದೆ.

ಪಕ್ಷದ ರಾಜ್ಯ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರೀಶ್ ರಾವತ್ ಅವರು 'ಸಿಧು ಅವರನ್ನು ಪಕ್ಷದ ಮುಖ್ಯಸ್ಥರಾಗಿ ನೇಮಿಸುವ ಕುರಿತು ನಾನು ಹೇಳಿಕೆ ನೀಡಿಲ್ಲ' ಎಂದು ಗುರುವಾರವಷ್ಟೇ ಸ್ಪಷ್ಟನೆ ನೀಡಿದ್ದಾರೆ.

**ಸಾಮಾಜಿಕ ಪ್ರಾತಿನಿಧ್ಯದ ಪ್ರಶ್ನೆ:** ಪಂಜಾಬ್‌ನ ಮಾಜಿ ಸಚಿವ ಹಾಗೂ ಅಮರಿಂದರ್ ಸಿಂಗ್ ಅವರಿಗೆ ಆಪ್ತರಾಗಿರುವ ಮನೀಶ್ ತಿವಾರಿ ಅವರು, ಸಿಂಗ್ ಅವರ ಸಾಮಾಜಿಕ ಪ್ರಾತಿನಿಧ್ಯದ ವಾದವನ್ನು ಪುರಸ್ಕರಿಸಿ, ಚುನಾವಣೆಯಲ್ಲಿ ಸಮುದಾಯಗಳ ಮಹತ್ವದ ಬಗ್ಗೆ ಟ್ವೀಟ್ ಮಾಡಿದ್ದಾರೆ.

## ಸುನೀಲ್ ಜಾಖಡ್ ಭೇಟಿಯಾದ ನವಜೋತ್ ಸಿಧು

ಚಂಡೀಗಡ (ಪಿಟಿಐ): ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಶನಿವಾರ ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ (ಪಿಪಿಸಿಸಿ) ಸುನೀಲ್ ಜಾಖಡ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು.

ಪಂಚಕುಲಾದಲ್ಲಿನ ಜಾಖಡ್ ಅವರ ನಿವಾಸದಲ್ಲಿ ಅರ್ಧ ತಾಸಿಗೂ ಹೆಚ್ಚು ಹೊತ್ತು ಮಾತುಕತೆಯ ಬಳಿಕ ಪ್ರತಿಕ್ರಿಯಿಸಿರುವ ಸಿಧು, 'ಜಾಖಡ್ ನನ್ನ ಅಣ್ಣ ನನ್ನ ಮಾರ್ಗದರ್ಶಕರೂ ಆಗಿದ್ದಾರೆ' ಎಂದು ಹೇಳಿದರು.

ಸುನೀಲ್ ಜಾಖಡ್ ಸಹ ಪ್ರತಿಕ್ರಿಯಿಸಿ, 'ಸಿಧು ಒಬ್ಬ ಸಮರ್ಥ ವ್ಯಕ್ತಿ' ಎಂದು ಹೇಳಿದರು.

ಪಕ್ಷದ ಕೆಲ ಶಾಸಕರನ್ನೂ ಸಿಧು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಸಿಧು ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತದೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಹೀಗಾಗಿ ಸಿಧು ಅವರು ಪಿಪಿಸಿಸಿ ಅಧ್ಯಕ್ಷ ಜಾಖಡ್ ಹಾಗೂ ಕೆಲ ಶಾಸಕರನ್ನು ಭೇಟಿ ಮಾಡಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಸಂಪುಟ ಸಚಿವ ಸುಖ್‌ಜಿಂದರ್ ಸಿಂಗ್ ರಾಂಧವಾ, ಶಾಸಕರಾದ ಬರೀಂದರ್‌ಮೀತ್ ಸಿಂಗ್ ಪಹ್ರಾ, ಅಮರಿಂದರ್ ಸಿಂಗ್ ರಾಜಾ ವಾರಿಂಗ್, ಕುಲ್ಬೀರ್‌ಸಿಂಗ್ ಝೀರಾ ಹಾಗೂ ದವೀಂದರ್ ಸಿಂಗ್ ಘುಬಯಾ ಅವರೊಂದಿಗೂ ಸಿಧು ಚರ್ಚೆ ನಡೆಸಿದರು.

ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ರಾಂಧವಾ, 'ಪಕ್ಷದಲ್ಲಿ ಯಾವುದೇ ಗೊಂದಲಗಳಿಲ್ಲ. ಎಲ್ಲವೂ ಸರಿಯಾಗಿದೆ' ಎಂದರು.


ಕ್ಲಬ್‌ಹೌಸ್‌ಗೆ ಬನ್ನಿ

ಪ್ರಜಾವಾಣಿ ಆಲದಮರ

ಕವಿ ಸಿದ್ದಲಿಂಗಯ್ಯ ನೆನಪುಗಳು

ಮಾತು/ ಪದ್ಯ/ ಹಾಡು/ ಹರಟೆ

ಅಗ್ರಹಾರ ಕೃಷ್ಣಮೂರ್ತಿ



ಟಿ.ಎನ್. ಸೀತಾರಾಮ್

ಪಿಚ್ಚಳ್ಳಿ ಶ್ರೀನಿವಾಸ್

ಜನ್ನಿ (ಜನಾರ್ದನ್)

ಆರ್.ಜಿ.ಹಳ್ಳಿ ನಾಗರಾಜ್

ಸುಬ್ಬು ಹೊಲೆಯಾರ್

ಬಿ.ಎಂ.ಪುಟ್ಟಯ್ಯ

ಡಾ.ಮಾನಸ ಸಿದ್ದಲಿಂಗಯ್ಯ

ಇಂದು ಬೆಳಿಗ್ಗೆ 10.30ರಿಂದ 12.30ರವರೆಗೆ


### ನಟ ದರ್ಶನ್ ರೈತರ ರಾಯಭಾರಿ ಆಗುವುದು ಬೇಡ: ಬಡಗಲಪುರ ನಾಗೇಂದ್ರ ಆಗ್ರಹ

# ಪೊಲೀಸರಿಂದ ಸಿಸಿಟಿವಿ ದೃಶ್ಯಾವಳಿ ಮರಳಿ ಪಡೆವ ಯತ್ನ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಸಂದೇಶ್ ದ ಪ್ರಿನ್ಸ್ ಹೋಟೆಲ್ ಸಿಬ್ಬಂದಿ ಮೇಲೆ ನಟ ದರ್ಶನ್ ಹಲ್ಲೆ ನಡೆಸಿದ್ದಾರೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ತೆಗೆದುಹಾಕಲಾಗಿರುವ ಸಿಸಿಟಿವಿ ದೃಶ್ಯಾವಳಿಗಳನ್ನು ಪೊಲೀಸರು ಮರಳಿ ಪಡೆಯುವ ಪ್ರಯತ್ನದಲ್ಲಿದ್ದಾರೆ.

'ಹೋಟೆಲ್‌ನ ಇನ್ನಿಬ್ಬರು ಸಿಬ್ಬಂದಿಯನ್ನು ಶನಿವಾರ ದೇವರಾಜ ಉಪವಿಭಾಗದ ಕಚೇರಿಗೆ ಕರೆದು ವಿಚಾರಣೆ ನಡೆಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಪಲ್ಟಿ ಬೆಂಬಲ: ಮೈಸೂರು-ತಿ.ನರಸೀಪುರ ಮಾರ್ಗ ಮಧ್ಯೆ ಇರುವ ನಟ ದರ್ಶನ್ ಅವರ ಫಾರ್ಮ್‌ಹೌಸ್ ಮುಂದೆ ಅಭಿಮಾನಿಯೊಬ್ಬರು ಪಲ್ಟಿ ಹೊಡೆಯುವ ಮೂಲಕ ದರ್ಶನ್‌ಗೆ ಬೆಂಬಲ ವ್ಯಕ್ತಪಡಿಸಿದರು.

**ರೈತರ ರಾಯಭಾರಿ ಆಗುವುದು ಬೇಡ:** ವಿವಾದ ಕುರಿತು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಪ್ರತಿಕ್ರಿಯಿಸಿ, 'ತಲೆ ಕತ್ತರಿಸುವುದು ರೈತರ ಸಂಸ್ಕೃತಿ ಅಲ್ಲ. ತಲೆ ಕತ್ತರಿಸುತ್ತೇನೆ ಎಂದು ಬಹಿರಂಗವಾಗಿ ಹೇಳಿರುವ ಹಾಗೂ ಹಲ್ಲೆ ನಡೆಸಿರುವ ಆರೋಪ ಹೊತ್ತಿರುವ ದರ್ಶನ್ ಅವರನ್ನು ಸರ್ಕಾರ ರೈತರ ರಾಯಭಾರಿ ಎಂದು ಪರಿಗಣಿಸಬಾರದು' ಎಂದು ಹೇಳಿದ್ದಾರೆ.

'ಕೃಷಿ ಸಚಿವ ಬಿ.ಸಿ.ಪಾಟೀಲ ಅವರು ನಡವಳಿಕೆ ತಿದ್ದಿಕೊಳ್ಳುವ ಕುರಿತು ದರ್ಶನ್ ಅವರಿಗೆ ಮನವರಿಕೆ ಮಾಡಿಕೊಡಬೇಕು. ನಟರಾಗಿ ಅವರು ಬೆಳೆಯುವುದಕ್ಕೆ ಆಕ್ಷೇಪ ಇಲ್ಲ. ಆದರೆ, ಅವರ ಹೇಳಿಕೆಗಳು ಹಾಗೂ ವರ್ತನೆಗಳು ಲಕ್ಷಾಂತರ ಅಭಿಮಾನಿಗಳಿಗೆ ತಪ್ಪು ಸಂದೇಶ ನೀಡುವಂತಿದೆ' ಎಂದಿದ್ದಾರೆ.

## 'ದೊಡ್ಮನೆ ಆಸ್ತಿಗೂ ನನಗೂ ಸಂಬಂಧ ಇಲ್ಲ'

ಮೈಸೂರು: 'ಡಾ.ರಾಜಕುಮಾರ್ ಕುಟುಂಬದವರ ಮುಂದೆ ನಾನು ಹುಲ್ಲಿಗೆ ಸಮಾನ. ದೊಡ್ಮನೆ' ಆಸ್ತಿ ವಿಚಾರಕ್ಕೂ ನನ್ನ ಪ್ರಕರಣಕ್ಕೂ ಸಂಬಂಧವಿಲ್ಲ' ಎಂದು ನಟ ದರ್ಶನ್ ತಿಳಿಸಿದರು.

'ಚಿತ್ರವೊಂದರಲ್ಲಿ ನಟಿಸಿದ್ದಕ್ಕೆ ಸಂಭಾವನೆ ಕೊಡದ ನಿರ್ಮಾಪಕ ಉಮಾಪತಿ, ಕನ್ನಿಂಗ್‌ಹ್ಯಾಂ ರಸ್ತೆಯಲ್ಲಿನ ಆಸ್ತಿಯೊಂದನ್ನು ನನಗೆ ನೀಡುವುದಾಗಿ ಹೇಳಿದ್ದರು. 3 ವರ್ಷಗಳಿಂದ ಅದರ ಬಾಡಿಗೆಯನ್ನಷ್ಟೇ ನೀಡುತ್ತಿರುವ ಅವರು ನನ್ನ ಹೆಸರಿಗೆ ನೋಂದಣಿ ಮಾಡಿಕೊಟ್ಟಿಲ್ಲ. ನಾನಾಗಿಯೇ ಅವರ ಬಳಿ ಆಸ್ತಿ ಕೊಡಿಸಿ ಎಂದು ಕೇಳಿಲ್ಲ. ನನ್ನದಲ್ಲದ ಆಸ್ತಿಗೆ ಅವರೇಕೆ ನನಗೆ ಬಾಡಿಗೆ ಕೊಟ್ಟರು' ಎಂದು ಪ್ರಶ್ನಿಸಿದರು.

ಇದಕ್ಕೂ ಮೊದಲು ನಿರ್ಮಾಪಕ ಉಮಾಪತಿ ಅವರು ಮಾಧ್ಯಮಗಳ ಮುಂದೆ ಹೇಳಿಕೆ ನೀಡಿ, 'ದರ್ಶನ್ ಆಸ್ತಿಯೊಂದನ್ನು ಕೇಳಿದ್ದು ನಿಜ. ಮೂಲತಃ ಅದು ದೊಡ್ಡಮನೆಯವರಿಗೆ (ಡಾ.ರಾಜ್‌ಕುಮಾರ್ ಕುಟುಂಬ) ಸೇರಿದ ಆಸ್ತಿ. ಅದನ್ನು ಕೊಡುವುದಿಲ್ಲ ಎಂದಿದ್ದೆ. ಆ ವಿಚಾರ ಅಲ್ಲಿಗೇ ಮುಗಿದಿದೆ. ದರ್ಶನ್ ಜೊತೆ ವ್ಯಾವಹಾರಿಕ ಸಂಬಂಧ ಮುಗಿದಿದೆ. ಸಹೋದರ ಸಂಬಂಧವಷ್ಟೇ ಉಳಿದಿದೆ' ಎಂದಿದ್ದರು.

'ರಾಜ್‌ಕುಮಾರ್ ಕುಟುಂಬದವರಿಂದ ನಮ್ಮ ಕುಟುಂಬ ಅನ್ನ ತಿಂದಿದೆ. ನನ್ನ ಪ್ರಕರಣದಲ್ಲಿ ಅವರನ್ನು ಎಳೆದು ತಂದಿರುವುದು ಸರಿಯಲ್ಲ. ಪುನೀತ್ ರಾಜ್‌ಕುಮಾರ್ ಬಳಿ ಇರುವ ಐಷಾರಾಮಿ ಕಾರು ನನ್ನಲ್ಲಿಯೂ ಇದೆ. ಹಾಗೆಂದು ನಾನು ಅವರೊಂದಿಗೆ ಸ್ಪರ್ಧೆಗಿಳಿದಿರುವೆ ಎನ್ನುವುದು ಎಷ್ಟು ಸರಿ' ಎಂದು ಪ್ರಶ್ನಿಸಿದರು.

'ನನ್ನನ್ನು ಪ್ರಚೋದಿಸುತ್ತಿರುವ ಇಂದ್ರಜಿತ್ ಗಂಡಸೇ ಆಗಿದ್ದರೆ, ನಾನು ಮಾತನಾಡಿರುವ ಆಡಿಯೊವನ್ನು ಬಿಡುಗಡೆ ಮಾಡಲಿ' ಎಂದು ಸವಾಲೆಸೆದರು.

## ದರ್ಶನ್ ವಿಚಲಿತರಾಗಿದ್ದಾರೆ: ಇಂದ್ರಜಿತ್

ದರ್ಶನ್ ವಿಚಲಿತರಾಗಿದ್ದಾರೆ. ನಾನು ಕೇಳುತ್ತಿರುವ ಪ್ರಶ್ನೆಗಳಿಗೆ ಉತ್ತರ ಕೊಟ್ಟರೆ ಸಾಕು. ನಾನು ಯಾವ ಸೆಲೆಬ್ರಿಟಿಯನ್ನೂ ಅವಿದ್ಯಾವಂತ ಎಂದಿಲ್ಲ. ದರ್ಶನ್ ಸಪ್ಲೈಯರ್‌ಗೆ ಹೊಡೆದರೇ ಇಲ್ಲವೇ ಎನ್ನುವುದಷ್ಟೇ ಇಲ್ಲಿನ ಪ್ರಶ್ನೆ ಎಂದು ನಿರ್ದೇಶಕ ಇಂದ್ರಜಿತ್ ಲಂಕೇಶ್ ಹೇಳಿದರು.

ನನ್ನ ಗಂಡಸುತನ ಅಲ್ಲ ನಿಮ್ಮ ಗಂಡಸುತನ ಸಾಬೀತುಪಡಿಸಿ ಎಂದು ನಾನು ಹೇಳಬೇಕಾಗಿಲ್ಲ. ಇದು ಸಿನಿಮಾವಲ್ಲ. ಧರ್ಮಪತ್ನಿ ವಿಚಾರದಲ್ಲಿ ಯಾಕೆ ವಕೀಲರನ್ನು ಕರೆಸಿಕೊಂಡಿರಿ ಎಂದು ಇಡೀ ಕರ್ನಾಟಕಕ್ಕೇ ಗೊತ್ತು. ನೀವು ಸಾಂಸಾರಿಕವಾಗಿ, ವೈಯಕ್ತಿಕವಾಗಿ ಎಷ್ಟು ವಿಚಲಿತರಾಗಿದ್ದೀರಿ ಎನ್ನುವುದನ್ನು ನಿಮ್ಮ ಮಾತು ತೋರಿಸುತ್ತದೆ. ನೀವು ಹೋಟೆಲ್‌ನಲ್ಲಿ ಯಾರ ಜೊತೆ ಇದ್ದಿರಿ. ನೀವು ಅಲ್ಲಿಗೇನು ಗಂಡಸುತನ ಸಾಬೀತು ಪಡಿಸಿಲು ಹೋದ್ರಾ? ಯಾಕೆ ಅರುಣಕುಮಾರಿಯನ್ನು ತೋಟದ ಮನೆಗೆ ಕರೆಸಿಕೊಂಡಿರಿ? ಗಂಡಸುತನ ತೋರಿಸಲು ಸಪ್ಲೈಯರ್‌ಗೆ ಹೊಡೆದ್ರಾ? ಎಂದು ಪ್ರಶ್ನಿಸಿದರು.

ನೀವು ನಿಮ್ಮ ತಂದೆಗೆ ಹುಟ್ಟಿದ್ದರೆ ಇಬ್ಬರೂ ಧರ್ಮಸ್ಥಳಕ್ಕೆ ಹೋಗೋಣ, ಸಂದೇಶ್ ನಾಗರಾಜ್ ಅವರ ಜೊತೆಗೆ ಹೋಗೋಣ. ನೀವು ಹೊಡೆದಿರಾ ಇಲ್ಲವಾ? ಅವಾಚ್ಯ ಶಬ್ದಗಳಿಂದ ನಿಂದಿಸಿದರೇ ಇಲ್ಲವೇ ಎನ್ನುವುದನ್ನು ಆಣೆ ಮಾಡಿ ಹೇಳಿಬಿಡಿ' ಎಂದು ಇಂದ್ರಜಿತ್ ಸವಾಲೆಸೆದಿದ್ದಾರೆ.

## ವಿಎಚ್‌ಪಿ ಅಧ್ಯಕ್ಷರಾಗಿ ರವೀಂದ್ರ ನರೇನ್ ಸಿಂಗ್ ನೇಮಕ

ನವದಹೆಲಿ (ಪಿಟಿಐ): ವಿಶ್ವ ಹಿಂದೂ ಪರಿಷತ್‌ನ (ವಿಎಚ್‌ಪಿ) ನೂತನ ಅಧ್ಯಕ್ಷರಾಗಿ ಪದ್ಮಶ್ರೀ ಪುರಸ್ಕೃತ, ಖ್ಯಾತ ಮೂಳೆ ಶಸ್ತ್ರಚಿಕಿತ್ಸಾತಜ್ಞರಾದ ರವೀಂದ್ರ ನರೇನ್ ಸಿಂಗ್ ಅವರನ್ನು ಶನಿವಾರ ನೇಮಕ ಮಾಡಲಾಗಿದೆ.

'ನಮ್ಮ ಟ್ರಸ್ಟಿಗಳ ಮಂಡಳಿ ಇಂದು ವಿಎಚ್‌ಪಿ ಅಧ್ಯಕ್ಷರಾಗಿ ಪದ್ಮಶ್ರೀ ರವೀಂದ್ರ ನರೇನ್ ಸಿಂಗ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿದೆ' ಎಂದು ವಿಎಚ್‌ಪಿ ಜಂಟಿ ಪ್ರಧಾನ ಕಾರ್ಯದರ್ಶಿ ಸುರೇಂದ್ರ ಜೈನ್ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'2018ರ ಏಪ್ರಿಲ್‌ನಿಂದ ವಿಎಚ್‌ಪಿ ಅಧ್ಯಕ್ಷರಾಗಿ ವಿಷ್ಣು ಸದಾಶಿವ್ ಕೊಕಜೆ ಅವರು ಸೇವೆ ಸಲ್ಲಿಸುತ್ತಿದ್ದರು. ಕೊಕ್ಜೆ ಅವರಿಗೆ ಈಗ 83 ವರ್ಷ. ಅವರು ತಮ್ಮ ಜವಾಬ್ದಾರಿಗಳಿಂದ ಮುಕ್ತರಾಗಲು ಬಯಸಿದ್ದರು. ಅವರ ಇಚ್ಛೆಯಂತೆ ಮತ್ತು ನಮ್ಮ ಸಂವಿಧಾನದ ಪ್ರಕಾರ ಚುನಾವಣೆಯನ್ನು ನಡೆಸಿ ಹೊಸ ಅಧ್ಯಕ್ಷರನ್ನು ನೇಮಕ ಮಾಡಲಾಗಿದೆ' ಎಂದು ಅವರು ವಿವರಿಸಿದರು.

## ಯುರೋಪ್ ಪ್ರವಾಹ: ಮೃತರ ಸಂಖ್ಯೆ 150

ಬರ್ಲಿನ್ (ಎಪಿ): ಯುರೋಪ್‌ನ ಪಶ್ಚಿಮ ಭಾಗಗಳಲ್ಲಿ ಭಾರಿ ಮಳೆಯಿಂದಾಗಿ ಸಂಭವಿಸಿದ ಪ್ರವಾಹದಲ್ಲಿ ಸಾವಿಗೀಡಾದವರ ಸಂಖ್ಯೆ ಶನಿವಾರ 150ಕ್ಕೆ ಏರಿದೆ. ಇಲ್ಲಿ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ.

'ಪ್ರವಾಹ ಪೀಡಿತ ಪ್ರದೇಶವಾದ ಜರ್ಮನಿಯ ಅಹ್ರ್ವೀಲರ್ ಕೌಂಟಿಯಲ್ಲಿ 90ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಈ ಪ್ರದೇಶದಲ್ಲಿ ಪ್ರವಾಹದಿಂದಾಗಿ ಅತಿ ಹೆಚ್ಚು ಹಾನಿ ಉಂಟಾಗಿದೆ' ಎಂದು ಪೊಲೀಸರು ತಿಳಿಸಿದರು.

## ಇಂದ್ರಜಿತ್ ಭೇಟಿ ಮಾಡಿದ್ದು ನಿಜ: ನಿಖಿಲ್

ರಾಮನಗರ: '10-15 ದಿನದ ಹಿಂದೆ ನಿರ್ದೇಶಕ ಇಂದ್ರಜಿತ್ ಲಂಕೇಶ್ ನಮ್ಮ ಕೇತಗಾನಹಳ್ಳಿ ತೋಟದ ಮನೆಯಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಆಗಿದ್ದು ನಿಜ. ಆದರೆ ಇವತ್ತಿನ ಚರ್ಚೆಗೆ ಆ ವಿಷಯವನ್ನು ತಳಕು ಹಾಕಬೇಡಿ' ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಇಂದ್ರಜಿತ್ ಲಂಕೇಶ್-ಕುಮಾರಸ್ವಾಮಿ ಜೊತೆಗಿರುವ ಫೋಟೊಗಳು ವೈರಲ್ ಆಗಿರುವ ಕುರಿತು ಅವರು ರಾಮನಗರದಲ್ಲಿ ಶನಿವಾರ ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಿದರು.

'ಕೆಲವರು ಬೇರೆ ಬೇರೆ ಉದ್ದೇಶಕ್ಕೆ ಫೋಟೊಗಳನ್ನು ಬಿಟ್ಟುಕೊಂಡಿರುತ್ತಾರೆ. ಎಲ್ಲದಕ್ಕೂ ಕುಮಾರಸ್ವಾಮಿ ಅವರನ್ನು ಕ್ಲಬ್ ಮಾಡುವುದು ಸರಿಯಲ್ಲ. ಈ ವಿಚಾರವಾಗಿ ಇಂದ್ರಜಿತ್ ಅವರನ್ನೇ ಪ್ರಶ್ನಿಸುವುದು ಒಳಿತು' ಎಂದರು.

### ಭಾರತೀಯ ನೌಕಾಪಡೆಗೆ ಮತ್ತಷ್ಟು ಬಲ

# ಎಮ್‌ಆರ್‌ಎಚ್ -60 ಹೆಲಿಕಾಪ್ಟರ್ ಹಸ್ತಾಂತರ

ವಾಷಿಂಗ್ಟನ್(ಪಿಟಿಐ): ಭಾರತ-ಅಮೆರಿಕ ರಕ್ಷಣಾ ಸಂಬಂಧ ಬಲಪಡಿಸುವ ಮತ್ತೊಂದು ಉದಾಹರಣೆಯಾಗಿ, ಅಮೆರಿಕ ನೌಕಾಪಡೆಯು ಎರಡು ಎಮ್‌ಆರ್‌ಎಚ್ -60 ಆರ್ ಮಲ್ಟಿ ರೋಲ್ ಹೆಲಿಕಾಪ್ಟರ್‌ಗಳನ್ನು ಭಾರತೀಯ ನೌಕಾಪಡೆಗೆ ಹಸ್ತಾಂತರಿಸಿದೆ.

ಲಾಕ್ಹೀಡ್ ಮಾರ್ಟಿನ್ ಕಂಪನಿ ತಯಾರಿಸುವ ಈ ಮಾದರಿಯ 24 ಹೆಲಿಕಾಪ್ಟರ್‌ಗಳನ್ನು ಭಾರತೀಯ ನೌಕಾಪಡೆಯು ಅಮೆರಿಕ ಸರ್ಕಾರದಿಂದ ವಿದೇಶಿ ಮಿಲಿಟರಿ ಉಪಕರಣದ ಮಾರಾಟದ ಅಡಿಯಲ್ಲಿ 2.4 ಬಿಲಿಯನ್ ಡಾಲರ್ ವೆಚ್ಚದಲ್ಲಿ ಖರೀದಿಸುತ್ತಿದೆ.

ಅಮೆರಿಕದ ನೌಕಾಪಡೆಯಿಂದ ಭಾರತೀಯ ನೌಕಾಪಡೆಗೆ ಹೆಲಿಕಾಪ್ಟರ್‌ಗಳನ್ನು ಹಸ್ತಾಂತರಿಸುವ ಕಾರ್ಯಕ್ರಮ ಸ್ಯಾನ್ ಡಿಯಾಗೋದ ನಾರ್ತ್ ಐಲ್ಯಾಂಡ್ ನೌಕಾ ವಾಯು ನಿಲ್ದಾಣ ಅಥವಾ ಎನ್‌ಎಎಸ್ ನಾರ್ತ್ ಐಲ್ಯಾಂಡ್‌ನಲ್ಲಿ ನಡೆಯಿತು. ಅಮೆರಿಕದಲ್ಲಿರುವ ಭಾರತೀಯ ರಾಯಭಾರಿ ತಾರಂಜಿತ್ ಸಿಂಗ್ ಸಂಧು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಆಲ್-ವೆದರ್ ಮಲ್ಟಿ ರೋಲ್ ಹೆಲಿಕಾಪ್ಟರ್‌ಗಳ ಪ್ರವೇಶವು ಭಾರತ ಮತ್ತು ಅಮೆರಿಕದ ದ್ವಿಪಕ್ಷೀಯ ರಕ್ಷಣಾ ಸಂಬಂಧಗಳಲ್ಲಿ ಒಂದು ಪ್ರಮುಖ ಮೈಲಿಗಲ್ಲು ಎಂದು ಸಂಧು ಹೇಳಿದರು.

'ಭಾರತ ಮತ್ತು ಅಮೆರಿಕದ ಸ್ನೇಹ ಆಗಸವನ್ನು ಮುಟ್ಟಿದೆ'ಎಂದು ಅವರು ಟ್ವೀಟ್ ಮಾಡಿದ್ದಾರೆ. ಕಳೆದ 2 ವರ್ಷಗಳಲ್ಲಿ ದ್ವಿಪಕ್ಷೀಯ ರಕ್ಷಣಾ ವ್ಯಾಪಾರವು 20 ಬಿಲಿಯನ್ ಡಾಲರ್‌ಗಳಿಗೆ ವಿಸ್ತರಿಸಿದೆ ಎಂದು ತಿಳಿಸಿದ್ದಾರೆ.

ಎಂಹೆಚ್-60ಆರ್ ಹೆಲಿಕಾಪ್ಟರ್ ಎಲ್ಲಾ ಹವಾಮಾನದಲ್ಲಿ

### ಅಲೆಮಾರಿ ಬುಡಕಟ್ಟು ಮಹಾಸಭಾದಿಂದ ಮುತ್ತಿಗೆ

# ಅಂಬೇಡ್ಕರ್ ನಿಗಮದಿಂದ ಅಲೆಮಾರಿ ವಿರೋಧಿ ಧೋರಣೆ: ಆರೋಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯಗಳಿಗೆ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಬಿಡುಗಡೆಯಾಗಿರುವ ಅನುದಾನ ಫಲಾನುಭವಿಗಳ ಕೈಸೇರುತ್ತಿಲ್ಲ' ಎಂದು ಆರೋಪಿಸಿ ಅಲೆಮಾರಿ ಬುಡಕಟ್ಟು ಮಹಾಸಭಾದ ಪದಾಧಿಕಾರಿಗಳು ರಾಜಾಜಿನಗರದಲ್ಲಿರುವ ನಿಗಮದ ಕಚೇರಿಗೆ ಶನಿವಾರ ಮುತ್ತಿಗೆ ಹಾಕಿದರು.

'2019ರಿಂದ 2021ನೇ ಸಾಲಿನ ಅನುದಾನದಲ್ಲಿ ಫಲಾನುಭವಿಗಳಿಗೆ ಯಾವುದೇ ಸೌಲಭ್ಯ ನೀಡದೇ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಬೆಂಗಳೂರು ನಗರ ಜಿಲ್ಲಾ ವ್ಯವಸ್ಥಾಪಕ ನಿರ್ದೇಶಕರು ಮೀನಮೇಷ ಎಣಿಸುತ್ತಿದ್ದಾರೆ' ಎಂದು ಮಹಾಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಿರಣ್ ಕುಮಾರ್ ಕೊತ್ತಗೆರೆ ದೂರಿದರು.

ಅಲೆಮಾರಿ ಬುಡಕಟ್ಟು ಮಹಾಸಭಾದ ಪದಾಧಿಕಾರಿಗಳು ರಾಜಾಜಿನಗರದಲ್ಲಿರುವ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

'ಬೆಂಗಳೂರು ನಗರ ವ್ಯಾಪ್ತಿಯಲ್ಲಿರುವ ಸಮುದಾಯದ 1 ಲಕ್ಷ ಮಂದಿ ಪಾದಚಾರಿ ಮಾರ್ಗಗಳಲ್ಲಿ, ರಸ್ತೆ ಬದಿಯಲ್ಲಿ ಡೇರೆ ನಿರ್ಮಿಸಿಕೊಂಡು, ಹೀನಾಯವಾಗಿ ಬದುಕುತ್ತಿದ್ದಾರೆ. ಇವರಿಗೆ ತುರ್ತಾಗಿ ಸಾಲ ಸೌಲಭ್ಯಗಳನ್ನು ಹಂಚಿಕೆ ಮಾಡುವಂತೆ ಜಿಲ್ಲಾಧಿಕಾರಿ ಗಳು ನಿಗಮಕ್ಕೆ ನಿರ್ದೇಶನ ನೀಡಿದ್ದಾರೆ. ಆದರೂ, ಅದರ ಅನುಷ್ಠಾನ ಮಾಡುವಲ್ಲಿ ನಿಗಮದ ಅಧಿಕಾರಿಗಳು ಉತ್ಸಾಹ ತೋರಿಸದೇ ಅಲೆಮಾರಿ ವಿರೋಧಿ ಧೋರಣೆ ತೋರಿದ್ದಾರೆ' ಎಂದು ಖಂಡಿಸಿದರು.

'ಈ ಬಗ್ಗೆ ಅನುಷ್ಠಾನ ಸಮಿತಿ ಸದಸ್ಯರು ಹಾಗೂ ಸಾರ್ವಜನಿಕರು ಹಲವು ಬಾರಿ ಮನವಿ ಸಲ್ಲಿಸಿದರೂ, ಅಧಿಕಾರಿಗಳು ಹಾರಿಕೆ ಉತ್ತರ ನೀಡುತ್ತಿದ್ದರು. ಕಚೇರಿಯಲ್ಲೂ ಲಭ್ಯವಾಗುತ್ತಿರಲಿಲ್ಲ. ಇದನ್ನು ಖಂಡಿಸಿ ನಿಗಮದ ಕಚೇರಿಗೆ ಮುತ್ತಿಗೆ ಹಾಕಿದ್ದೇವೆ' ಎಂದರು.

'ನಗರದಲ್ಲಿರುವ ಎಲ್ಲ ಅಲೆಮಾರಿಗಳಿಗೆ ಕೋವಿಡ್ ಲಸಿಕೆಯ ವ್ಯವಸ್ಥೆ ಮಾಡಬೇಕು. ದಿನಸಿ ಕಿಟ್ ವಿತರಿಸಬೇಕು. ಡೇರೆಗಳಲ್ಲಿ ವಾಸಿಸುತ್ತಿರುವ ಅಲೆಮಾರಿಗಳಿಗೆ ಮಳೆಗಾಲದಲ್ಲಿ ಸಮಸ್ಯೆಯಾಗುತ್ತಿದ್ದು, ಅವರ ರಕ್ಷಣೆಗೆ ಟಾರ್ಪಲ್ ವಿತರಿಸಬೇಕು. ಎಲ್ಲ ಅಲೆಮಾರಿ ಜನರಿಗೆ ಶಾಶ್ವತ ಸೂರು ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

### ಮಾದಿಗ ಸಂಘಟನೆಗಳ ಒಕ್ಕೂಟದಿಂದ ಮುತ್ತಿಗೆ

**ಕಲಬುರ್ಗಿ:** ಸದಾಶಿವ ಆಯೋಗದ ವರದಿ ಜಾರಿಗೆ ಹಿಂದಿನ ಕಾಂಗ್ರೆಸ್ ಸರ್ಕಾರವಿದ್ದಾಗ ಕೇಂದ್ರಕ್ಕೆ ಶಿಫಾರಸು ಮಾಡಲು ವಿರೋಧಿಸಿದ್ದರು ಎಂದು ಆರೋಪಿಸಿ ಕೆಪಿಸಿಸಿ ರಾಜ್ಯ ಘಟಕದ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಮಾದಿಗ ಸಂಘಟನೆಗಳ ಒಕ್ಕೂಟದ ಸದಸ್ಯರು ಶನಿವಾರ ಮುತ್ತಿಗೆ ಹಾಕಿ ಅವರ ವಿರುದ್ಧ ಘೋಷಣೆ ಕೂಗಿದರು.

'ಈ ವರದಿಯ ಜಾರಿಯು ಮಾದಿಗ ಸಮುದಾಯದ ಹಲವು ವರ್ಷಗಳ ಬೇಡಿಕೆ. ಈ ಬಗ್ಗೆ ಸಿದ್ದರಾಮಯ್ಯ ನೇತೃತ್ವದ ಹಿಂದಿನ ಕಾಂಗ್ರೆಸ್ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಲಿಲ್ಲ. ತಾವೂ ವರದಿ ಜಾರಿಗೆ ವಿರೋಧ ವ್ಯಕ್ತಪಡಿಸಿದ್ದಿರಿ' ಎಂದು ಆಕ್ಷೇಪಿಸಿದರು.

'ಇದರಿಂದಾಗಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯ ಸೋಲು ಕಂಡಿದೆ. ಈಗಲೂ ಮಾದಿಗ ಸಮುದಾಯಕ್ಕೆ ಆದ್ಯತೆ ನೀಡುವ ಬದಲು ಲಂಬಾಣಿ ಸಮುದಾಯದ ಬಗ್ಗೆ ವಿಶೇಷ ಆಸಕ್ತಿ ವಹಿಸುತ್ತಿರುವುದು ಸರಿಯಲ್ಲ' ಎಂದು ಮುಖಂಡರು ಆಕ್ಷೇಪಿಸಿದರು.

ಪ್ರತಿಭಟನಕಾರರ ಕೈಯಲ್ಲಿದ್ದ ಅಂಬೇಡ್ಕರ್ ಮತ್ತು ಬಾಬು ಜಗಜೀವನ ರಾಂ ಅವರ ಭಾವಚಿತ್ರ ಎತ್ತಿ ಹಿಡಿದ ಶಿವಕುಮಾರ್, ಬೇಡಿಕೆ ಈಡೇರಿಸಲು ಯತ್ನಿಸುವುದಾಗಿ ಭರವಸೆ ನೀಡಿದರು.

### ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರತಿಪಾದನೆ

# ಎ.ಜೆ.ಸದಾಶಿವ ಆಯೋಗದ ವರದಿ ಭಾವನಾತ್ಮಕ ತೀರ್ಮಾನ ಬೇಡ

ಪ್ರಜಾವಾಣಿ ವಾರ್ತೆ

**ವಿಜಯಪುರ:** 'ಒಳಮೀಸಲಾತಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗವನ್ನು ಈ ಹಿಂದೆ ನಾನೇ ಸಚಿವನಾಗಿದ್ದಾಗ ನೇಮಕ ಮಾಡಲಾಗಿದ್ದು, ಈ ಬಗ್ಗೆ ಭಾವನಾತ್ಮಕ ತೀರ್ಮಾನ ಆಗಬಾರದು. ತರಾತುರಿಯಲ್ಲಿ ನ್ಯಾಯ ಒದಗಿಸುವ ಕಾರ್ಯ ಇದಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ಸಿಂದಗಿ ಪಟ್ಟಣದಲ್ಲಿ ಶನಿವಾರ ಏರ್ಪಡಿಸಿದ್ದ ಪರಿಶಿಷ್ಟ ಸಮುದಾಯದ ಕುಂದುಕೊರತೆ, ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಮಗೆ ಚುನಾವಣಾ ರಾಜಕಾರಣ ಮುಖ್ಯವಲ್ಲ. ಜನರಿಗೆ ಆತ್ಮಸ್ಥೈರ್ಯ ತುಂಬುವುದು ಮುಖ್ಯ. ರಾಜಕಾರಣ ಮಾಡುವ ಬದಲಾಗಿ ಪರಿಶಿಷ್ಟರ ಸಮಸ್ಯೆಗಳನ್ನು ಆಲಿಸಿ ಮುಂದಿನ ದಿನಗಳಲ್ಲಿ ಯೋಜನೆ ರೂಪಿಸಲಾಗುವುದು' ಎಂದರು.

ಕೋವಿಡ್‌ನಿಂದ ಜನ ಸಾಮಾನ್ಯರು, ಬಡವರು, ಅಲ್ಪಸಂಖ್ಯಾತರು ಮತ್ತು ಅಸಂಘಟಿತ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ಕೋವಿಡ್‌ನಿಂದ ಸತ್ತವರಿಗೆ ಪರಿಹಾರ ಸಿಕ್ಕಿಲ್ಲ. ಹೀಗಾಗಿ ಜನರ ಕುಂದುಕೊರತೆ ಆಲಿಸಲು ರಾಜ್ಯದಾದ್ಯಂತ ಪ್ರವಾಸ ನಡೆಸುತ್ತಿದ್ದೇನೆ ಎಂದು ಅವರು ತಿಳಿಸಿದರು.

ವಿಜಯಪುರ ತಾಲ್ಲೂಕಿನ ದೇವರಹಿಪ್ಪರಗಿ ತಾಲ್ಲೂಕಿನ ಪಡಗನೂರ ತಾಂಡಾದಲ್ಲಿ ಆಯೋಜಿಸಲಾಗಿದ್ದ ಲಂಬಾಣಿ ಸಮುದಾಯದವರ ಕುಂದುಕೊರತೆ ಸಭೆಯಲ್ಲಿ ಪಾಲ್ಗೊಂಡಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆವರು ಲಂಬಾಣಿ ಸಾಂಪ್ರದಾಯಿಕ ಉಡುಪು ತೊಟ್ಟಿದ್ದ ಬಾಲಕಿ ಜೊತೆ ಹರಟೆದರು–ಪ್ರಜಾವಾಣಿ ಚಿತ್ರ

ಬಳಿಕ ದೇವರಹಿಪ್ಪರಗಿ ತಾಲ್ಲೂಕಿನ ಪಡಗನೂರ ತಾಂಡಾದಲ್ಲಿ ಲಂಬಾಣಿ ಸಮುದಾಯದವರ ಕುಂದು-ಕೊರತೆಗಳನ್ನು ಶಿವಕುಮಾರ್ ಅವರು ಆಲಿಸಿದರು.


ಪ್ರಜಾವಾಣಿ **ಕ್ಲಾಸಿಫೈಡ್ಸ್**

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

## JOB OPPORTUNITIES

### Engg/ Production Technical

**WANTED GRADUATE** 2- 3 years Maintenance Electrical/ Mechanical/ EOT Cranes/ Compressor. srinivasan.t@hotmail.com

**GRANITE EOU** requires Production Manager and Mechanical Maintenance Engineer for Multiwires and Line Polihsing Plant, Bangalore. Pharma14g@gmail.com

**REQUIRED EXPERIENCED** CNC-OPERATORS, QUALITY CONTROLLER, PRODUCTION ENGINEER. 'VINUMAC' #205A, Peenya 3rd phase, Bangalore-58. Contact: 080-28391959 admin@vinumac.com

**WANTED at BSK II STAGE, BANGALORE**

1. **TECHNICAL MARKETING EXECUTIVE-** Diploma/ Graduate-Fresher or 01/ 02 Years, Female only
2. **MARKETING EXECUTIVE-** Back Office- Diploma/ BE, Fresher or 1-2 Year Exp. Female only
3. **DESIGN ENGINEERS-** M/F- familiar with AutoCAD & 3D Software- DME/ BE- Mechanical/ DTDM
4. **QUALITY EXECUTIVE-** BE Fresher (Mech/EC/EEE), or 1 Year Exp or Diploma with 1-2 Years.
5. **Senior Quality Executive** – BE (EC/EEE) 4-5 Yrs Exp in Quality & QMS. Diploma (EC/EEE) 6-7 Yrs Exp in Quality & QMS. ISO 9001/IATF 16949 is preferable.
6. **Automatic assembly Machine operators,** Fresher/ Experienced, Diploma/ ITI Male only.

**Good Salary + Perquisites.**
For this post Call for direct Interview:
**Pandu: 9448186139/ Vikram: 8792929767**

**Send resume to**
**careers@protectron.in**
For details please visit
**www.protectron.in**

**"WANTED-DIPLOMA/ B.E-CANDIDATE"** in Electrical and Electronics, with Experience of 0/2 Year only. Contact: Yukthi Datasoft Pvt. Ltd. on 9845704698, 9986934382, https://w3w.co/running.student.mixes

**SWAN ENVIRONMENTAL PVT LTD.**
(ISO 9001: 2015 Certified Company)
www.swanenviron.com
*Require*
**SERVICE TECHNICIAN/ ENGINEER**
**Full time,** Responsible for installation & maintenance of the given instruments.
**Karnataka (All Districts)**
**Experience**: **FRESHERS-**
**Qualification**: ITI/Diploma (Electronics, Instrumentation)
Ph: 9642225207 / 8095777799
**Email:** srhr@swanenviron.com **or** bangalore@swanenviron.com
*Apply before 31-07-2021*

**IMMEDIATE PLACEMENT**
ITI Trained Soldering Technicians, Experience / Fresher's
Contact: **AURO LED**
57/1, Benniganahalli, (Pai Layout) Old Madras Road, Bangalore-560 016
**Contact Person: Mr. Peri**
**Contact No: 81977 39234**

**WANTED LIFT technician for installation and maintenance. Minimum 2 years experience, Contact: 9840449226, Email: nirmala@eliteelevators.com**

**WANTED FOR** progressive Electronics SSI in Rajajinagar Assembly Technicians, Sales Executives, ITI/Diploma/ BSc Electronics Candidates with some experience. Contact Immediately 8880708225

**WANTED SINGLE/MULTI** Spindle Operators: Any qualification, Quality Inspectors: Qualification: PUC, Kamakshipalya, Bangalore-560079, Contact: 9845142536

### Teachers/ Professors

**WANTED ENGLISH** MEDIUM TRAINED LADY TEACHERS B.A /M.A., B.Ed to teach English/ Social Science for Primary /Hindi for High School/ Primary/ N.T.T/ B.Sc Computer Science faculty. Contact in person (10.00 am-3.00 pm on all working days) - Secretary, Deccan Educational Society, No.95, 3rd Cross, Srirampuram, Bengaluru- 560021 (Near Sampige Theater, Malleswaram)

**RBANM's EDUCATIONAL CHARITIES**
# 24, Gangadara Chetty Road, Bengaluru - 560 042, Ph: 080-41680579
**Career Opportunities - Application Invited for various Position**

**School**

**Administrative Officer for Schools:** Job Code: SCLADM-01 - **Qualification:** Master Degree with B.Ed., 10 to 15 Years as a Principal or any Senior Position in Reputed Schools/Colleges. Well versed with the latest method of Teaching and Educational Policy. Should be capable of handling work related to the Educational Department.

**Teachers for English & Social Studies :** Job Code: HSEGSS: 01 - **Qualification:** Degree with B.Ed., In English/History/Economics/B .Sc..P.C.M/B.Ed. 5 to 10 Years' Experience in Teaching English and Social Studies for High School.

**Teachers for Maths :** Job Code: GGPS - 01 - **Qualification:** B.Sc.P.C.M/B.Ed/D.Ed/TCH, 5 to 10 Years' Experience in Teaching Maths for Primary School. Knowledge of Kannada is essential.

**Charities Office**

**Finance & Accounts:** Job Code: CHARFO - 01 - **Qualification:** B.Com., Having 8 to 10 Years' experience with good knowledge of Accounting, Month End Book Closure and Accounts Finalization. Experience in Tally/CA Firm will be an added advantage and should be a good team player.

**Degree College**

**Assistant Professor for Economics/English/Tamil:** Job Code: FGCES - 01/FGCEG - 01/ FGCTA - 01 - **Qualification:** Master Degree with Doctorate (Phd.) M.Phil.NET/SLET (Preferred Minimum 5 Years' Experience)

**Physical Education Director:** Job Code: FGCPT-01 - **Qualification:** M.P.Ed., with Doctorate,NET/SLET (Preferred Minimum 5 Years' Experience)

**Skills:** Excellent Communication Skills, Interpersonal Development Skills and Computer knowledge is the must for all the Applicants.

**Salary: Gross Monthly Remuneration will be the best in the Industry.**
**Interested Candidates may send their latest and detailed profile with Job Code to jobs@rbanmscharities.in or post your resume to, The Secretary, RBANM'S Educational Charities, # 24, Gangadhara Chetty Road, Bangalore - 42, within 10 days from the date of the publications.**

**ENGLISH, MATH -** Physics & Hindi Teachers needed for Middle & High School for Chitrakoota CBSE School in Nagarbhavi, Kengeri Ring Road, with high salary. Immediately or for the next academic year. Call: 7829647333 chitrakootajobs@gmail.com

**SVN ENGLISH** High School, Thanisandra Main Road,Nagawara, Bangalore-77, (opposite elements mall), Requires Experienced TEACHERS to teach English (BA/MA,BEd) for High School. Call:9686200200/ 9448462093

**CHRISTIAN COLLEGE BANGALORE**
**Horamavu Agara, Bangalore, Karnataka, India**
www.christiancollegebangalore.org
*Invites application from suitable applicants for the following vacancies.*
**Department :**
**Optometry, Cardiac Care Technology, Radiology, Respiratory Care Technology, Renal Dialysis, Microbiology**
**Non Teaching Requirements :**
**Librarian, Accountant, Office Assistant, System Admin, University Liaison Officer**
Interested and Eligible Candidate shall mail the C.V before 30-7-2021 to : ccbangalore@yahoo.com

**"ENDEAVOUR'S INTERNATIONAL** School, Mugalur. Qualified English, Social Teachers required to teach 8/9/10 ICSE.Contact: 8722140020/ 9945058552."

**WANTED NAYANA** Vidyanikethana Patashale, Required Experience High School Teachers for Maths. Science and English Subject, B.Ed. Compulsory. Address: Near Kengeri Around. Contact: 9632202212, 9448074325, 7483440310

**QUALIFIED TEACHERS** require toteach SCIENCE & ENGLISH for HighSchool and Primary,Freshers can also apply.Contact immediately Secretary, SRIVINAYAKA VIDYA KENDRA, Kodigehalli, Thindlu MainRoad, SahakarnagarPost, Bangalore-560092.Phone: 9880357297/08041698983.

**SWAMY VIVEKANANDA INTERNATIONAL PUBLIC SCHOOL**
#38, Near Housing Board Colony, Attur Layout, Yelahanka, Bengaluru - 560 064
**URGENTLY REQUIRED**
**Lady Accountant** with minimum 3 to 5 years of experience in school accounts with knowledge of Tally and ERP-9.
**Mathematics, Physics, Social Science & English** Teacher for High School with minimum experience of 3 years in CBSE Schools.
**Interested candidates can walk-in for an interview on Monday 19.7.2021.**
**Phone : 9108221414 / 72044 37368**
e-mail: svips.ynk@gmail.com Website: www.svips.in

**FACULITIES FOR** PUC and Degree with 2 years experience. Commerce-2 (PUC & B-Com), Computer Science-2 (BCA), Language-2. For Walk-in-Interview Call on Weekday's 9740070432.

**"ST.JOSEPH'S BOYS'** High School, Museum Road, Bengaluru requires Teachers for the ISC & High School Section: Economics (PG with B.Ed). Please send an email with your CV & recent photograph mentioning the post applied for in the subject line and also submit a hard copy to the school office at the earliest. 27, Museum Road, Bengaluru 560025 Phone: 8884200549 Email: recruitmentsjbhs@gmail.com /Website: www.sjbhs.edu.in"

**THIRUMALA VIDYA NIKETHAN SCHOOL**
#29, G.D Park Extn, Vyalikaval, Bangalore-560003
**Ph: 080-23447560 / 23447570** E-mail: tvns1984@gmail.com
**REQUIRES**
**Qualified / Trained / Experienced Teachers to teach- Pre-Nursery to High School**
**Subjects: -** Kannada / English / Hindi / Maths / Science / Social Science / Sanskrit / PE teacher / MA / BA / M.Sc / B.Sc with B.Ed
Proficiency in the subject and good Communication in English is a must.
Applications with relevant qualification are welcomed.
Please mail / submit the resume with recent photograph to the Principal within 15 days from the date of advertisement.

**WANTED TRAINED** Teachers to teach English, Mathematics and G.Science for Primary & Higher class for school near Vijaynagar Contact:9448016795 9901299450

**REQUIRED TEACHERS**
**for all Subjects:**
**Primary / Higher Primary / High School / P E / Computer Instructors & Office Assistants.**
Attractive salary, P.F & ESIC for deserving candidates, pick up and drop from Nelamangala to Jalahalli Cross (Only on the main road)
Send your resume to **E-Mail ID: bmnrequest@gmail.com** &
**Walk-in interview** with original Marks cards with a set of Xerox copies **on all working days** between 11am to 2:30pm
**SRUSHTI GROUP OF INSTITUTIONS**
**SRUSHTI PUBLIC SCHOOL** (State Board)
**B.M.N PUBLIC SCHOOL** (CBSE Board)
Makali, Alur Road, Dasanapura (H), Near Himalaya Drug Co., Near Jindal, Bengaluru North -562162.
Ph: 8123333577 / 8123333677

**VLS VIDYASAGARA/** MARUTHI VIDYAMANDIRA ENGLISH MEDIUM-SCHOOL, #58/22, Sharada Colony, Basaveshwaranagar, Bangalore-79. Ph:080-23586050/ 23282029/63668 82313. REQUIRED: LADY-TEACHERS CLASS-I to X STD; ENGLISH/SOCIAL-B.A,M.A, B.Ed,M.Ed, MATHS/SCIENCE-BSc,B.Ed, M.Sc,M.Ed, HINDI-BA,B.Ed

**REQUIRED ARTS** Teacher with B.A., B.Ed., (English and S.S.) & Science Teacher with B.Sc.,B.Ed. (Mathematics & Science) for Higher Primary School. Contact immediately Hon. Secretary, Sri Vinayaka Education Society (R) #218, BanappaPark, Cubbonpet, Bengaluru 560002. Ph:22210459, 7406222209.

**KARNATAKA YADAVA** Education Society, Devanahalli Requires for Degree College PRINCIPAL with M.Com. Ph.D, KSET/NET & Asst.Professors in Commerce,Political Science, Economics, History, Kannada, English With PG,B.Ed& KSET. For B.Ed College LECTURERS in Mathematics, History, English,Commerce and Business Studies, Physical Education- PG, M.Ed withKSET. For PU College , LECTURERS in Kannada, English, Commerce, Economics, History with PG,B.Ed. For ITI College JTO Fitter (All Trades)-Diploma in Mechanical. For High School TEACHERS in Kannada, English, Hindi, Mathematics, Social Science, EVS- UG with B.Ed and TET. Contact:08041704396/ 9036823515/ 6362317737/ 9606380888/ 9845404022/ 9448462093. Mail: yadavaeducation@gmail.com

**TEACHERS WANTED** 1st To 10th Std Teachers, English Medium in All Subjects SAGAR-CONVENT Kanakapura Main Road Bangalore-82 Near APS Engineer College: 9342552428

## Hospital & Medical Jobs

**HOSMAT HOSPITAL**
**is Recruiting the following Staff Male and Female at HOSMAT Second Unit at Ring Road, Hennur Junction (open) and Third Unit of HOSMAT is opening shortly at Sadashivanagar, #18, Bellary Main Road.**

1. **Administrator/COO/ CEO/VP**
2. **Medical Director**
3. **Marketing Head with Hospital Experience only**
4. **Duty Doctors (ICU)**
5. **Casualty Medical Officer/ Emergency Medical Officer**
6. **Corporate Marketing Executives**
7. **Accounts Manager with Hospital Experience**
8. **Accounts Execuitves**
9. **Branding and Digital Marketing Executives**
10. **International Marketing Manager**
11. **Patient Finance Co-ordinator / Advisor**
12. **House Keeping Incharge**
13. **ICU Nurses**
14. **Pharmacists**
15. **OT Scrub Nurses & OT Technicians**
16. **Nurses for Wards and Home care**
17. **Front Office– Manager & Executives**
18. **Patients Care / PR Executives**
19. **OT Staffs & Assistants**
20. **Billing and Collection Executives**
21. **Plaster Technicians**
22. **Echo Technicians**
23. **EEG Technicians**
24. **Dialysis Technicians**
25. **A/C Technicians**
26. **Electricians**
27. **Plumbers**
28. **House Keeping Staffs**

**Call: 080 41139762, 9108450312**
recruitment@hosmathospitals.com coordinatorhosmat@gmail.com

**HAL**
HAL Hospital, Bangalore-17, is a 220 bedded Hospital. **HAL Hospital needs Cardiology Technician and EEG Technician (Part time /Visit Basis).** Remuneration will commensurate with the Qualification and Experience. The last date for receipt of application is 31/07/2021. For details visit our Website at **www.hal-india.co.in**.

### Part-Time Jobs

**WANTED EXPERIENCED TALLY OPERATOR/ ACCOUNTANT for Part Time Office work in Vasantnagar, Bangalore- 9845034688**

### Security & Detectives

**SECURITY AGENCY** Requires MANAGER-Knowledge of Operation & Marketing. Email: domaperfect@gmail.com /98868-33540

### Marketing & Sales

**AGSAR PAINTS** PVT. LTD REQUIRED Sales Executives (MALE) Qualification: Degree Age: 30-45 years Language: English, Kannada, Hindi and Tamil Email: bangalore@agsar.net Contact: 9535910010

### Wanted

**WANTED IMMEDIATELY** Delivery Boy's. Salary 12,000/- + petrol, Incentive. Two wheeler must. REPUTE LOGISTICS Pvt Ltd, SR Nagar, Blr-27. Contact: 8618102693, 9342013702.

**START UP** manufacturing company with office in koramangala require an office assistant with 1-2 years experience preferably in accounting.Retired/freshers can also apply.Must join immediately. Call 9845079909

### Accounts & Finance

**CA FIRM** at Wilson Garden Needs Audit/Accounts Assistants. Fresher's/ 1 or 2years Experienced. Apply: Nagendran.co@gmail.com

**WANTED ACCOUNT** Assistant with min 2 to 3 years experience for Garment Manufacturing Co. Basapura, Off Hosur Road, Email: santhaliapankaj@gmail.com

### General

**"REQUIRED QUALIFIED** General Manager for Resort operations at Kabini. Interested candidates Contact ::9108372746 or Email ::manju_tmet@yahoo.co.in"

**EXECUTIVE MANAGER** with good Communication, Computer Knowledge and routine Office Accounts required for Office near M.G. Road. Retired persons may also apply: Bangalore Trades' Association 080-23348834/ 9886754946.

**WANTED OFFICE** Assistant for Bangalore, Tally must, English Fluent,Computer Knowledge,Good Communication Skills, Contact: 9611596075

**MARKETING EXECUTIVES** for Interior Design firm in J P Nagar, 2 wheeler must. Salary 15000/-. Call 80888 39805

### Manager

**SHEKAR EYE** Hospital, J.P.Nagar is looking for Manager, Opticals. Graduate with Minimum 5years experience in Opticals Salary in par with experience send your CV to hr@shekareyehospital.com, Ph:9108431292

### Multiple Vacancy

**SAPTAGIRI SUZUKI** Rajajinagar Requires 2Wheeler Mechanics, Supervisors, 7-Telecallers-ITI/Diploma/ PUC/Experienced Walk-in-10.00am to 6.00pm, Mob:- 9480065113, 8431415919 OR Mail-gm.servicesaptagiri@gmail.com

### Drivers

**WANTED** driver husband and wife Cook for a family of 4 at Bangalore Good salary Accommodation and food. Call 9741900909

**BUSINESS**

### Business to Business

### Business

**"BAR &** Restaurant & Pub Licence CL 9 Available for Rental Basis Contact: 9513222304"

**WANTED BUSINESS** Partner, Lahab Veg Hotel, Investment Rs 5 Lakhs, Income 50:50. Contact: 8892501007/ 9606701007

### Advertising Agency

**ESTABLISHED BANGALORE** Based Advertising Agency available for take over. Call: 080 29605554/ 9019593326.

### Business Offers

### Distributors

**'BIG BUSINESS** Opportunity'. One Stop Solution-All under one roof Construction Products'. Appointing DISTRICT-WISE. DISTRIBUTORS for the following. Home Automation, Bath cp fittings, Home Appliances, Wires&Cables, Decorative paints. Don't Miss it. 7993775414 / 6305656871 /8688805414 www.thrivikramimpex.com

### Finance

**WE ARE** READY TO INVEST LONG TERM PROJECTS ALL OVER THE WORLD Ct : 08610936362/0770821590 4

### General

**EARN REGULAR** INCOME through online TRADING from your home. Forex, Equity and Commodity segments. Get TRAINED by experts. Call 8105303232

**IS_YOUR BUSINESS** doing very good but children not interested & noone to support?You want to retire?To sell your business or to manage your business by paying monthly remunerations or to find a reliable partner. Arun 9845077299

**EDUCATIONAL**

### Admission

**JOIN COMPLETE,** B.Com, BBA, BCA, MBA, B.Ed, Nursing, Pharmacy, LLB, B.Tech, AMIIE, Diploma, PUC, SSLC, 9341273990.

**ADMISSIONS OPEN** 10th,12th, B.A, B.Com, BBA, B.Sc,BCA, B.Ed, MBA, MCA, M.A, M.Com,M.Sc, M.Ed, DIPLOMA,B.Tech, COURSES. Contact: 9901668842/ 9844321589.

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

### Correspondence Courses

**DIRECT FINAL** (1-Sitting) PUC/BCom/ BA/BBA/BCA/ MBA/B.Ed/Dip/ B.Tech/ M.Tech/ D / B.Pharma,100% Success: 9663366823/ 9341337765

### Play School/ Kinder Garten

**IS YOUR** Kindergarten School closed? We are here to help you re-open and get good admissions. Contact: 9449622008

**PERSONAL**

### Lost

**LOST**

**I, Sagaya Mary M.** W/o. Meiknas Paul R/at. No.14/1, 1st floor, 4th cross, SBM Colony, Mathikere, Bengaluru- 560054, have lost my original sale deed of Site No-6, Form 9 & 11 Serial No.487, Junjar No.487, Property No.6, Measuring: East to West: 40 Feet, North to South: 60 Feet Totally 2400 Sq. Ft. Situated at Chikkanekkundi Village, Sarjapura Hobli, Anekal Taluk, Bangalore District.
**If anybody found pls contact: 7411184429 or Inform near by the Police Station.**

### Change of Name

**I SNEHA** KOMARLA (S1623145 passport number) W/o Shasheel Kumar Lingamaneni (Australian Passport: PA8542792) have changed my name as SNEHA KOMARLA LINGAMANENI, henceforth both SNEHA KOMARLA and SNEHA KOMARLA LINGAMANENI are my names only vide affidavit dated 9/07/2021 before notary Hegde Ganapati Venkatraman, Bangalore.

**I, RAJAMANI** Papayya R/at. #130, Church street, Anandapura behind Naidu hotel, Bangalore north, Bengaluru- 560036, have changed my minor daughter's name from RAJAMANI RACHEL to RAJAMANI RECHEL vide affidavit dated 09/07/2021 before notary M.S. Satish., Bangalore.

**I, SIMHADRI** JOSHI S/o. Panduranga Vittal residing at No.1/32, Lakshmi Nivas, 16th cross, Gangondanahalli, Vijayanagar, Bangalore-560040, have changed my name from SIMHADRI JOYISA to SIMHADRI JOSHI vide affidavit dated 17/07/2021 before notary Yankoba., Bangalore

**ARIGE RANI** W/o. 14847423W, SEP/MT, G Yadagiri, Vill/Mandal Cherial Dist Siddipet, Telangana, my name ARIGE RANI to GUNIGANTI RANI notary KV Mani, Bangalore.

**14847423W, SEP/MT,** G Yadagiri, Indian Coast Guard DHQ5, Rajaji Salai, Chennai, father name service record SUDHARSHANAM instead of GUNIGANTI SUDARSHAN notary KV Mani, Bangalore.

**I, MEKHALA** SATISH, have changed my name as MEKHALA VENKATESH, vide affidavit dated 15-07-2021, sworn to before NOTARY S.Nagaraja, identified by ADVOCATE M.Bhaskara Jois.

**14847423W, SEP/MT,** G Yadagiri, Indian Coast Guard DHQ5, Rajaji Salai, Chennai, mother name service record SATTAMMA instead of GUNIGANTI SATHAMMA notary KV Mani, Bangalore.

**EDUCATION SPECIAL**
We are coming out with special offer for Admission Notice, Education Success Congratulation Ads
DH Classifieds – More value, more impact
For details contact: Jerry: 9731810277 Vishal: 9845114560 Tanveer: 9886213331
E-mail: dhclassifieds@deccanherald.co.in

ಉದ್ಯಮಿಯ ಜಿಎಸ್‌ಟಿ ಖಾತೆ ಹ್ಯಾಕ್ • ಬೆಂಗಳೂರಿನಲ್ಲಿ ಎಫ್‌ಐಆರ್ ದಾಖಲು

# 'ಜಿಎಸ್‌ಟಿ' ಮೇಲೂ ವಂಚಕರ ಕಣ್ಣು

• ಸಂತೋಷ ಜಿಗಳಿಕೊಪ್ಪ

**ಬೆಂಗಳೂರು:** ಬ್ಯಾಂಕಿಂಗ್, ಸಾಮಾಜಿಕ ಜಾಲತಾಣ, ಓಎಲ್‌ಎಕ್ಸ್ ಸೇರಿ ಹಲವು ಮಾರ್ಗದಲ್ಲಿ ಸೈಬರ್ ಅಪರಾಧ ಎಸಗುತ್ತಿರುವ ವಂಚಕರು, ಇದೀಗ ಕೇಂದ್ರ ಸರ್ಕಾರದ ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ಜಾಲತಾಣದ ಮೇಲೂ ಕಣ್ಣು ಹಾಕಿದ್ದಾರೆ.

ನಗರದ ಉದ್ಯಮಿಯೊಬ್ಬರು ಜಿಎಸ್‌ಟಿ ಮರುಪಾವತಿ ಮಾಡಲು www.gst.gov.in ಜಾಲತಾಣದಲ್ಲಿ ತೆರೆದಿದ್ದ ಖಾತೆಯನ್ನು ಖದೀಮರು ಹ್ಯಾಕ್ ಮಾಡಿದ್ದಾರೆ. ಈ ಬಗ್ಗೆ ನಗರದ ಪಶ್ಚಿಮ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಮೈಸೂರು ರಸ್ತೆಯ ಕುವೆಂಪು ನಗರದ ಉದ್ಯಮಿ ಸುರೇಶ್ ಜೈನ್ ಎಂಬುವರ ಖಾತೆಯನ್ನು (29AWHP*******ZO) ವಂಚಕರು ಹ್ಯಾಕ್ ಮಾಡಿದ್ದಾರೆ. ಪ್ರಸಕ್ತ ವರ್ಷದ ಜಿಎಸ್‌ಟಿ ಮರುಪಾವತಿ ಮಾಡುವಾಗ ಈ ಕೃತ್ಯ ಬೆಳಕಿಗೆ ಬಂದಿದೆ. ದೂರು ನೀಡಿರುವ ಸುರೇಶ್ ಜೈನ್, ಹ್ಯಾಕ್ ಮಾಡಿರುವ ಆರೋಪಿಗಳನ್ನು ಪತ್ತೆ ಮಾಡುವಂತೆ ಕೋರಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

**ಜಾಲತಾಣ ನಿರ್ವಹಣೆಗಾರರಿಗೆ ಪತ್ರ:** ಜಿಎಸ್‌ಟಿ ಖಾತೆ ಹ್ಯಾಕ್ ಸಂಬಂಧ ನಗರದಲ್ಲಿ ದಾಖಲಾದ ಮೊದಲ ಪ್ರಕರಣ ಇದಾಗಿದೆ. ಜಿಎಸ್‌ಟಿ ಜಾಲತಾಣ ಮೇಲೆಯೇ ವಂಚಕರ ಕಣ್ಣು ಬಿದ್ದಿರುವುದನ್ನು ಗಂಭೀರವಾಗಿ ಪರಿಗಣಿಸಿರುವುದಾಗಿ ಹೇಳಿರುವ ಪೂರ್ವ ವಿಭಾಗದ ಸೈಬರ್ ಕ್ರೈಂ ಪೊಲೀಸರು, ಸಿಐಡಿ ಸೈಬರ್ ವಿಭಾಗದ ಅಧಿಕಾರಿಗಳ ಸಹಕಾರದಲ್ಲಿ ತನಿಖೆ ಚುರುಕುಗೊಳಿಸಿದ್ದಾರೆ.

ಜಿಎಸ್‌ಟಿ ಜಾಲತಾಣ ನಿರ್ವಾಹಕರಿಗೆ ಹಿರಿಯ ಅಧಿಕಾರಿಗಳ ಮೂಲಕ ಪತ್ರ ಬರೆದಿರುವ ಪೊಲೀಸರು, 'ಜಿಎಸ್‌ಟಿ ಖಾತೆ ಹ್ಯಾಕ್ ಮಾಡಿರುವ ಬಗ್ಗೆ ಪರಿಶೀಲನೆ ನಡೆಸಿ, ಆರೋಪಿಗಳ ಬಗ್ಗೆ ಏನಾದರೂ ಸುಳಿವು ಇದ್ದರೆ ವರದಿ ನೀಡಿ' ಎಂದು ಕೋರಿದ್ದಾರೆ.

**ಪರಿಚಯಸ್ಥರಿಂದ ಕೃತ್ಯ ಶಂಕೆ:** 'ಕೆಲ ವರ್ಷಗಳ ಹಿಂದೆಯೇ ಜಿಎಸ್‌ಟಿ ಖಾತೆ ತೆರೆದಿದ್ದ ಸುರೇಶ್, ಜಿಎಸ್‌ಟಿ ಮರುಪಾವತಿ ಮಾಡುತ್ತಿದ್ದರು. ಖಾತೆ ತೆರೆಯಲು ಅಗತ್ಯವಿರುವ 'ಯೂಸರ್ ನೇಮ್' ಹಾಗೂ 'ಪಾಸ್‌ವರ್ಡ್' ಅವರ ಬಳಿ ಇತ್ತು. ಆ ಮಾಹಿತಿ ತಿಳಿದುಕೊಂಡ ಪರಿಚಯಸ್ಥರೇ ಖಾತೆ ತೆರೆದು ಯೂಸರ್ ನೇಮ್ ಹಾಗೂ ಪಾಸ್‌ವರ್ಡ್ ಬದಲಾಯಿಸಿರುವ ಮಾಹಿತಿ ಇದೆ. ಈ ರೀತಿ ಕೃತ್ಯವಾದರೂ ಹ್ಯಾಕ್ ಎಂದೇ ಪರಿಗಣಿಸಲಾಗುವುದು. ಈ ಸಂಬಂಧವೂ ಹಲವರನ್ನು ವಿಚಾರಣೆ ನಡೆಸಲಾಗಿದೆ. ಸದ್ಯಕ್ಕೆ ನಿಖರ ಮಾಹಿತಿ ಸಿಕ್ಕಿಲ್ಲ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

**ಮುಖ್ಯಾಂಶಗಳು**

- ಜಾಲತಾಣ ನಿರ್ವಾಹಕರಿಂದ ಮಾಹಿತಿ ಕೋರಿದ ಪೊಲೀಸರು
- ನಗರದಲ್ಲಿ ದಾಖಲಾದ ಮೊದಲ ಪ್ರಕರಣ

### 'ಜಿಎಸ್‌ಟಿ ಜಾಲತಾಣ ಸುರಕ್ಷಿತ'

'ಜಿಎಸ್‌ಟಿ ಜಾಲತಾಣ ಸುರಕ್ಷಿತವಾಗಿರುವುದಾಗಿ ಅದರ ನಿರ್ವಾಹಕರು ಹೇಳಿದ್ದಾರೆ. ದೂರುದಾರ ಸುರೇಶ್ ಅವರ ವೈಯಕ್ತಿಕ ಖಾತೆ ಮಾತ್ರ ಹ್ಯಾಕ್ ಆಗಿದ್ದು, ಅದರಿಂದ ಯಾವುದೇ ನಷ್ಟವಾಗಿಲ್ಲ. ಜಿಎಸ್‌ಟಿ ಮರುಪಾವತಿಗೆ ಮಾತ್ರ ಸಮಸ್ಯೆಯಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಖಾತೆ ಹ್ಯಾಕ್ ಮಾಡುವುದು ಗಂಭೀರ ಅಪರಾಧ. ಆರೋಪಿಗಳು ಯಾರು ಎಂಬುದನ್ನು ಪತ್ತೆ ಮಾಡಿ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು' ಎಂದೂ ತಿಳಿಸಿದರು.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

**ವೈಕುಂಠ ಸಮಾರಾಧನೆ**



ಶ್ರೀ ಬಿ.ಕೆ. ನಾಗಭೂಷಣ ರೆಡ್ಡಿ

ವೈಕುಂಠ ಸಮಾರಾಧನೆಯನ್ನು ದಿನಾಂಕ 18-7-2021 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಬೊಮ್ಮನಹಳ್ಳಿ, ಬೆಂಗಳೂರು-560 068 ಇಲ್ಲಿ ನೆರವೇರಿಸಲಾಗುವುದು.

ಇಂತಿ : ಶ್ರೀಮತಿ ವಿ. ನೇತ್ರಾವತಿ ಮತ್ತು ಕುಟುಂಬವರ್ಗದವರು.

**LOOKING TO BUILD, BUY OR SELL A PROPERTY**

Please refer Classifieds on Sunday

**ಚಿರಸ್ಮರಣೆ**



ಶ್ರೀಮತಿ. ಪಿಳ್ಳಮ್ಮನವರು ಶ್ರೀಮಾನ್॥ ವಿ. ಮುನಿರೆಡ್ಡಿಯವರು

ನೀವುಗಳು ನಮ್ಮನ್ನಗಲಿದರೂ ನಿಮ್ಮ ಸರಳತೆ, ಪ್ರೀತಿ ಮತ್ತು ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಲ್ಲಿರುವ

-ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬವರ್ಗ

**ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು**

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಆಗಸ್ಟ್ – ಡಿಸೆಂಬರ್ ನಡುವೆ ಲಸಿಕೆಗಳ ಪೂರೈಕೆ ನಿರೀಕ್ಷೆ

# 66 ಕೋಟಿಗೂ ಹೆಚ್ಚು ಡೋಸ್ ಲಸಿಕೆ ಖರೀದಿಸಲಿರುವ ಕೇಂದ್ರ

**ನವದೆಹಲಿ (ಪಿಟಿಐ):** ಕೇಂದ್ರ ಸರ್ಕಾರ 66 ಕೋಟಿಗೂ ಹೆಚ್ಚು ಡೋಸ್‌ಗಳಷ್ಟು 'ಕೋವಿಶೀಲ್ಡ್' ಮತ್ತು 'ಕೋವ್ಯಾಕ್ಸಿನ್' ಲಸಿಕೆಗಳನ್ನು ಪರಿಷ್ಕೃತ ದರದಲ್ಲಿ ಖರೀದಿಸುತ್ತಿದ್ದು, ಈ ಲಸಿಕೆಗಳು ಆಗಸ್ಟ್ ಮತ್ತು ಡಿಸೆಂಬರ್ ನಡುವೆ ಪೂರೈಕೆಯಾಗಲಿವೆ ಎಂದು ಮೂಲಗಳು ತಿಳಿಸಿವೆ.

ಕೋವಿಡ್ ಪಿಡುಗಿನ ವಿರುದ್ಧ ಹೋರಾಡಲು ನೀಡುತ್ತಿರುವ ಈ ಲಸಿಕೆಗಳ ಪರಿಷ್ಕೃತ ದರದ ಪ್ರಕಾರ ಕೋವಿಶೀಲ್ಡ್ ಪ್ರತಿ ಡೋಸ್‌ಗೆ ₹205 ಮತ್ತು ಕೋವ್ಯಾಕ್ಸಿನ್ ಪ್ರತಿ ಡೋಸ್‌ಗೆ ₹215 ನಿಗದಿಪಡಿಸಲಾಗಿದೆ.

ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಿಂದ 37.5 ಕೋಟಿ ಡೋಸ್‌ಗಳಷ್ಟು ಕೋವಿಶೀಲ್ಡ್ ಮತ್ತು ಭಾರತ್ ಬಯೋಟೆಕ್‌ನಿಂದ 28.5 ಕೋಟಿ ಡೋಸ್‌ಗಳಷ್ಟು ಕೋವ್ಯಾಕ್ಸಿನ್ ಲಸಿಕೆಗಳನ್ನು ಖರೀದಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

'66 ಕೋಟಿ ಡೋಸ್‌ಗಳಷ್ಟು ಲಸಿಕೆಗಳ ಖರೀದಿಗೆ ಬೇಡಿಕೆ ಸಲ್ಲಿಸಲಾಗಿದೆ. ಈ ಲಸಿಕೆಗಳು ಪರಿಷ್ಕೃತ ದರದಲ್ಲಿ ಆಗಸ್ಟ್ ಮತ್ತು ಡಿಸೆಂಬರ್ ನಡುವೆ ಪೂರೈಕೆಯಾಗಲಿವೆ' ಎಂದು ಮೂಲಗಳು ತಿಳಿಸಿವೆ. ತೆರಿಗೆ ಸೇರಿ ಕೋವಿಶೀಲ್ಡ್ ಪ್ರತಿ ಡೋಸ್ ದರ ₹215 ಮತ್ತು ಕೋವ್ಯಾಕ್ಸಿನ್ ಪ್ರತಿ ಡೋಸ್‌ಗೆ ₹225.75 ಆಗುತ್ತದೆ.

**ಲಸಿಕೆ ಪಡೆಯದವರಲ್ಲಿ ಸೋಂಕು ಹೆಚ್ಚು (ವಾಷಿಂಗ್ಟನ್) (ಎಪಿ):** 'ಅಮೆರಿಕದಲ್ಲಿ ಮತ್ತೆ ಕೋವಿಡ್ ಪ್ರಕರಣಗಳು ಮತ್ತು ಸಾವಿನ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ' ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಆತಂಕ ವ್ಯಕ್ತಪಡಿಸಿದ್ದಾರೆ.

'ದೇಶದಲ್ಲಿ ಕಳೆದ ಮೂರು ವಾರಗಳಲ್ಲಿ ಕೊರೊನಾ ಪ್ರಕರಣಗಳ ಸಂಖ್ಯೆಯಲ್ಲಿ ಮೂರು ಪಟ್ಟು ಏರುಗತಿ ಉಂಟಾಗಿದೆ. ಆಸ್ಪತ್ರೆಗಳು ಭರ್ತಿಯಾಗುತ್ತಿವೆ. ಲಸಿಕೆ ಪಡೆಯದಿರುವ ಜನರಲ್ಲಿ ಸೋಂಕು ಹೆಚ್ಚಾಗಿ ಕಾಣುತ್ತಿದೆ. ಅವರೇ ಹೆಚ್ಚಾಗಿ ಸಾವಿಗೀಡಾಗುತ್ತಿದ್ದಾರೆ' ಎಂದು ಮೂಲಗಳು ಹೇಳಿವೆ.

### ಐಜ್ವಾಲ್ ನಗರ ಪಾಲಿಕೆ ಪ್ರದೇಶದಲ್ಲಿ ಮತ್ತೆ ಏಳು ದಿನ ಲಾಕ್‌ಡೌನ್

**ಐಜ್ವಾಲ್, ಮಿಜೋರಾಂ (ಪಿಟಿಐ):** ಕೋವಿಡ್ ಪ್ರಕರಣಗಳು ಉಲ್ಬಣಗೊಂಡ ಹಿನ್ನೆಲೆಯಲ್ಲಿ ಐಜ್ವಾಲ್ ನಗರ ಪಾಲಿಕೆ ಪ್ರದೇಶದಲ್ಲಿ ಮತ್ತೆ ಏಳು ದಿನಗಳ ಲಾಕ್‌ಡೌನ್ ಹೇರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಈಶಾನ್ಯ ರಾಜ್ಯಗಳ ಕೆಲವು ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹಚ್ಚಾಗಿವೆ. ಹಾಗಾಗಿ ಆಯಾ ರಾಜ್ಯದ ಮುಖ್ಯಮಂತ್ರಿಗಳು ಎಚ್ಚರಿಕೆಯಿಂದ ಇರಬೇಕು. ಸೋಂಕು ಪ್ರಸರಣದ ವಿರುದ್ಧ ತ್ವರಿತವಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಹೇಳಿದ್ದರು.

### ಥಾಯ್ಲೆಂಡ್: 10,000 ದಾಟಿದ ದೈನಂದಿನ ಪ್ರಕರಣ

**ಬ್ಯಾಂಕಾಕ್ (ಎಪಿ):** ಥಾಯ್ಲೆಂಡ್‌ನಲ್ಲಿ ಕೋವಿಡ್-19ರ ದೈನಂದಿನ ಪ್ರಕರಣಗಳ ಸಂಖ್ಯೆ 10,000 ದಾಟಿದ ಹಿನ್ನೆಲೆಯಲ್ಲಿ ಕೋವಿಡ್ ನಿಯಮಗಳನ್ನು ಇನ್ನಷ್ಟು ಕಠಿಣಗೊಳಿಸಲಾಗಿದೆ.

ಥಾಯ್ಲೆಂಡ್‌ನಲ್ಲಿ ಶನಿವಾರ 141 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. ದೇಶದಲ್ಲಿ ಸೋಂಕು ಉಲ್ಬಣಗೊಳ್ಳುತ್ತಿರುವುದರಿಂದ, ಪ್ರಕರಣಗಳು ಹೆಚ್ಚಿರುವ ಬ್ಯಾಂಕಾಕ್ ನಗರ ಸೇರಿದಂತೆ ಇತರೆ ಹಲವಾರು ಪ್ರಾಂತ್ಯಗಳಲ್ಲಿ ರಾತ್ರಿ ಕರ್ಫ್ಯೂ ಸೇರಿ ಹಲವು ಕಠಿಣ ನಿಯಮಗಳನ್ನು ಜಾರಿಗೊಳಿಸಲಾಗಿದೆ.

### ಸಕ್ರಿಯ ಪ್ರಕರಣ: 30 ಸಾವಿರಕ್ಕೆ ಇಳಿಕೆ

**ಬೆಂಗಳೂರು:** ರಾಜ್ಯದಲ್ಲಿ 1,869 ಮಂದಿ ಕೋವಿಡ್ ಪೀಡಿತರಾಗಿರುವುದು ಶನಿವಾರ ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 30 ಸಾವಿರಕ್ಕೆ ಇಳಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 1.42 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, ಶೇ 1.30ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. 17 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 7 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬೆಂಗಳೂರಿನಲ್ಲಿ 432, ದಕ್ಷಿಣ ಕನ್ನಡದಲ್ಲಿ 218, ಮೈಸೂರಿನಲ್ಲಿ 207, ಹಾಸನದಲ್ಲಿ 173, ಹಾಗೂ ಚಿಕ್ಕಮಗಳೂರಿನಲ್ಲಿ 101 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.82 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 42 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 14 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ.

**ಸಂಕ್ಷಿಪ್ತ ಸುದ್ದಿ**

### ಬ್ರಿಟನ್: ಒಂದೇ ದಿನ 54,674 ಕೋವಿಡ್ ಪ್ರಕರಣ

**ಲಂಡನ್ (ರಾಯಿಟರ್ಸ್):** ಬ್ರಿಟನ್‌ನಲ್ಲಿ ಶನಿವಾರ ಒಂದೇ ದಿನ 54,674 ಕೋವಿಡ್ ಹೊಸ ಪ್ರಕರಣಗಳು ವರದಿಯಾಗಿವೆ.

ಆರು ತಿಂಗಳ ಅವಧಿಯಲ್ಲಿ ದಾಖಲಾದ ಗರಿಷ್ಠ ಪ್ರಕರಣಗಳ ಸಂಖ್ಯೆ ಇದಾಗಿದೆ. ಈ ಹಿಂದೆ ಒಂದೇ ದಿನ 51,870 ಹೊಸ ಪ್ರಕರಣಗಳು ವರದಿಯಾಗಿದ್ದವು.

ಬ್ರಿಟನ್‌ನಲ್ಲಿ ಕೋವಿಡ್‌ನಿಂದಾಗಿ 28 ದಿನಗಳ ಅವಧಿಯಲ್ಲಿ ಒಟ್ಟು 41 ಮಂದಿ ಸಾವಿಗೀಡಾಗಿದ್ದಾರೆ.

### ಇಂದು 'ಒಪೆಕ್+' ಸಭೆ ಸಾಧ್ಯತೆ

**ಮಾಸ್ಕೊ/ದುಬೈ (ರಾಯಿಟರ್ಸ್):** ಕಚ್ಚಾತೈಲ ಉತ್ಪಾದನೆಯ ಪ್ರಮಾಣದ ಕುರಿತು ನಿರ್ಧರಿಸಲು ಪೆಟ್ರೋಲಿಯಂ ಉತ್ಪನ್ನಗಳ ರಫ್ತುದಾರ ರಾಷ್ಟ್ರಗಳ ಒಕ್ಕೂಟ ಹಾಗೂ ಆ ಒಕ್ಕೂಟದ ಮಿತ್ರದೇಶಗಳ (ಒಪೆಕ್ + ) ಸಚಿವರು ಭಾನುವಾರ ಸಭೆ ಸೇರಲಿದ್ದಾರೆ ಎಂದು ಮೂಲಗಳು ಹೇಳಿವೆ.

ಕಚ್ಚಾ ತೈಲ ಉತ್ಪಾದನೆ ಹೆಚ್ಚಿಸುವ ವಿಚಾರವಾಗಿ ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಕಳೆದ ವಾರ ರಾಜಿ ಮಾಡಿಕೊಂಡ ನಂತರ ಈ ಬೆಳವಣಿಗೆ ನಡೆದಿದೆ ಎಂದು ತಿಳಿಸಿವೆ.

ಮಾರುಕಟ್ಟೆಗೆ ಹೆಚ್ಚಿನ ಕಚ್ಚಾತೈಲ ಸರಬರಾಜು ಮಾಡಲು ಮತ್ತು ಗಗನಕ್ಕೇರಿರುವ ಬೆಲೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸಭೆಯಲ್ಲಿ ಚರ್ಚೆ ನಡೆಯಲಿದೆ.

### ಎಚ್‌ಡಿಎಫ್‌ಸಿ ಬ್ಯಾಂಕ್ ಲಾಭ ಹೆಚ್ಚಳ

**ಮುಂಬೈ (ಪಿಟಿಐ):** ಖಾಸಗಿ ವಲಯದ ಎಚ್‌ಡಿಎಫ್‌ಸಿ ಬ್ಯಾಂಕ್‌ನ ನಿವ್ವಳ ಲಾಭವು ಜೂನ್ ತ್ರೈಮಾಸಿಕದಲ್ಲಿ ಶೇ 14.36ರಷ್ಟು ಹೆಚ್ಚಾಗಿದ್ದು ₹ 7,922 ಕೋಟಿಗಳಿಗೆ ತಲುಪಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ನಿವ್ವಳ ಲಾಭ ₹ 6,927 ಕೋಟಿಗಳಷ್ಟಿತ್ತು. ಈ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಆಗಿದ್ದ ₹ 8,433 ಕೋಟಿ ನಿವ್ವಳ ಲಾಭಕ್ಕೆ ಹೋಲಿಸಿದರೆ ಜೂನ್ ತ್ರೈಮಾಸಿಕದ ನಿವ್ವಳ ಲಾಭದಲ್ಲಿ ಇಳಿಕೆ ಕಂಡುಬಂದಿದೆ ಎಂದು ಪೇರುಪೇಟೆಗೆ ಮಾಹಿತಿ ನೀಡಿದೆ. ಒಟ್ಟಾರೆ ವರಮಾನ ₹ 34,453 ಕೋಟಿಗಳಿಂದ ₹ 36,771 ಕೋಟಿಗಳಿಗೆ ಏರಿಕೆ ಆಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 1.36 ರಿಂದ ಶೇ 1.47ಕ್ಕೆ ಏರಿಕೆ ಆಗಿದೆ ಎಂದು ವರದಿಯಲ್ಲಿ ತಿಳಿಸಿದೆ.

# ಅಫ್ಘನ್ ರಾಯಭಾರಿ ಮಗಳನ್ನು ಅಪಹರಿಸಿ, ಚಿತ್ರಹಿಂಸೆ: ಆರೋಪ

**ಕಾಬೂಲ್ (ರಾಯಿಟರ್ಸ್):** 'ಪಾಕಿಸ್ತಾನದಲ್ಲಿರುವ ಅಫ್ಘಾನಿಸ್ತಾನದ ರಾಯಭಾರಿಯ ಮಗಳನ್ನು ಅಪಹರಿಸಿ, ಚಿತ್ರಹಿಂಸೆ ನೀಡಲಾಗಿದೆ' ಎಂದು ಅಫ್ಘನ್ ಸರ್ಕಾರ ಶನಿವಾರ ಆರೋಪಿಸಿದೆ.

'ಇಸ್ಲಾಮಾಬಾದ್‌ನಲ್ಲಿ ಶುಕ್ರವಾರ ಈ ಘಟನೆ ನಡೆದಿದ್ದು, ಅಫ್ಘಾನಿಸ್ತಾನದ ರಾಯಭಾರಿಯ ಮಗಳಾದ ಸಿಲ್‌ಸಿಲಾ ಅಲಿಖಿಲ್ ಅವರು ಬಾಡಿಗೆ ವಾಹನದಲ್ಲಿ ತಮ್ಮ ಮನೆಗೆ ತೆರಳುತ್ತಿದ್ದ ಮಾರ್ಗಮಧ್ಯೆ ಅಪರಿಚಿತರಿಂದ ಕೆಲ ಗಂಟೆಗಳ ಕಾಲ ಅಪಹರಣಕ್ಕೊಳಗಾಗಿದ್ದಾರೆ. ನಂತರ ಸಿಲ್‌ಸಿಲಾ ಅವರಿಗೆ ತೀವ್ರತರನಾದ ಚಿತ್ರಹಿಂಸೆ ನೀಡಲಾಗಿದೆ' ಎಂದು ಅಫ್ಘನ್ ಸರ್ಕಾರ ತಿಳಿಸಿದೆ. ಆದರೆ, ಅಪಹರಣದ ವಿವರಗಳನ್ನು ಹಂಚಿಕೊಂಡಿಲ್ಲ.

'ಅಪಹರಣಕಾರರಿಂದ ಬಿಡುಗಡೆ ಹೊಂದಿದ ಬಳಿಕ ಸಿಲ್‌ಸಿಲಾ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಘಟನೆಯ ಬಗ್ಗೆ ತನಿಖೆ ನಡೆಸಬೇಕು ಹಾಗೂ ಅಫ್ಘಾನಿಸ್ತಾನದ ರಾಯಭಾರಿ ಕುಟುಂಬಕ್ಕೆ ರಕ್ಷಣೆ ನೀಡಬೇಕು' ಎಂದೂ ಅಫ್ಘನ್, ಪಾಕಿಸ್ತಾನಕ್ಕೆ ಒತ್ತಾಯಿಸಿದೆ.

'ಘಟನೆಯ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ರಾಯಭಾರಿ ಮತ್ತು ಅವರ ಕುಟುಂಬಕ್ಕೆ ಭದ್ರತೆಯನ್ನು ಬಿಗಿಗೊಳಿಸಲಾಗಿದೆ' ಎಂದು ಪಾಕಿಸ್ತಾನದ ವಿದೇಶಾಂಗ ಸಚಿವಾಲಯವು ತಿಳಿಸಿದೆ.

# ಓಲಾ ಎಲೆಕ್ಟ್ರಿಕ್ ಸ್ಕೂಟರ್: 24 ಗಂಟೆಗಳಲ್ಲಿ 1 ಲಕ್ಷ ಬುಕಿಂಗ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಓಲಾದ ವಿದ್ಯುತ್ ಚಾಲಿತ ಸ್ಕೂಟರ್ ಬುಕಿಂಗ್ ಆರಂಭವಾದ 24 ಗಂಟೆಗಳೊಳಗೆ 1 ಲಕ್ಷಕ್ಕೂ ಅಧಿಕ ಬುಕಿಂಗ್ ಆಗಿದೆ ಎಂದು ಓಲಾ ಕಂಪನಿಯು ಶನಿವಾರ ತಿಳಿಸಿದೆ.

ಇ-ಸ್ಕೂಟರ್‌ನ ಮುಂಗಡ ಕಾಯ್ದಿರಿಸುವಿಕೆಯು ಜುಲೈ 15ರಂದು ಆರಂಭವಾಗಿದ್ದು, ಮರುಪಾವತಿಸಬಹುದಾದ ₹ 499 ಠೇವಣಿ ಇರಿಸಿ ಸ್ಕೂಟರ್ ಕಾಯ್ದಿರಿಸಬಹುದಾಗಿದೆ.

'ನಮ್ಮ ಮೊದಲ ಎಲೆಕ್ಟ್ರಿಕ್ ವಾಹನಕ್ಕೆ ದೇಶದಾದ್ಯಂತ ಉತ್ತಮ ಸ್ಪಂದನೆ ದೊರೆತಿರುವುದು ನನಗೆ ಸಂತೋಷ ತಂದಿದೆ. ಈ ಅಭೂತಪೂರ್ವ ಬೇಡಿಕೆಯು, ಗ್ರಾಹಕರು ಎಲೆಕ್

ಪ್ರಜಾವಾಣಿ

# ಭಾನುವಾರದ ಪುರವಣಿ

ಭಾನುವಾರ, 18 ಜುಲೈ 2021



ಭೂಮಿಯ ಮೇಲಿನ ಅತಿದೊಡ್ಡ ಕ್ರೀಡಾ ಮೇಳ ಎನಿಸಿರುವ ಒಲಿಂಪಿಕ್ ಕೂಟ ಇನ್ನೇನು ಟೋಕಿಯೊದಲ್ಲಿ ಆರಂಭವಾಗಲಿದೆ. ಭ್ರಾತೃತ್ವದ ಸಂದೇಶ ಸಾರುವ ಈ ಕೂಟವು ಕೋವಿಡ್‌ನ ನೋವನ್ನು ಮರೆಸಲಿದೆ ಎಂದು ಪ್ರಪಂಚವೇ ಕಾದಿದೆ. 'ಇನ್ನಷ್ಟು ವೇಗ, ಇನ್ನಷ್ಟು ಎತ್ತರ, ಇನ್ನಷ್ಟು ಬಲಿಷ್ಠ' ಮಂತ್ರ ಜಪಿಸುವ ಅಥ್ಲೀಟ್‌ಗಳು ಯಾವ ಹೊಸ ಸಾಹಸ ಮೆರೆಯಬಹುದು ಎಂದು ಕ್ರೀಡಾಪ್ರೇಮಿಗಳೂ ಕಾದಿದ್ದಾರೆ...

ಪದಕಗಳ ಕನಸು ನನಸಾಗುವ ತಾಣ... ಒಲಿಂಪಿಕ್ ಕೂಟದ ಆತಿಥ್ಯಕ್ಕೆ ಸಜ್ಜಾದ ಟೋಕಿಯೊ ಕ್ರೀಡಾಂಗಣ

# ಮನುಕುಲದ ಹಬ್ಬ!

ವಿಜಯ್ ಲೋಕಪಲ್ಲಿ

ಬಾರೊನ್ ಪಿಯರ್ ಡಿ ಕೌಬರ್ಟಿನ್‌ನ ನೆನಪು ಈಗ ಜಗತ್ತಿನಿಂದ ಸಂಪೂರ್ಣ ಮಾಸಿ ಹೋಗಿದೆಯೇ? 1896ರಲ್ಲಿ ಆಧುನಿಕ ಒಲಿಂಪಿಕ್ ಕ್ರೀಡಾಕೂಟಕ್ಕೆ ಜನ್ಮ ನೀಡಿದ ವ್ಯಕ್ತಿ ಆತ. ಈ ದೊಡ್ಡ ಕ್ರೀಡಾ ಉತ್ಸವ ಹೇಗೆ ನಡೆಯಬೇಕು ಎನ್ನುವುದರ ಬಗೆಗಿನ ಆತನ ಆಗಿನ ದೃಷ್ಟಿಕೋನವು ಅದು ಸದ್ಯ ಪಡೆದಿರುವ ಸ್ವರೂಪಕ್ಕಿಂತಲೂ ಭಿನ್ನವಾಗಿದ್ದಿತೇನೋ. 'ಯಾವುದೇ ಬೆಲೆ ತೆತ್ತಾದರೂ ಗೆಲ್ಲು' ಎನ್ನುವುದು ಒಲಿಂಪಿಕ್ ಕ್ರೀಡೆಯ ಈಗಿನ ಮಂತ್ರ. ವಾಸ್ತವವಾಗಿ, ಈ ಜಿದ್ದು ನಾವು ಬದುಕುತ್ತಿರುವ ಸಮಾಜದ ಯಥಾವತ್ ಪ್ರತಿಬಿಂಬ. ಸಹಿಷ್ಣುತೆ ಹಾಗೂ ಸೌಹಾರ್ದದ ಮಹತ್ವವನ್ನು ಸಾರಲು, ಮಾನವೀಯತೆಯ ಸಂದೇಶವನ್ನು ಮೊಳಗಿಸಲು ಜಗತ್ತಿನ ಅತ್ಯಂತ ಶ್ರೇಷ್ಠ ಕ್ರೀಡಾಪಟುಗಳೆಲ್ಲ ಕ್ರೀಡಾಜಾತ್ರೆಯ ನೆಪದಲ್ಲಿ ಪ್ರತೀ ನಾಲ್ಕು ವರ್ಷಗಳಿಗೊಮ್ಮೆ ಒಂದೆಡೆ ಸೇರುತ್ತಾರೆ. ಒಂದೊಂದು ಒಲಿಂಪಿಕ್ ಕ್ರೀಡಾಕೂಟವೂ ಹೊಸ ಹೊಸ ಸಾಧನೆಗಳ ಹೊಳಪಿಗೆ ಕಾರಣವಾಗುತ್ತಾ, ಚಿನ್ನದ ಬಣ್ಣವನ್ನು ಮತ್ತಷ್ಟು ಮೈಗೆ ಮೆತ್ತಿಕೊಳ್ಳುತ್ತಾ ಝಗಮಗಿಸುತ್ತಲೇ ಹೊರಟಿದೆ.

ಒಲಿಂಪಿಕ್ ಕ್ರೀಡೆ ಹಲವು ಕಾರಣಗಳಿಂದ ಮಹತ್ವ ಪಡೆದಿದೆ. ಕ್ರೀಡೆಯ ಉತ್ಕೃಷ್ಟ ಸೇನಾನಿಗಳೆಲ್ಲ ಚಾಂಪಿಯನ್ನರಾಗಿ ಹೊರಹೊಮ್ಮಲು ನಡೆಸುವ ಈ ಆರೋಗ್ಯಕರ ಸಮರದ ಕಡೆಗೆ, ಬರೋಬ್ಬರಿ ಹದಿನೈದು ದಿನಗಳವರೆಗೆ, ಜಗತ್ತಿನ ಗಮನವೆಲ್ಲ ಕೇಂದ್ರೀಕೃತವಾಗಿರುತ್ತದೆ. ಹಾಗೆಂದ ಮಾತ್ರಕ್ಕೆ ಈ ಕೂಟವನ್ನು ಚಾಂಪಿಯನ್ನರ ಸಾಹಸಗಾಥೆಗಳ ತೊಟ್ಟಿಲು ಎಂದಷ್ಟೇ ಕರೆಯಬೇಕಿಲ್ಲ. ಸೋತ ಅಥ್ಲೀಟ್‌ಗಳ ಹೃದ್ಯ ಕಥೆಗಳೂ ಅಲ್ಲಿ ಹರಳುಗಟ್ಟಿರುತ್ತವೆ – ತೊಟ್ಟಿಲು ತೂಗುವಾಗ ಹಾಡುವ ಲಾಲಿ ಹಾಡುಗಳಂತೆ! ಕೂಟದ ಪ್ರತಿಯೊಂದು ಸ್ಪರ್ಧೆಯಲ್ಲೂ ಕ್ರೀಡಾಸ್ಫೂರ್ತಿಯ ಚಿಲುಮೆ ಪುಟಿದೇಳುತ್ತದೆ.

ಅಥೆನ್ಸ್‌ನಲ್ಲಿ 1896ರಲ್ಲಿ ನಡೆದ ಮೊದಲ ಕೂಟದಿಂದ ಇಂದಿನವರೆಗೆ ಒಲಿಂಪಿಕ್ಸ್‌ನಲ್ಲಿ ಗೆದ್ದವರು ಹಾಗೂ ಬಿದ್ದವರ ಕಥೆಗಳು ಮುಂದಿನ ಕೂಟದ 'ಕದನ ಕುತೂಹಲ'ವನ್ನು ಹೆಚ್ಚಿಸುತ್ತಲೇ ಹೋಗುತ್ತವೆ. ನಿಮಗೆ ಗೊತ್ತೆ? ಮೊತ್ತಮೊದಲ ಕೂಟದಲ್ಲಿ ಭಾಗವಹಿಸಿದ್ದು 13 ದೇಶಗಳ 250 ಕ್ರೀಡಾಪಟುಗಳು ಮಾತ್ರ. ಅಲ್ಲದೆ, ಅವರೆಲ್ಲರೂ ಪುರುಷ ಕ್ರೀಡಾಪಟುಗಳೇ ಆಗಿದ್ದರು. ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯನ್ನು (ಐಒಸಿ) ಕೌಬರ್ಟನ್ 1894ರಲ್ಲಿ ಸ್ಥಾಪಿಸಿದ. ಐಒಸಿ ಸ್ಥಾಪನೆಯಾದ ಎರಡು ವರ್ಷಗಳ ಬಳಿಕ ನಡೆದ ಕ್ರೀಡಾಕೂಟ ಅದಾಗಿತ್ತು. ಅಂದಿನಿಂದ ಇಂದಿನವರೆಗೆ ಕ್ರೀಡೆಯನ್ನು ವ್ಯವಸ್ಥಿತವಾಗಿ ಸಂಘಟಿಸುವ ಆಡಳಿತ ಮಂಡಳಿ ಎನಿಸಿದ ಐಒಸಿ, 'ಆರೋಗ್ಯಕರ ಜೀವನಕ್ಕಾಗಿ ಕ್ರೀಡೆ' ಎಂಬ ಸಂದೇಶವನ್ನು ಜಗತ್ತಿನಾದ್ಯಂತ ಹರಡುತ್ತಲೇ ಬಂದಿದೆ.



ಬೀಜಿಂಗ್ ಒಲಿಂಪಿಕ್ ಕೂಟದಲ್ಲಿ ಭಾರತದ ವೈಯಕ್ತಿಕ ಸ್ವರ್ಣ ಪದಕದ ಬರ ನೀಗಿಸಿದ ಅಭಿನವ್ ಬಿಂದ್ರಾ – ಪ್ರಜಾವಾಣಿ ಚಿತ್ರ: ಕೆ.ಎನ್. ಶಾಂತಕುಮಾರ್

ಮೊದಲ ಜಾಗತಿಕ ಸಮರದ ಕಾರಣಕ್ಕಾಗಿ 1916 ಹಾಗೂ ಎರಡನೇ ಜಾಗತಿಕ ಸಮರದ ಕಾರಣಕ್ಕಾಗಿ 1940 ಮತ್ತು 1944ರಲ್ಲಿ –ಹೀಗೆ ಒಟ್ಟು ಮೂರು ಬಾರಿ– ರದ್ದಾಗಿರುವುದನ್ನು ಹೊರತುಪಡಿಸಿದರೆ ಒಲಿಂಪಿಕ್ ಕೂಟ ಪ್ರತೀ ನಾಲ್ಕು ವರ್ಷಗಳಿಗೊಮ್ಮೆ ಅಬಾಧಿತವಾಗಿ ನಡೆಯುತ್ತಲೇ ಬಂದಿದೆ. ಆ್ಯಂಟ್‌ವರ್ಪ್‌ನಲ್ಲಿ ನಡೆದ 1920ರ ಕೂಟ ಹಾಗೂ ಪ್ಯಾರಿಸ್‌ನಲ್ಲಿ ನಡೆದ 1924ರ ಕೂಟ ಒಲಿಂಪಿಕ್ಸ್‌ಗೆ ಜಗತ್ತಿನ ಅತಿದೊಡ್ಡ ಕ್ರೀಡಾಜಾತ್ರೆ ಎನ್ನುವ ಗೌರವವನ್ನು ತಂದುಕೊಟ್ಟಿದ್ದು ಈಗ ಇತಿಹಾಸ. 1924ರಲ್ಲಿ ಮೂರು ಸಾವಿರ ಚಿಲ್ಲರೆ ಕ್ರೀಡಾಪಟುಗಳು ಭಾಗವಹಿಸಿದ್ದರು. 2004ರ ಅಥೆನ್ಸ್ ಕೂಟದ ವೇಳೆಗೆ ಆ ಸಂಖ್ಯೆ ಹನ್ನೊಂದು ಸಾವಿರಕ್ಕೆ ಜಿಗಿದಿತ್ತು. ಇಂತಹ ಭವ್ಯ ಚರಿತ್ರೆಯ ಒಲಿಂಪಿಕ್ ಕೂಟ ಕೋವಿಡ್ ಸಾಂಕ್ರಾಮಿಕದ ಈ ಕಾಲಘಟ್ಟದಲ್ಲಿ ನಿಗದಿಗಿಂತ ತುಸು ತಡವಾಗಿ ಮತ್ತೆ ಬಂದಿದೆ.

ರಿಯೊ ಡಿ ಜನೈರೊ ಕೂಟದಲ್ಲಿ ನಡೆಸಿದ ಸೆಣಸಾಟದಿಂದ ಗಮನಸೆಳೆದ ಪಿ.ವಿ.ಸಿಂಧು. ಈ ಬಾರಿಯೂ ದೇಶ ಅವರಿಂದ ಪದಕದ ನಿರೀಕ್ಷೆಯಲ್ಲಿದೆ – ಪ್ರಜಾವಾಣಿ ಚಿತ್ರ: ಕೆ.ಎನ್. ಶಾಂತಕುಮಾರ್

ಭ್ರಾತೃತ್ವ ಹಾಗೂ ಸ್ನೇಹದ ಹರವನ್ನು ವಿಸ್ತರಿಸುವುದೇ ಈ ಕ್ರೀಡಾಕೂಟದ ಮುಖ್ಯ ಉದ್ದೇಶವಾದರೂ ಅದಕ್ಕೆ ಪ್ರತಿಕೂಲವಾದ ಸನ್ನಿವೇಶಗಳು ಎದುರಾಗಿದ್ದನ್ನು ಮರೆಯುವಂತಿಲ್ಲ. ಜಗತ್ತಿನ ಮೇಲೆ ಹಿಡಿತ ಸಾಧಿಸುವ ದುರಾಸೆಯಿಂದ ನಡೆದ ಜಾಗತಿಕ ಸಮರಗಳ ಕಾರಣಕ್ಕಾಗಿ ಕ್ರೀಡಾಕೂಟವನ್ನೇ ರದ್ದುಗೊಳಿಸಬೇಕಾದ ಸಂದರ್ಭ ಎದುರಾದ ಆ ಕಹಿ ನೆನಪಂತೂ ಸದಾ ಕಾಡುತ್ತಿರುತ್ತದೆ. 2020ರಲ್ಲಿ ನಡೆಯಬೇಕಿದ್ದ ಟೋಕಿಯೊ ಕೂಟ, ಮನುಕುಲವನ್ನೇ ಕಾಡಿದ ಮಹಾಮಾರಿ ಕೋವಿಡ್‌ನಿಂದಾಗಿ ಮುಂದೂಡಲ್ಪಟ್ಟು ಈಗ ನಡೆಯುತ್ತಿದೆ.

ಜಗತ್ತಿನ ಹಲವೆಡೆ ನಡೆದ ರಾಜಕೀಯ ಬೆಳವಣಿಗೆಗಳಿಂದ ಒಲಿಂಪಿಕ್ ಕೂಟದ ಮೇಲೆ ಆಗಾಗ ಕಾರ್ಮೋಡ ದಟ್ಟೈಸುವಂತೆ ಆಗಿದ್ದು ಸುಳ್ಳಲ್ಲ. 1916ರಲ್ಲಿ ಮೊದಲ ಬಾರಿಗೆ ಕೂಟವೇ ರದ್ದಾದ ಘಟನೆಗೆ ಸಾಕ್ಷಿಯಾದ ಜಗತ್ತು, 1936ರ ಬರ್ಲಿನ್ ಕೂಟ ನಡೆಯುವ ಸಾಧ್ಯತೆಯೂ ಕಡಿಮೆ ಎನ್ನುವ ಭೀತಿಯನ್ನು ಅನುಭವಿಸಿತ್ತು. ನಾಜಿ ಆಡಳಿತದ ಜರ್ಮನಿಯನ್ನು ಸೌಹಾರ್ದದ, ಗೌರವದ ಆತಿಥೇಯ ಎಂದು ಒಪ್ಪಲು ಸಿದ್ಧವಿರದ ವಾತಾವರಣ ಆಗ ನಿರ್ಮಾಣವಾಗಿತ್ತು. ಅಮೆರಿಕದ ಯಹೂದಿ ಗುಂಪುಗಳಂತೂ ದೇಶದ ಅಥ್ಲೀಟ್‌ಗಳನ್ನು ಹಿಂದೆ ಕರೆಯಿಸುವಂತೆ ಅಲ್ಲಿನ ಸರ್ಕಾರದ ಮೇಲೆ ತೀವ್ರವಾಗಿ ಒತ್ತಡ ಹೇರಿದ್ದವು. ಅಮೆರಿಕದ ಒಲಿಂಪಿಕ್ ಸಮಿತಿಯ ಆಗಿನ ಅಧ್ಯಕ್ಷ ಅವೆರಿ ಬ್ರಂಡೇಜ್ ಅವರ ಭಾರಿ ಪ್ರಯತ್ನದಿಂದಾಗಿ ಆ ದೇಶ ಕೂಟವನ್ನು ಬಹಿಷ್ಕರಿಸಿ ಹೊರನಡೆಯುವ ಸಂದರ್ಭ ತಪ್ಪಿತು. ಅಬಾಧಿತವಾಗಿ ನಡೆದ ಬರ್ಲಿನ್ ಕೂಟದಲ್ಲಿ ಹಲವು ಹೊಳೆಯುವ ತಾರೆಗಳು ಉದಯಿಸಿದವು.

ಆಧುನಿಕ ಒಲಿಂಪಿಕ್ ಕ್ರೀಡೆಯ ಚರಿತ್ರೆಯಲ್ಲಿ ಬರ್ಲಿನ್ ಕೂಟವು ಅತ್ಯಂತ ವಿವಾದಾತ್ಮಕ ಕೂಟ ಎಂಬ ಹಣೆಪಟ್ಟಿಯನ್ನೂ ಅಂಟಿಸಿಕೊಂಡಿದೆ. ಆಗ ಜರ್ಮನಿಯ ಸರ್ವಾಧಿಕಾರಿಯಾಗಿದ್ದ ಅಡಾಲ್ಫ್ ಹಿಟ್ಲರ್‌ನ ಕರಿನೆರಳು ಈ ಕೂಟದುದ್ದಕ್ಕೂ ಹರಡಿತ್ತು. ಕ್ರೀಡಾಂಗಣದಲ್ಲಿ ಕೂಡ ವಿಜಯ ಪತಾಕೆ ಹಾರಿಸುವ ಮೂಲಕ ನಾಜಿಗಳು ಪ್ರಾಬಲ್ಯ ಮೆರೆಯಬೇಕು ಎಂಬ ಆತನ ಹಪಹಪಿ ಎದ್ದು ಕಂಡಿತ್ತು. ಈ ಕೂಟದ ಸಂಘಟನಾ ಸಮಿತಿಯ ಪದಾಧಿಕಾರಿಗಳ ಮೇಲೆ ಭ್ರಷ್ಟಾಚಾರದ ಆರೋಪಗಳು ಜೋರಾಗಿಯೇ ಕೇಳಿಬಂದಿದ್ದವು. ರಾಜಕಾರಣಿಗಳ ಅತಿಯಾದ ಮೂಗು ತೂರಿಸುವ ಪ್ರವೃತ್ತಿ ಕುರಿತೂ ದೂರುಗಳು ಪ್ರತಿಧ್ವನಿಸಿದ್ದವು. ಹಿಟ್ಲರ್ ಹಿಡಿತದ ಕುರಿತು ಏನೇ ಮಾತುಗಳಿರಲಿ, ಕೂಟದಲ್ಲಿ ನಿಜಕ್ಕೂ ಫಳಫಳ ಹೊಳೆದಿದ್ದು ಜೆಸ್ಸಿ ಓವೆನ್ಸ್ ಎಂಬ ಅಮೆರಿಕದ ಕಪ್ಪು ಜನಾಂಗೀಯ ಕ್ರೀಡಾಪಟು. ತನ್ನ ಮಾಂತ್ರಿಕ ಓಟದ ಮೂಲಕ ಕ್ರೀಡಾಕೂಟವನ್ನು 'ಗೆಲುವಿನ ಗೆರೆ'ವರೆಗೆ ಮುನ್ನಡೆಸಿದವನು ಆತ!

ನಾಲ್ಕು ಸ್ವರ್ಣ ಪದಕಗಳನ್ನು ಗೆದ್ದ ಓವೆನ್ಸ್‌ನ ಸಾಧನೆ ಅಸಾಧಾರಣವಾದುದು. ಅತಿರೇಕಗಳಿಗೆ ಹೆಸರಾಗಿದ್ದ ಹಿಟ್ಲರ್‌ನನ್ನು ಆತನ ಜನರ ಎದುರೇ ಮುಜುಗರಕ್ಕೆ ಈಡುಮಾಡಿದ ಸಾಧಕ ಎಂದು ಇಡೀ ಜಗತ್ತು ಓವೆನ್ಸ್‌ನನ್ನು ಕೊಂಡಾಡಿತು. ಬರ್ಲಿನ್‌ನಲ್ಲಿ ಕೊನೆಗೆ ಗೆದ್ದುದು ಕ್ರೀಡೆಯೇ. ಒಲಿಂಪಿಕ್ ಚಳವಳಿಯ ಶಾಂತಿ ಹಾಗೂ ಭ್ರಾತೃತ್ವದ ಸಂದೇಶವನ್ನು ಜಗತ್ತಿಗೆಲ್ಲ ಸಾರುವ ಪ್ರವಾದಿಯಾಗಿ ಓವೆನ್ಸ್ ಗೋಚರಿಸಿದ. ಲಾಂಗ್ ಜಂಪ್ ಸ್ಪರ್ಧೆ ಮುಗಿದ ಮೇಲೆ ಓವೆನ್ಸ್, ಜರ್ಮನಿಯ ತನ್ನ ಸಹಸ್ಪರ್ಧಿ ಲುಜ್ ಲಾಂಗ್‌ನ ಭುಜದ ಮೇಲೆ ಕೈಹಾಕಿ ಜತೆಯಲ್ಲಿ ಹೆಜ್ಜೆಹಾಕಿದ್ದು ಬರ್ಲಿನ್ ಕೂಟದ ಅಮರ ಕ್ಷಣವಾಗಿ ಚರಿತ್ರೆಯಲ್ಲಿ ದಾಖಲಾಯಿತು.

ಭಾರತೀಯ ಅಭಿಮಾನಿಗಳಿಗೂ ಬರ್ಲಿನ್ ಸ್ಮರಣೀಯ ಕ್ಷಣಗಳನ್ನು ಮೊಗೆದುಕೊಟ್ಟಿತು. ಭಾರತ ಹಾಕಿ ತಂಡ ತನ್ನ ಸತತ ಮೂರನೇ ಒಲಿಂಪಿಕ್ ಬಂಗಾರದ ಪದಕವನ್ನು ಹೆಕ್ಕಿ ತೆಗೆದಿದ್ದು ಇದೇ ಕೂಟದಲ್ಲಿ. ಹಾಕಿ ಮಾಂತ್ರಿಕ ಧ್ಯಾನ್‌ಚಂದ್ ನೇತೃತ್ವದ ತಂಡ ಕೂಟ ಶುರುವಾಗುವ ಮುನ್ನ ಜರ್ಮನಿ ವಿರುದ್ಧದ ಸ್ನೇಹಪರ ಪಂದ್ಯದಲ್ಲಿ 1–4 ಗೋಲುಗಳಿಂದ ಪರಾಭವಗೊಂಡಿತ್ತು. ಆದರೆ, ಭಾರತೀಯ ಹಾಕಿ ತಾರೆಗಳು ತಮ್ಮ ಭವ್ಯ ಪರಂಪರೆಯನ್ನು ಮತ್ತೆ ಜಗತ್ತಿನ ಮುಂದೆ ತೆರೆದು ತೋರಿದ್ದರಲ್ಲದೆ ಹಿಟ್ಲರ್‌ನ ಗಮನವನ್ನೂ ಸೆಳೆದಿದ್ದರು. ಒಲಿಂಪಿಕ್ಸ್ ಹಾಕಿ ಫೈನಲ್ ಪಂದ್ಯದಲ್ಲಿ ಭಾರತ ತಂಡ 8–1ರಿಂದ ಜರ್ಮನಿ ತಂಡವನ್ನು ಪರಾಭವಗೊಳಿಸುವ ಮೂಲಕ ತನ್ನ ಪ್ರಾಬಲ್ಯವನ್ನು ತೋರಿಸಿತ್ತು.

11ನೇ ಪುಟಕ್ಕೆ...

# ಸ್ಪೇಸ್ ಟೂರಿಸಂ

ಬಾಹ್ಯಾಕಾಶದಲ್ಲಿ... ಬಾನಗಾಡಿಯಲ್ಲಿ



ವರ್ಜಿನ್ ಗೆಲಾಕ್ಟಿಕ್ ಕಂಪನಿಯಿಂದ ಪ್ರವಾಸಿಗರನ್ನು ಬಾಹ್ಯಾಕಾಶಕ್ಕೆ ಕರೆದೊಯ್ದ ಬಾನಗಾಡಿ

ಬಾನಿನಲ್ಲಿ ತೇಲಾಡಿ ನೀಲಿ ಭೂಮಿಯನ್ನು ನೋಡಿ, ಕಿರು ಗುರುತ್ವದ, ಕೃತಕ ಉಸಿರಾಟ ವ್ಯವಸ್ಥೆಯಲ್ಲಿ ಓಲಾಡಿ ಬರುವ ಪ್ರವಾಸ ಅದು.

ಸರೋಜಾ ಪ್ರಕಾಶ

**ಇತ್ತ ನಮ್ಮಲ್ಲಿ** ಪ್ರತೀಕಾರ ಪ್ರವಾಸೋದ್ಯಮ ಉಕ್ಕೇರಿ ಹರಿದಂತೆ ಅತ್ತ ಪಶ್ಚಿಮದಲ್ಲಿ ಪ್ರತೀಕ್ಷೆಯಲ್ಲಿದ್ದ ಬಾಹ್ಯಾಕಾಶ ಪ್ರವಾಸೋದ್ಯಮವೂ (ಸ್ಪೇಸ್ ಟೂರಿಸಂ) ಗರಿ ಬಿಚ್ಚಿದೆ. ಹೆಸರೇ ಸೂಚಿಸುವ ಹಾಗೆ ಬಾಹ್ಯಾಕಾಶಕ್ಕೆ ಪ್ರವಾಸ ಹೋಗಬಯಸುವವರಿಗಾಗಿ ಮಾಡಿದ ವ್ಯವಸ್ಥೆ ಇದು. ವರ್ಜಿನ್ ಗೆಲಾಕ್ಟಿಕ್ ಕಂಪನಿಯ ಸ್ಥಾಪಕ ರಿಚರ್ಡ್ ಬ್ರಾನ್ಸನ್ ಕಳೆದ ವಾರ ಸ್ವತಃ ಬಾಹ್ಯಾಕಾಶದಲ್ಲಿ ಇಣುಕಿ ಬಂದರೆ, ಬ್ಲೂ ಒರಿಜಿನ್ ಕಂಪನಿಯ ಮಾಲೀಕ ಜೆಫ್ ಬೆಜೋಸ್, 'ಮುಂದಿನ ವಾರ ಬಾಹ್ಯಾಕಾಶ ಪ್ರವೇಶಿಸಿ ಮರಳುವೆ' ಎಂದು ಘೋಷಿಸಿದ್ದಾರೆ. ಖಾಸಗಿ ಕಂಪನಿಗಳು ವಿಮಾನದ ಟಿಕೆಟ್‌ಗಳಂತೆ ಬಾನ ಪ್ರವಾಸದ ಟಿಕೆಟ್‌ಗಳನ್ನು ಮಾರುವ ದಿನಗಳು ದೂರವಿಲ್ಲ.

ಬಾನಿನಲ್ಲಿ ತೇಲಾಡಿ ನೀಲಿ ಭೂಮಿಯನ್ನು ನೋಡಿ, ಕಿರು ಗುರುತ್ವದ, ಕೃತಕ ಉಸಿರಾಟ ವ್ಯವಸ್ಥೆಯಲ್ಲಿ ಓಲಾಡಿ ಬರುವ ಪ್ರವಾಸ ಅದು. ಹೊತ್ತೊಯ್ಯುವ ವಾಹನ ಬಹಳಷ್ಟು ಸವಾಲುಗಳನ್ನು ಎದುರಿಸಿ, ಅಪಾರ ಹಣವನ್ನೂ ವ್ಯಯಿಸಿ ತಯಾರಾಗಬೇಕಾದ ಕಾರಣ ಅದು ಸಹಜವಾಗಿಯೇ ಸದ್ಯಕ್ಕೆ ಸಿರಿವಂತರಲ್ಲಿ ಸಿರಿವಂತರಾಗಿರುವವರ ಸೊತ್ತಾಗಿದೆ. ರಿಚರ್ಡ್ ಬ್ರಾನ್ಸನ್, ಜೆಫ್ ಬೆಜೋಸ್ ಹಾಗೂ ಈಗಾಗಲೇ ಹೆಸರು ಮಾಡಿರುವ ಖಾಸಗಿ ಕಂಪನಿ ಸ್ಪೇಸ್ ಎಕ್ಸ್‌ನ ಎಲಾನ್ ಮಸ್ಕ್ ಈ ಮೂವರೂ ಕೋಟ್ಯಧಿಪತಿಗಳೇ. ಮೂರು ದಿನಗಳ ತರಬೇತಿ ಪಡೆದು ಹಾರಹೊರಟಿರುವ, ಈಗಾಗಲೇ ಆರುನೂರು ಸೀಟುಗಳು ಭರ್ತಿಯಾಗಿರುವ ವರ್ಜಿನ್ ಗೆಲಾಕ್ಟಿಕ್ ಕಂಪನಿಯ 90 ನಿಮಿಷ ಪಯಣದ ಮುಂದಿನ ಬಾನಗಾಡಿಗಳ ಒಂದೊಂದೂ ಸೀಟಿನ ದರ ಎಷ್ಟು ಗೊತ್ತೆ? ಬರೋಬ್ಬರಿ ಎರಡೂವರೆ ಲಕ್ಷ ಡಾಲರ್ – ಅಂದರೆ ಹತ್ತಿರ ಹತ್ತಿರ ಎರಡು ಕೋಟಿ ರೂಪಾಯಿ!

ಭೂಮಿಯ ಆಚೆ 300 ಕಿ.ಮೀ. ಆಸುಪಾಸಿನಲ್ಲಿ ಹಾರಾಟ ನಡೆಸಿರುವ ನೌಕೆ 'ಅಂತರರಾಷ್ಟ್ರೀಯ ಬಾಹ್ಯಾಕಾಶ ಅಟ್ಟಣಿಗೆ' (ಐಎಸ್‌ಎಸ್) ಪ್ರವಾಸ ಮತ್ತು ಅಧ್ಯಯನಕ್ಕೆ ನೆಚ್ಚಿನ ತಾಣವಾಗಿದೆ. 2001ರಲ್ಲಿ ಅಮೆರಿಕದ ಡೆನಿಸ್ ಟಿಟೊ ಎನ್ನುವ ವ್ಯಾಪಾರಿ ರಷ್ಯಾದ ಮನವೊಲಿಸಿ ತಾನೇ ಹಣ ಹಾಕಿ ಸೋಯುಝ್ ನೌಕೆಯಲ್ಲಿ ಕುಳಿತು ಐಎಸ್‌ಎಸ್‌ಅನ್ನು ತಲುಪಿ ಅಲ್ಲಿ ಆರು ದಿನ ತಂಗಿದ್ದು, ಬಳಿಕ ಮರಳಿದ್ದ. ಬಾಹ್ಯಾಕಾಶಕ್ಕೆ ಪಯಣಿಸಿದ ಮೊದಲ ಪ್ರವಾಸಿಗ ಆತ.

ಭೂಮಿಯ ಸುತ್ತಲ ಸುಮಾರು ನೂರು ಕಿ.ಮೀ. ಎತ್ತರದ ಬಾನ ಪರಿಧಿಯ ಆಚೆಗಿನ ವಿಶ್ವವನ್ನು ಸಾಮಾನ್ಯವಾಗಿ ವಿಜ್ಞಾನಿಗಳು ಬಾಹ್ಯಾಕಾಶ ಎನ್ನುವುದಾದರೂ 80 ಕಿ.ಮೀ. ವೃತ್ತದ ಆಚೆ ಭೂಮಿಯ ಗುರುತ್ವದ ಪ್ರಭಾವವೂ, ವಾತಾವರಣದ ವಾಯು ಪ್ರಮಾಣವೂ ಗಣನೀಯವಾಗಿ ಕಡಿಮೆ ಆಗುವುದರಿಂದ ಅಲ್ಲಿಂದಲೇ ಬಾಹ್ಯಾಕಾಶದ ಬೌಂಡರಿ ಎನ್ನೋಣ ಎಂದು ಅಮೆರಿಕದ ನಾಸಾ ಹಾಗೂ ಇತರ ಕೆಲವು ಸಂಸ್ಥೆಗಳ ಖಗೋಳ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

12ನೇ ಪುಟಕ್ಕೆ...

ಬಾಹ್ಯಾಕಾಶ ಪ್ರವಾಸ ಮುಗಿಸಿ ಬಂದವರ ಸಂಭ್ರಮ... ರಿಚರ್ಡ್ ಬ್ರಾನ್ಸನ್ ಹೆಗಲ ಮೇಲೆ ಭಾರತ ಮೂಲದ ಶಿರೀಷಾ ಬಂಡ್ಲ

# ಸರ್ ಪೇ ಲಾಲ್ ಟೋಪಿ ಪಾರ್ಸಿ

ಹೊಶಾಂಗ್ ಮರ್ಚೆಂಟ್

ಕನ್ನಡಕ್ಕೆ: ಶಶಿಕಾಂತ ಕೌಡೂರು

ಗೇ ಎಂದು ಬಹಿರಂಗವಾಗಿ ಘೋಷಿಸಿಕೊಂಡ ಭಾರತದ ಮೊದಲ ಕವಿ ಹೊಶಾಂಗ್ ಮರ್ಚೆಂಟ್. ಅವರ ಬರಹಗಳ ಸಂಗ್ರಹ 'ರೆಬೆಲ್ ಏಂಜೆಲ್'ನ ಒಂದು ಅನುವಾದಿತ ಬರಹ ಇದು. ಅಕ್ಷಯ ಕೆ. ರಥ್ ಅವರು ಸಂಪಾದಿಸಿದ ಈ ಸಂಗ್ರಹವನ್ನು ಧೌಲಿ ಬುಕ್ಸ್ ಇತ್ತೀಚೆಗಷ್ಟೆ ಹೊರತಂದಿದೆ. ಮೂಲತಃ ಕವಿಯಾದ ಮರ್ಚೆಂಟ್ ಅವರ ಗದ್ಯವೂ ಕಾವ್ಯಾತ್ಮಕ ಶೈಲಿಯಲ್ಲಿದೆ.

**ಭಾರತದ ಐವತ್ತನೇ** ವರ್ಷದ ಸಂದರ್ಭದಲ್ಲಿ ಸಲಿಂಗಿ –ಗೇ– ಮಂದಿಯ ಕೊಡುಗೆಯನ್ನು ಪರಿಗಣಿಸಲಿಲ್ಲವೆಂಬ ನೋವು ನನಗಿದೆ.

ನಾನೊಬ್ಬ ಭಾರತೀಯ ಹೌದೇ?! ಮಧ್ಯವಯಸ್ಸಿನ, ಬಾಂಬೆಯಲ್ಲಿ ಹುಟ್ಟಿದ, ಅಮೆರಿಕದಿಂದ ಹಿಂದಿರುಗಿದ, ಹೈದರಾಬಾದ್‌ನಲ್ಲಿ ಇಂಗ್ಲಿಷ್ ಕಲಿಸುತ್ತಿರುವ, ಒಬ್ಬ ಪಾರ್ಸಿ, ಗೇ ತಾನೇ? ಹಾಗಂತ ನಾನು ಇತ್ತೀಚೆಗೆ ಆಸ್ಟ್ರೇಲಿಯಾದಲ್ಲಿದ್ದೆ. ಯಾಕೋ ಏನೋ, ಅಲ್ಲಿ ನನಗೆ ಒಂದೂ ಸರಿಹೋಗುವಂತೆ ಕಾಣಲಿಲ್ಲ. ಯಾರೂ ಆ ಜಾಗಕ್ಕೆ ಸೇರಿದವರಂತೆ ತೋರುತ್ತಿರಲಿಲ್ಲ – ಇಟಲಿ, ಸಿರಿಯಾ, ಗ್ರೀಸ್, ಬ್ರಿಟನ್, ಅಮೆರಿಕ – ಈ ಎಲ್ಲ ದೇಶಗಳಿಂದ ಆಮದಾದವರಂತೆ ಕಾಣುತ್ತಿದ್ದರು ಅಲ್ಲಿನ ಜನ. ಮೈಲುಗಟ್ಟಲೆ ಶಾಪಿಂಗ್ ಮಾಲ್‌ಗಳು, ಆದರೆ ಹಣ?! ಮೈಲುಗಟ್ಟಲೆ ಅಗಲಗಲ ರಸ್ತೆಗಳು, ಆದರೆ ಟ್ರಾಫಿಕ್?! ಸ್ಮಶಾನ ಮೌನ! ಪರಿಣಾಮ: ದ್ವಿತೀಯ ದರ್ಜೆಯ ಅಮೆರಿಕ, ಪ್ರಪಂಚದ ಎರಡನೇ ಉತ್ತಮ ದೇಶ!

ನನ್ನ ಭಾರತದ ಮನೆಯಲ್ಲಾದರೆ? ಹೌದು, ನಾನು ನಿರಾಳ! ನಾನು ಕೊಸರಾಡುತ್ತೇನೆ; ನುಗ್ಗುತ್

ಹೀಥೋರ್ನ್ ಹಳ್ಳಿಯನ್ನು ಯಾವುದೇ ವಾಹನಗಳ ಮೂಲಕ ತಲುಪಲಾಗುವುದಿಲ್ಲ. ನೋಡಲು ನಕ್ಷತ್ರಾಕಾರದಲ್ಲಿರುವ ಈ ಊರು ನೀರಿನ ಕಾಲುವೆಗಳಿಂದ ಆವೃತವಾಗಿದೆ. ಇಟಲಿಯ ವೆನಿಸ್‌ನಲ್ಲಿರುವಂತೆ ಹೀಥೋರ್ನ್‌ನಲ್ಲೂ ಕಾಲುವೆಗಳು ಇರುವುದರಿಂದ ಈ ಹಳ್ಳಿಗೆ 'ವೆನಿಸ್ ಆಫ್ ನೆದರ್ಲ್ಯಾಂಡ್ಸ್' ಎಂಬ ಹೆಸರು ಬಂದಿದೆ. ಅಬ್ಬಾ! ಈ ಊರಿನ ಪ್ರವಾಸದ ಅನುಭವ ಅದೆಂತಹ ವೈಶಿಷ್ಟ್ಯಪೂರ್ಣ!

ನಕ್ಷತ್ರಾಕಾರದಲ್ಲಿರುವ ಹೀಥೋರ್ನ್ ಪ್ರದೇಶ

ಇದು ಚಲನಚಿತ್ರಕ್ಕಾಗಿ ಹಾಕಿದ ಸೆಟ್ ಅಲ್ಲ, ಮನ ತಣಿಸುವ ಹಳ್ಳಿಯ ಸೊಬಗು

# ನೆದರ್ಲೆಂಡ್ಸ್‌ನ ವೆನಿಸ್ ಹೀಥೋರ್ನ್

ರಾಜೇಂದ್ರ ಎನ್. ಆಚಾರ್ಯ



ಈ ಊರಿನಲ್ಲಿ ಕಾಲುವೆಗಳೇ ಹೆದ್ದಾರಿ!

ದೋಣಿಯಲ್ಲಿ ಕುಳಿತು ಊರು ಸುತ್ತುವ ಮೋಜು

**ಅದೊಂದು ಪುಟ್ಟ ಹಳ್ಳಿ.** ಅಲ್ಲಿನ ಜನಸಂಖ್ಯೆ ಸುಮಾರು ಮೂರು ಸಾವಿರ. ಜನಪ್ರಿಯ ಡಚ್ ಪ್ರವಾಸಿ ತಾಣವಾಗಿರುವ ಆ ಪುಟ್ಟಹಳ್ಳಿಯಲ್ಲಿ ಯಾವುದೇ ವಾಹನಗಳ ಸದ್ದಿಲ್ಲ. ಕಿವಿಗೆ ಇಂಪೆನಿಸುವುದು ದೋಣಿಗಳನ್ನು ಹುಟ್ಟುಹಾಕುವಾಗ ಕೇಳಿ ಬರುವ ನೀರಿನ ಶಬ್ದ, ಕಾಲುವೆಗಳಲ್ಲಿ ವಿಹರಿಸುತ್ತಿರುವ ಬಾತುಕೋಳಿಗಳ ಕಲರವ ಮಾತ್ರ. ಈ ಹಳ್ಳಿಯ ಸೌಂದರ್ಯವನ್ನು ಕಣ್ತುಂಬಿಸಿಕೊಳ್ಳಲು ಪ್ರಪಂಚದ ಮೂಲೆ ಮೂಲೆಗಳಿಂದ ಪ್ರವಾಸಿಗರ ದಂಡು ಹರಿದು ಬರುತ್ತದೆ.

ಈಶಾನ್ಯ ಡಚ್ ಪ್ರಾಂತ್ಯ 'ಓವೆರೈಸೆಲ್'ನ 'ಸ್ವೀನ್‌ವಿಕ್'ನಿಂದ 5 ಕಿ.ಮೀ. ದೂರದಲ್ಲಿರುವ 'ಹೀಥೋರ್ನ್' ತನ್ನದೇ ಆದ ವೈಶಿಷ್ಟ್ಯಗಳಿಂದ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ನೋಡಲು ನಕ್ಷತ್ರಾಕಾರದಲ್ಲಿರುವ 'ಹೀಥೋರ್ನ್' ಪ್ರದೇಶ, ನೀರಿನ ಕಾಲುವೆಗಳಿಂದ ಆವೃತವಾಗಿದೆ. ಇಟಲಿಯ ವೆನಿಸ್‌ನಲ್ಲಿರುವಂತೆ ಹೀಥೋರ್ನ್‌ನಲ್ಲೂ ಕೆನಾಲ್‌ಗಳು ಇರುವುದರಿಂದ ಈ ಹಳ್ಳಿಯನ್ನು 'ವೆನಿಸ್ ಆಫ್ ನೆದರ್ಲೆಂಡ್ಸ್' ಎಂದು ಕರೆಯುತ್ತಾರೆ.

ಪ್ರಾರಂಭದಲ್ಲಿ ಈ ಹಳ್ಳಿಯೊಂದು ದ್ವೀಪವಾಗಿದ್ದು, ಕಾಲುದಾರಿಯನ್ನು ಮಾತ್ರ ಹೊಂದಿತ್ತು. ಜನರು ಹುಲ್ಲಿನ ಮೇಲ್ಛಾವಣಿಯ ಮನೆಗಳನ್ನು ನಿರ್ಮಿಸಿ ವಾಸಿಸತೊಡಗಿದರು. ಸರೋವರದಲ್ಲಿ ಬೆಳೆಯುತ್ತಿದ್ದ ಜೊಂಡುಹುಲ್ಲು ಹಾಗೂ ಪಾಚಿಯ ಕೃಷಿಯನ್ನೇ ಇಲ್ಲಿಯ ಜನರು ಮುಖ್ಯ ಕಸುಬನ್ನಾಗಿಸಿಕೊಂಡಿದ್ದರು. ದೋಣಿಗಳ ಮೂಲಕವೇ ಹಳ್ಳಿಯನ್ನು ಸಂಪರ್ಕಿಸಬೇಕಾಗಿತ್ತು. 1958ರಲ್ಲಿ ನಡೆದ 'ಫ್ಯಾನ್ ಫೇರ್' ಆಂಗ್ಲ ಚಲನಚಿತ್ರದ ಚಿತ್ರೀಕರಣದ ನಂತರ ಈ ಹಳ್ಳಿಯ ಅದೃಷ್ಟ ಬದಲಾಯಿತು. ಸಿನಿಮಾ ಬಿಡುಗಡೆಯಾದ ನಂತರ ಚಿತ್ರವನ್ನು ನೋಡಿದ ಪ್ರೇಕ್ಷಕರು ಹೀಥೋರ್ನ್ ಹಳ್ಳಿಯ ಸೊಬಗಿಗೆ ಮಾರುಹೋಗಿ ವಿದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸ ಬರತೊಡಗಿದರು.

ಹಳ್ಳಿಯನ್ನು ಮತ್ತಷ್ಟು ಆಕರ್ಷಣೀಯವಾಗಿಸಿ, ಪ್ರವಾಸೋದ್ಯಮವನ್ನು ಉತ್ತಮಗೊಳಿಸಲು ಜೊಂಡು ಮತ್ತು ಪಾಚಿಯನ್ನು ತೆಗೆದು ಕಾಲುವೆಗಳನ್ನು ಸ್ವಚ್ಛವಾಗಿಸಿ, ಮರದ ಹಲಗೆಗಳಿಂದ ಸುಂದರವಾದ ಸೇತುವೆಗಳನ್ನು ನಿರ್ಮಿಸಿ ಹೂವಿನ ಕುಂಡಗಳನ್ನು ತೂಗುಬಿಡಲಾಯಿತು. ಇದರಿಂದಾಗಿ ಹೀಥೋರ್ನ್ ಸ್ವರೂಪವೇ ಬದಲಾಗಿ ಹಿಂದಿಗಿಂತಲೂ ಹೆಚ್ಚು ಆಕರ್ಷಣೀಯವಾಗಿ ಕಾಣತೊಡಗಿತು. 1973ರವರೆಗೂ ಪ್ರತ್ಯೇಕ ಪುರಸಭೆಯಾಗಿದ್ದ ಹೀಥೋರ್ನ್, 2001ರಲ್ಲಿ 'ಸ್ವೀನ್‌ವಿಕ್'ನೊಂದಿಗೆ ವಿಲೀನಗೊಂಡಿತು.

ಹೀಥೋರ್ನ್ ಹಳ್ಳಿಯನ್ನು ಕಾರು ಅಥವಾ ಇತರ ಯಾವುದೇ ವಾಹನಗಳ ಮೂಲಕ ತಲುಪಲಾಗುವುದಿಲ್ಲ. ವಾಹನಗಳನ್ನು ದೂರದಲ್ಲಿರುವ ಪಾರ್ಕಿಂಗ್ ಪ್ರದೇಶದಲ್ಲಿ ನಿಲ್ಲಿಸಬಹುದು. ಪಾರ್ಕಿಂಗ್‌ಗಾಗಿ ಶುಲ್ಕ ಪಾವತಿಸಬೇಕಾಗಿಲ್ಲ. ಪಾರ್ಕಿಂಗ್ ಪ್ರದೇಶದಿಂದ ಕಾಲುದಾರಿಯಲ್ಲಿ ನಡೆದುಕೊಂಡು ಬಂದು ದೋಣಿಯ ಮೂಲಕ ಹಳ್ಳಿಯನ್ನು ಪ್ರವೇಶಿಸಬೇಕು. ನಂತರ ಕಾಲ್ನಡಿಗೆಯ ಮೂಲಕ ಅಥವಾ ಸೈಕ್ಲಿಂಗ್ ಮಾರ್ಗದಲ್ಲಿ ಸುತ್ತುತ್ತಾ ಇಡೀ ಊರನ್ನು ವೀಕ್ಷಿಸಬಹುದು. ಇಲ್ಲಿ ಸುತ್ತಾಡುತ್ತಿರುವಾಗ ಯಾವುದೋ ಚಲನಚಿತ್ರಕ್ಕಾಗಿ ನಿರ್ಮಿಸಲಾಗಿರುವ ಸೆಟ್‌ನಲ್ಲಿ ಸುತ್ತಾಡುತ್ತಿರುವಂತೆ ಭಾಸವಾಗುತ್ತದೆ. ಕಾಲುವೆಗಳ ಪಕ್ಕದಲ್ಲಿರುವ ರೆಸ್ಟೊರೆಂಟ್‌ಗಳಲ್ಲಿ ಕುಳಿತು ತಿಂಡಿ ತಿನ್ನುತ್ತಾ, ಕಾಫಿ ಹೀರುತ್ತಾ ಹಳ್ಳಿಯ ಸೊಬಗನ್ನು ಸವಿಯಬಹುದು. ವಿಶಾಲವಾದ ಹುಲ್ಲುಹಾಸಿನ ಮೇಲೆ ಯಾವುದೇ ನಿರ್ಬಂಧವಿಲ್ಲದೆ ಕುಳಿತು ವಿಶ್ರಮಿಸಬಹುದು. ಹಳ್ಳಿಯ ಬಹುತೇಕ ಮನೆಗಳಿಗೆ ಸಂಪರ್ಕವೇರ್ಪಡಿಸುವ ನೀರಿನ ಕಾಲುವೆಗಳಲ್ಲಿ ಪುಟ್ಟ ದೋಣಿಗಳ ಮೂಲಕ ಚಲಿಸುತ್ತಾ, ಊರಿನ ಸೌಂದರ್ಯವನ್ನು ಸವಿಯಬಹುದು.

ಪ್ರವಾಸ

ದೋಣಿಯ ಮೂಲಕ ಸಾಗುವಾಗ ಕಾಲುವೆಗಳಲ್ಲಿ ವಿಹರಿಸುತ್ತಿರುವ ಬಾತುಕೋಳಿ, ಹಂಸಗಳು ಮನಸ್ಸಿಗೆ ಮುದ ನೀಡುತ್ತವೆ. 18-19ನೇ ಶತಮಾನದಲ್ಲಿ ನಿರ್ಮಿಸಲಾದ ಹುಲ್ಲಿನ ಮೇಲ್ಛಾವಣಿಯ ಮನೆಗಳು, ಅವುಗಳ ಮುಂದೆ ಒಪ್ಪ ಓರಣವಾಗಿ ಜೋಡಿಸಿರುವ ಅರಳಿ ನಿಂತಿರುವ ಹೂಗಳಿರುವ ಹೂವಿನ ಕುಂಡಗಳು ಕಣ್ಮನ ಸೆಳೆಯುತ್ತವೆ. ಸದಾಕಾಲ ಹೂಕುಂಡಗಳಿಂದ ಅಲಂಕೃತಗೊಂಡಿರುವ ಮರದ ಹಲಗೆಗಳಿಂದ ನಿರ್ಮಿಸಲಾಗಿರುವ 176ಕ್ಕಿಂತಲೂ ಅಧಿಕ ಸೇತುವೆಗಳು ಕಣ್ಣುಗಳಿಗೆ ಹಬ್ಬವನ್ನುಂಟುಮಾಡುತ್ತವೆ. ಪ್ರತಿವರ್ಷ ಸುಮಾರು 10 ಲಕ್ಷ ಪ್ರವಾಸಿಗರು ಹೀಥೋರ್ನ್‌ಗೆ ಭೇಟಿ ನೀಡುತ್ತಾರಂತೆ.

ಹೀಥೋರ್ನ್ ಹಳ್ಳಿಯ ಕಾಲುವೆಗಳ ಪಕ್ಕದಲ್ಲಿ ಮೂರು ಮ್ಯೂಸಿಯಂಗಳು, ದೋಣಿಗಳನ್ನು ನಿರ್ಮಿಸುವ ಶಿಪ್‌ಯಾರ್ಡ್ ಹಾಗೂ ಇತಿಹಾಸ ಮತ್ತು ಕೃಷಿ ಪದ್ಧತಿಯ ಮೇಲೆ ಬೆಳಕು ಚೆಲ್ಲುವ ವಸ್ತುಸಂಗ್ರಹಾಲಯಗಳೂ ಇವೆ. ಇಲ್ಲಿಗೆ ಬರುವ ಪ್ರವಾಸಿಗರು ತಮ್ಮ ಅಭಿರುಚಿಗೆ ತಕ್ಕಂತೆ ಸಂಗ್ರಹಾಲಯಗಳಿಗೆ ಭೇಟಿಯಿತ್ತು ಮಾಹಿತಿ ಪಡೆದುಕೊಳ್ಳುತ್ತಾರೆ.

### ಭೇಟಿಗೆ ಉತ್ತಮ ಸಮಯ

ವರ್ಷದ ಯಾವುದೇ ಸಮಯದಲ್ಲಾದರೂ ಹೀಥೋರ್ನ್ ಸುಂದರವಾಗಿ ಕಾಣುತ್ತದೆ. ಅದರಲ್ಲೂ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೂ ಉತ್ತಮ ಸಮಯವೆಂದು ಹೇಳಬಹುದು. ಏಪ್ರಿಲ್ ಮೇ ತಿಂಗಳುಗಳಲ್ಲಿ ಹಚ್ಚ ಹಸುರಾಗಿ ಕಾಣುವ ಹೀಥೋರ್ನ್‌ನಲ್ಲಿ ಜೂನ್, ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಹಿತವಾದ ವಾತಾವರಣವಿದ್ದು ಗಿಡ, ಮರಗಳು ಬಣ್ಣ ಬಣ್ಣದ ಹೂವುಗಳಿಂದ ತುಂಬಿರುವುದನ್ನು ನೋಡಿ ಆನಂದಿಸಬಹುದು. ಚಳಿಗಾಲದಲ್ಲಿ ಹಿಮಾಚ್ಛಾದಿತವಾಗಿದ್ದು ವಿಶಿಷ್ಟ ಅನುಭವ ನೀಡುತ್ತದೆ. ಒಟ್ಟಾರೆ ಹೇಳುವುದಾದರೆ, ಪ್ರತೀ ಋತುವಿನಲ್ಲೂ ತನ್ನದೇ ಆದ ಸೌಂದರ್ಯದಿಂದ ಪ್ರವಾಸಿಗರಿಗೆ ಮೋಡಿ ಮಾಡುತ್ತದೆ ಈ ಪ್ರದೇಶ. ಡಚ್ ಸಾರ್ವಜನಿಕ ರಜಾ ದಿನಗಳು, ಶಾಲಾ ರಜಾ ದಿನಗಳು ಹಾಗೂ ಭಾನುವಾರಗಳಂದು ಹೆಚ್ಚಿನ ಜನಸಂದಣಿ ಇರುವುದರಿಂದ ಆ ದಿನಗಳಲ್ಲಿ ಹೀಥೋರ್ನ್ ಪ್ರವಾಸದಿಂದ ದೂರ ಉಳಿಯುವುದು ಸೂಕ್ತ.

### ತಲುಪುವುದು ಹೇಗೆ?

ನೆದರ್ಲೆಂಡ್ಸ್‌ನ ರಾಜಧಾನಿ 'ಆಮ್‌ಸ್ಟರ್ ಡ್ಯಾಂ'ನಿಂದ ಸುಮಾರು 120 ಕಿ.ಮೀ ದೂರದಲ್ಲಿರುವ ಹೀಥೋರ್ನ್ ಅನ್ನು ರೈಲು, ಬಸ್ ಹಾಗೂ ಟ್ಯಾಕ್ಸಿಗಳ ಮೂಲಕ ಸುಮಾರು 90 ನಿಮಿಷಗಳ ಅವಧಿಯಲ್ಲಿ ತಲುಪಬಹುದು. ಒಂದು ದಿನದ 'ಪ್ಯಾಕೇಜ್ ಟೂರ್'ಗಳೂ ಲಭ್ಯ. ಹೀಥೋರ್ನ್ ಹಳ್ಳಿಯ ಸೌಂದರ್ಯವನ್ನು ಒಂದು ದಿನದಲ್ಲಿ ಕಣ್ತುಂಬಿಸಿಕೊಳ್ಳಬಹುದಾದರೂ, ರಾತ್ರಿ ತಂಗಲು ಇಚ್ಛಿಸುವವರಿಗಾಗಿ, ಹಲವು ದರ್ಜೆಯ ಹೋಟೆಲ್‌ಗಳು ಲಭ್ಯವಿವೆ.

## ಮುನ್ನೋಟ 18-07-2021 ರಿಂದ 24-07-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

### ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

**ಮೇಷ** — ಅಶ್ವಿನಿ, ಭರಣಿ, ಕೃತ್ತಿಕಾ 1

ಉದ್ಯೋಗದಲ್ಲಿರುವವರಿಗೆ ಸಣ್ಣಪುಟ್ಟ ಅಡಚಣೆಗಳು ಬರಬಹುದು. ಖರ್ಚು ಅತಿಯಾಗಿ ಆರ್ಥಿಕ ಸಮತೋಲನದಲ್ಲಿ ಏರುಪೇರು ಆಗಬಹುದು. ಒಡಹುಟ್ಟಿದವರ ವಿಶ್ವಾಸವನ್ನು ಕಾಪಾಡಿಕೊಳ್ಳುವುದು ನಿಮಗೆ ಉತ್ತಮ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಕಾಣಬಹುದು. ಕೃಷಿ ಭೂಮಿಯನ್ನು ಕೊಳ್ಳುವುದರಲ್ಲಿ ಸಫಲರಾಗುವಿರಿ. ಮುದ್ರಣ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ವಿಪುಲ ಅವಕಾಶಗಳು ದೊರೆಯುತ್ತವೆ.

**ವೃಷಭ** — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ತಾಂತ್ರಿಕ ಪರಿಣತರಿಗೆ ಉತ್ತಮ ಕೆಲಸಗಳು ದೊರೆತು ಸಂಪಾದನೆ ಹೆಚ್ಚುತ್ತದೆ. ವಿದ್ಯಾರ್ಥಿಗಳ ಶ್ರಮಕ್ಕೆ ತಕ್ಕ ಫಲ ದೊರೆಯುತ್ತದೆ. ಮನೆ ನಿರ್ಮಾಣ ಮಾಡಬೇಕೆನ್ನುವವರಿಗೆ ಹಣ ಹೊಂದಿಕೆಯಾಗುತ್ತದೆ. ಆದಾಯದ ಹೊಸ ಮೂಲ ಗೋಚರವಾಗುತ್ತದೆ. ಅದನ್ನು ಸರಿಯಾಗಿ ಬಳಸಿಕೊಳ್ಳಿ. ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳಲು ಸಾಕಷ್ಟು ಶ್ರಮವಹಿಸಬೇಕು.

**ಮಿಥುನ** — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸೌಂದರ್ಯವರ್ಧಕಗಳನ್ನು ಖರೀದಿ ಮಾಡುವ ಸಾಧ್ಯತೆ ಇದೆ. ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯನ್ನು ಕಾಣಬಹುದು. ಕೃಷಿಕರಿಗೆ ಬರಬೇಕಿದ್ದ ಸಹಾಯಧನಗಳು ಸಿಗುತ್ತವೆ. ವಾಹನ ರಿಪೇರಿಗಾಗಿ ಹಣ ಖರ್ಚಾಗುವುದು. ಉದ್ಯೋಗದಲ್ಲಿ ಚಾಣಾಕ್ಷತೆಯನ್ನು ಮೆರೆದು ಯಶಸ್ಸನ್ನು ನಿಮ್ಮದಾಗಿಸಿಕೊಳ್ಳುವಿರಿ. ಮುಂದಾಲೋಚನೆಯಿಂದ ತೆಗೆದುಕೊಂಡ ನಿರ್ಧಾರಗಳು ಈಗ ಫಲ ಕೊಡುತ್ತವೆ.

**ಕಟಕ** — ಪುನರ್ವಸು 4 ಪುಷ್ಯ, ಆಶ್ಲೇಷ

ಈ ವಾರ ಉತ್ತಮ ಆದಾಯವನ್ನು ನಿರೀಕ್ಷಿಸಬಹುದು, ಹಾಗೆಯೇ ಮನೆಯ ಖರ್ಚಿನಲ್ಲಿ ಏರಿಕೆಯಾಗಲಿದೆ. ಉದ್ಯೋಗಸ್ಥ ಮಹಿಳೆಯರು ವಿನಾಕಾರಣ ವರ್ಗಾವಣೆಯನ್ನು ನಿರೀಕ್ಷಿಸಬಹುದು. ವಾಹನಗಳ ಮಾರಾಟದ ವ್ಯವಹಾರದಲ್ಲಿ ಸ್ವಲ್ಪ ಹಿನ್ನಡೆಯನ್ನು ಕಾಣಬಹುದು. ಆದರೂ ವ್ಯವಹಾರದಲ್ಲಿ ನಷ್ಟವೇನಿಲ್ಲ. ಇದ್ದ ಮಾನಸಿಕ ಕಿರಿಕಿರಿಗಳು ದೂರವಾಗುತ್ತದೆ. ಸರ್ಕಾರಿ ಮಟ್ಟದ ಕೆಲಸಗಳಲ್ಲಿ ಮುನ್ನಡೆ ಇರಲಿದೆ.

**ಸಿಂಹ** — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಸ್ವಲ್ಪ ಧನಾದಾಯ ಹೆಚ್ಚಾಗಿ ಹೊಸ ವಸ್ತ್ರಗಳನ್ನು ಕೊಳ್ಳುವ ಸಾಧ್ಯತೆ ಇದೆ. ಮನೆಯವರೊಂದಿಗೆ ಸಂತೋಷಕೂಟವನ್ನು ಆಚರಿಸಿಕೊಳ್ಳುವಿರಿ. ಕಚೇರಿಗಳಲ್ಲಿ ಕೆಲಸ ಮಾಡುವಾಗ ಹೆಚ್ಚಿನ ಜವಾಬ್ದಾರಿಗಳು ಹೆಗಲೇರಿ ಆಯಾಸವೆನಿಸುತ್ತದೆ. ಕೋರ್ಟ್ ಕಚೇರಿ ಕೆಲಸಗಳಲ್ಲಿ ನಿಧಾನಗತಿ ಆದರೂ ಹಿನ್ನಡೆ ಇರುವುದಿಲ್ಲ. ಉದ್ಯೋಗ ಸ್ಥಳದಲ್ಲಿ ಇದ್ದ ಕಲಹಗಳು ಇತ್ಯರ್ಥವಾಗುತ್ತವೆ.

**ಕನ್ಯಾ** — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಶ್ಚಿತ ಆದಾಯ ಬರುವ ಸೂಚನೆ ಇದ್ದರೂ ಹಣ ಬರುವಲ್ಲಿ ವಿಳಂಬವಾಗುತ್ತದೆ. ಖರ್ಚುಗಳ ಬಗ್ಗೆ ಹಿಡಿತ ಇರಲಿ. ನಿಮ್ಮ ಮುಂದಿನ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮುಂಚೆ ಆ ಯೋಜನೆಗಳ ಆದ್ಯತಾ ಪಟ್ಟಿಯನ್ನು ತಯಾರಿಸಿಕೊಂಡು ಅದರಂತೆ ಜಾರಿಗೊಳಿಸಿರಿ. ಕಚೇರಿಯಲ್ಲಿ ಚುರುಕಿನಿಂದ ಕೆಲಸ ಕಾರ್ಯಗಳನ್ನು ಮಾಡಿ ಸಾಧನೆಗೆ ಪಾತ್ರರಾಗುವಿರಿ.

**ತುಲಾ** — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಾಧ್ಯತೆಗಳಿವೆ. ಇದರ ಆಯೋಜನೆಯಲ್ಲಿ ಸಾಕಷ್ಟು ಸಣ್ಣ ಮಾತುಗಳು ಬರಬಹುದು, ತಾಳ್ಮೆಯಿಂದ ಇದ್ದಲ್ಲಿ ಯಶಸ್ಸು ನಿಮ್ಮದಾಗಿರುತ್ತದೆ. ವೃತ್ತಿಯಲ್ಲಿ ಹಿರಿಯ ಅಧಿಕಾರಿಗಳ ಕಚೇರಿಯಲ್ಲಿ ದಿನವಿಡೀ ಕಾಲಹರಣ ಮಾಡಬೇಕಾದ ಅನಿವಾರ್ಯ ಇರುತ್ತದೆ. ಬರಬೇಕಾಗಿದ್ದ ಬಾಕಿ ಹಣ, ಸಾಲವನ್ನು ಈಗ ವಸೂಲಿ ಮಾಡಬಹುದು.

**ವೃಶ್ಚಿಕ** — ವಿಶಾಖೆ 4 ಅನೂರಾಧ, ಜ್ಯೇಷ್ಠ

ಸಂಸಾರದಲ್ಲಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಗೊಂದಲಗಳು ಆಗಬಹುದು, ಸಂಗಾತಿಯೊಡನೆ ಚರ್ಚಿಸಿ ನಂತರ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಉತ್ತಮ. ಆರ್ಥಿಕ ಸ್ಥಿತಿಯು ಉತ್ತಮವಾಗಿರುವುದಿಲ್ಲ. ಯಾರದೋ ಮಾತು ಕೇಳಿ ಸಿಕ್ಕಸಿಕ್ಕಲ್ಲಿ ಹಣ ಹೂಡುವುದು ಬೇಡ, ಸರಿಯಾಗಿ ಅರಿತು ಹಣ ಹೂಡಿರಿ.

**ಧನುಸ್ಸು** — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಆಸ್ತಿಗೆ ಸಂಬಂಧಿಸಿದ ವ್ಯವಹಾರಗಳ ಬಗ್ಗೆ ಹಿರಿಯರು ಜಾಗ್ರತೆ ವಹಿಸುವುದು ಉತ್ತಮ. ಸ್ತ್ರೀಯರಿಗೆ ಒಡವೆಗಳನ್ನು ಕೊಳ್ಳುವ ಆಸಕ್ತಿ ಇರುತ್ತದೆ. ಸರ್ಕಾರಿ ಕೆಲಸಗಳ ಮಧ್ಯವರ್ತಿಗಳಿಗೆ ಬಿಡುವಿಲ್ಲದ ಕೆಲಸವಿರುತ್ತದೆ. ಕಾಯುತ್ತಿದ್ದ ಹೊಸ ಉದ್ಯೋಗದ ಆದೇಶದ ಪ್ರತಿಯು ದೊರೆಯುತ್ತದೆ. ಶಿಕ್ಷಕ ವೃತ್ತಿಯಲ್ಲಿ ಇರುವವರಿಗೆ ಸಣ್ಣಪುಟ್ಟ ಅಪವಾದಗಳು ಬರುವ ಸಾಧ್ಯತೆಗಳಿವೆ ಎಚ್ಚರವಾಗಿರಿ.

**ಮಕರ** — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ನಿಮ್ಮ ವಿಶ್ವಾಸಿಗಳಿಂದಲೇ ಮೋಸಹೋಗುವ ಸಾಧ್ಯತೆಗಳಿವೆ, ಈ ಬಗ್ಗೆ ಎಚ್ಚರವಹಿಸಿ. ಕೌಟುಂಬಿಕ ಕೆಲಸಗಳಲ್ಲಿ ಅತ್ಯಂತ ಜವಾಬ್ದಾರಿ ಮತ್ತು ದಕ್ಷತೆಯನ್ನು ಮೆರೆಯುವಿರಿ. ಈ ಬಗ್ಗೆ ಹಿರಿಯರು ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸುವರು. ಹೊಸ ಉದ್ಯೋಗದ ಅವಕಾಶಗಳು ಒದಗಿಬರುತ್ತವೆ. ಅನಿರೀಕ್ಷಿತ ಬೆಳವಣಿಗೆಯಿಂದ ಉದ್ಯೋಗದಲ್ಲಿ ಹೆಚ್ಚಿನ ಅಧಿಕಾರ ದೊರೆಯಬಹುದು.

**ಕುಂಭ** — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ತರಕಾರಿ ಬೆಳೆಯುವ ಕೃಷಿಕರಿಗೆ ಉತ್ತಮ ಬೆಲೆ ದೊರೆತು ಸಂತಸವಾಗುತ್ತದೆ. ಸಮಾಜವು ಹೆಮ್ಮೆ ಪಡುವ ಕೆಲಸಗಳನ್ನು ಹಿರಿಯರು ಮಾಡಿ ಆತ್ಮತೃಪ್ತಿಯನ್ನು ಹೊಂದುವರು. ಸೋದರಿಯರ ನಡುವೆ ಬಿರುಕುಬಿಟ್ಟಿದ್ದ ಸಂಬಂಧಗಳು ಪುನರ್ ಸ್ಥಾಪನೆಗೊಂಡು ಸಂಬಂಧ ಗಟ್ಟಿಯಾಗುವುದು.

**ಮೀನ** — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಆಕಸ್ಮಿಕ ಧನಲಾಭವನ್ನು ನಿರೀಕ್ಷಿಸಬಹುದು. ಎಲ್ಲರ ಮಧ್ಯೆ ಹೊಗಳಿಕೊಳ್ಳುವ ನಿಮ್ಮ ಗುಣ ಅಪಹಾಸ್ಯಕ್ಕೆ ಕಾರಣವಾಗಬಹುದು. ಕೆಲವರಿಗೆ ಗುಪ್ತ ರೋಗಗಳು ಕಾಡಬಹುದು. ಹಳೆಯ ವೈಷಮ್ಯಗಳನ್ನು ಕೆದಕುವ ಬದಲು ಪರಿಹಾರ ಕಂಡುಕೊಳ್ಳುವತ್ತ ಸ್ವಲ್ಪ ಆಲೋಚಿಸುವುದು ಒಳಿತು. ರಾಸಾಯನಿಕ ವಸ್ತುಗಳ ಮಾರಾಟಗಾರರಿಗೆ ಹೆಚ್ಚಿನ ಲಾಭವಿರುತ್ತದೆ.

### ಪದಬಂಧ 2696

**ಮೇಲಿನಿಂದ ಕೆಳಕ್ಕೆ**

1. ಮಾಡುವ ಯತ್ನಕ್ಕೆ ಉಂಟಾದ ಅಡೆತಡೆ 5
2. ಮಳೆ ಹೆಚ್ಚಾಗಿ ಕಟ್ಟೆ ಒಡೆದು ಹರಿದ ಹೊಳೆ 3
3. ಸಂಸ್ಕೃತದಲ್ಲಿ 'ನೀನೇ' 3
4. ಬೀಗ ತೆಗೆಯಲು ಬೇಕಾದ ಹಸ್ತ ಸಾಧನ 3
5. ಅಕ್ರಮವಾಗಿ ಚಲಾವಣೆಯಲ್ಲಿರುವ ದುಡ್ಡು 4
8. ಉತ್ತರಭಾರತದ ಕೆನೆಹಾಲಿನ ಸಿಹಿ 3
10. ಕಷ್ಟ ನಿವಾರಕ ಶಿವ 5
13. ಕಾದ ಮನಸ್ಸಿಗೆ ಮತ್ತೆ ಚುರುಕು ಕೊಡು 5
14. ಒಳ್ಳೆ ಪೇಚಾಟಕ್ಕಿಟ್ಟುಕೊಂಡಿದೆ 3
18. ನಡೆದದ್ದನ್ನು ನಡೆದಂತೆ ನೋಡುವವ 3
19. ಸ್ನೇಹಿಗಳ ಮಧ್ಯೆ ಪರಸ್ಪರ ವಿರಸ 5
20. ಕಾವಲಿಯ ಖಾದ್ಯಕ್ಕೆ ನವನೀತ ಅಲಂಕಾರ 4
22. ಸವಾರ ಹಾಕುವ ಪ್ರಶ್ನೆ 3
23. ಪಕ್ಷದ ಒಂಬತ್ತನೆಯ ದಿನ 3
24. ವರನಿಗೆ ನೀಡುವ ವಿಸ್ತಾರವಾದ ಅಂಕಿ ಅಂಶ ತಲೆಕೆಳಕಾದಾಗ 3

**ಎಡದಿಂದ ಬಲಕ್ಕೆ**

1. ಜನರಿಂದ ಜನರ ಆಲ್ಬಿಕೆ ಸೂತ್ರ 5
4. ಬೆಳೆನಾಶಕ ಕ್ರಿಮಿಗಳನ್ನು ನಾಶಪಡಿಸುವ ಮದ್ದು 5
6. ಮನವನ್ನು ಆಲಿಸುವ ಉತ್ತರಭಾರತದ ಗಿರಿಧಾಮ 3
7. 'ಆಶೀರ್ವದಿಸಿ' ಎಂಬುದರ ಪರ್ಯಾಯ 3
9. ಕನ

# ಗೂಗ್ಲಕ್ಕ ಗೂಗ್ಲಕ್ಕ ದಾರಿ ಯಾವುದು?

ಡಾ.ಕೆ.ಎಸ್. ಪವಿತ್ರ

ಪ್ರವಾಸಗಳಿಗೆ ಬಾಲ್ಯದಲ್ಲಿ ನಾವು ಹೋಗುತ್ತಿದ್ದ ನೆನಪು ಚೆನ್ನಾಗಿದೆ. ಕಾರು ಮಧ್ಯೆ ಮಧ್ಯೆ ನಿಲ್ಲಿಸಿ ನಮಗೆ ಬೇಕಾದ ಸ್ಥಳವನ್ನು ಜನರ ಹತ್ತಿರ ಕೇಳಿಕೊಂಡು ಸಾಗುವುದು ಪ್ರವಾಸದ ಅವಿಭಾಜ್ಯ ಅಂಗವೇ ಆಗಿದ್ದ ದಿನಗಳು. ಕೈಯಲ್ಲೊಂದು 'ಮ್ಯಾಪು' ಹಿಡಿದು ನಾವಿರುವ ಸ್ಥಳವನ್ನು ಗುರುತಿಸಿ, ನಂತರ ನಾವು ಹೋಗಬೇಕಾದ 'ಗುರಿ'ಯನ್ನು ಅದರಲ್ಲಿ ಗುರುತಿಸಿಕೊಂಡು ಮುಖವೆತ್ತಿಕೊಂಡು ಹುಡುಕುತ್ತಾ ನಡೆಯುವ ಹೊರದೇಶಗಳಲ್ಲಿರುವ ಅಭ್ಯಾಸ ನಮಗೆ ಭಾರತೀಯರಿಗೆ ತುಂಬಾ 'ಟೈಂ ವೇಸ್ಟ್', 'ಪೆದ್ದು' ಎಂದೇ ಅನಿಸುತ್ತಿತ್ತು. ಅದರ ಬದಲು ಸೀದಾ ನಮ್ಮ ಚಾಲಕನಿಗೆ ಗೊತ್ತಿರುವ ನಮ್ಮ ಗುರಿಯ ಹತ್ತಿರದ ಸ್ಥಳ ತಲುಪುವುದು, ಅಲ್ಲಿ ಆ ಸ್ಥಳದ ಬಗ್ಗೆ ಪರಿಚಯವಿರುವವರನ್ನು ಮಾತನಾಡಿಸಿ, ನಿರ್ದೇಶನ ಕೇಳಿ, ಒಂದೆರಡು ರೌಂಡ್ ತಪ್ಪಿ ಹೊಡೆದು, ಕೊನೆಗೂ ನಮ್ಮ ಗುರಿ ಮುಟ್ಟುವ ಸಂತಸ. ಕಾರಿನಲ್ಲಿ ಹೋಗದೆ ಬಸ್ಸು-ರೈಲುಗಳಲ್ಲಿ ಹೋಗಿಳಿದರೆ, ಆಟೊ ಚಾಲಕನೇ ನಮ್ಮ ಅತ್ಯುತ್ತಮ ಮಾರ್ಗದರ್ಶಕ.

> 'ಮ್ಯಾಪ್' ಇಲ್ಲದ ಸಂದರ್ಭದಲ್ಲಿ ಅಲ್ಲಿಲ್ಲಿ ಕೇಳಿಕೊಂಡು ಒಂದೆರಡು ರೌಂಡ್ ತಪ್ಪಿ ಹೊಡೆದು, ಗುರಿ ಮುಟ್ಟುವ ಸಂತಸ ಈಗಿಲ್ಲ. ಜನರು ಕಂಡರೆ, ಅವರೂ ಗೂಗಲ್‌ಮ್ಯಾಪ್ ಹಿಡಿದೇ ತೋರಿಸಿದರೂ ಪರವಾಗಿಲ್ಲ, 'ಹಲೋ' 'ನಮಸ್ಕಾರ' ಎಂದು ಹೇಳಿ ದಾರಿ ಕೇಳುವ ಮಜಾ ಕಳೆದುಕೊಳ್ಳದಿರೋಣ...

ಕಲೆ: ಸುಜಾತಾ ಶೆಟ್ಟಿ

ಹಿಂದೆ ಪ್ರವಾಸಗಳಲ್ಲಿ ನಡೆಯುತ್ತಿದ್ದ ಜಗಳಗಳಲ್ಲಿ ಪ್ರಮುಖವಾದದ್ದೆಂದರೆ ಹೆಚ್ಚಾಗಿ ಹೆಂಡತಿ 'ಕೇಳಿ ಕನ್‌ಫರ್ಮ್ ಮಾಡಿಕೊಳ್ಳೋಣ' ಎನ್ನುವುದು. ಗಂಡ ಬಹುಬಾರಿ 'ಬೇಡ, ನಾವೇ ಹುಡುಕಿ ಹೋಗೋಣ' ಎಂದು ತಡೆಯುವುದು. ಗಂಡ ತಾನೇ ಹುಡುಕುವಷ್ಟರಲ್ಲಿ ಹೆಂಡತಿಯ ಸಹನೆ ಮೀರಿ, ಗಂಡನಿಗೆ ಸುಸ್ತಾಗಿ 'ಗುರಿ' ತಲುಪುವ ಮುನ್ನವೇ ಒಂದು ಜಗಳ ನಡೆದೇ, ಇದೂ ಪ್ರವಾಸದ ಒಂದು ಹಂತ ಎಂದು ದೃಢಪಡುವುದು.

ಭಾಷೆ ಕಲಿಯಲು, ಸ್ಥಳೀಯರೊಂದಿಗೆ ಮಾತನಾಡಲು ಇದೆಲ್ಲ ಒಂದು ಮಾರ್ಗವೇ ಆಗಿತ್ತು. ಕೊಡೈಕೆನಾಲ್‌ಗೆ ಒಮ್ಮೆ ಹೋಗುವಾಗ ಧರ್ಮಾವರಂ ಬಳಿ 'ನ್ಯಾರ ಪೋರದ' ಎಂದು ಒಬ್ಬ ಮಾರ್ಗದರ್ಶನ ನೀಡಿದ್ದು, ನಾವು ಇಡೀ ತಮಿಳುನಾಡು ಪ್ರವಾಸದ 'ಕೀ ಫ್ರೇಸ್' ಆಗಿ ನ್ಯಾರ ಪೋರದವನ್ನು (ನೇರ ಪೋರದಾ) ಮತ್ತೆ ಮತ್ತೆ ಆಡಿದ್ದು ಈಗ 'ಹಿಸ್ಟರಿ' ಆಗಿಹೋಗಿದೆ!

ಜಿಪಿಎಸ್ ಎಂಬ ವ್ಯವಸ್ಥೆಯ ಬಗ್ಗೆ ನಾನು ಮೊದಲು ನೋಡಿದ್ದು ಸಿಡ್ನಿಯಲ್ಲಿ. ನಮ್ಮನ್ನು ಹೋಟೆಲಿಗೆ ಕಾರಿನಲ್ಲಿ ಕರೆದುಕೊಂಡು ಹೋಗುವಾಗ ಆತ್ಮೀಯ ವೈದ್ಯರ ಕಾರಿನಲ್ಲಿ ದಾರಿಯ ನಿರ್ದೇಶನಗಳನ್ನು ನೀಡುವ ಮಹಿಳಾ ದನಿಯೊಂದು ಆಗಾಗ್ಗೆ ಉಲಿಯುತ್ತಿತ್ತು. ಹೊರಡುವಾಗ ಅವರ ಪತ್ನಿ ನಮ್ಮನ್ನು ಎಚ್ಚರಿಸಿದ್ದರು: 'ಇವರಿಗೆ ಅದಿದೇಂತ ತೋರಿಸ್ಬೇಕು. ಆದರೆ 'ಅವಳು' ತುಂಬಾ ಸಲ ತಪ್ಪೇ ತೋರಿಸೋದು!'. ಅದಕ್ಕೆ ಸರಿಯಾಗಿ ಧ್ವನಿಯ ನಿರ್ದೇಶನದಂತೆ ಸುತ್ತು ಹೊಡೆದೂ ಹೊಡೆದೂ ನಾವು ಒಂದು ಗಂಟೆಯ ಮೇಲೆ ಬಂದು ಮುಟ್ಟಿದ್ದೆವು. ಜೊತೆಗಿದ್ದ, ಭಾರತದಲ್ಲಿ ಎಂಥ ಟ್ರಾಫಿಕ್‌ನಲ್ಲೂ ಕಾರ್/ಬೈಕ್ ನಡೆಸುವ ವೀರರೂ -ದಾರಿಯನ್ನು- ಶಾರ್ಟ್‌ಕಟ್‌ಗಳ ಮೂಲಕ ಶೀಘ್ರ ಸವೆಸುವುದರಲ್ಲಿ ಪರಿಣತರೂ ಆಗಿದ್ದ ನನ್ನ ಅಪ್ಪ-ಪತಿ ಇಬ್ಬರೂ, 'ಕಾಲು ಗಂಟೆಯ ದಾರಿಗೆ ಒಂದು ಗಂಟೆಯ ಸಮಯ ತೆಗೆದುಕೊಂಡ ಪುಣ್ಯಾತ್ಮ ಆ ಧ್ವನಿಯ ಹಿಂದೆ ಬಿದ್ದು' ಎಂದು ನಕ್ಕಿದ್ದರು.

ಇನ್ನೊಮ್ಮೆ ಲಂಡನ್‌ನಲ್ಲಿಯೂ ಇದೇ ರೀತಿಯ 'ಟಾಮ್ ಟಾಮ್' ಎಂಬ ಧ್ವನಿ ಸಹಾಯ ಮಾಡಲು ಹೋಗಿ ಸುತ್ತು ಹೊಡೆದೂ ಹೊಡೆದು, ಒಂದು ರಸ್ತೆಯ ಅಂಗಡಿಗಳೆಲ್ಲ ಮಕ್ಕಳಿಗೆ ಬಾಯಿಪಾಠವಾಗಿ ಹೋಗಿದ್ದವು. ತೆಲುಗು ಮೂಲದವರಾಗಿದ್ದ ನನ್ನ ವೈದ್ಯ ಸ್ನೇಹಿತನ ಪತ್ನಿ, ನಮ್ಮ ಹೋಟೆಲ್ ಮುಂದೆ ಕಾರು ನಿಂತಾಕ್ಷಣ 'ಬುಜ್ಜಿ (ಡಿಯರ್), ನೀಕು, ಟಾಮ್‌ಟಾಮ್‌ಕು ನಾದಿ ಪೆದ್ದ ನಮಸ್ಕಾರಂ' ಎಂದು ಬಿಟ್ಟಿದ್ದಳು.

ನನಗೆ ಅಚ್ಚರಿಯಾಗಿತ್ತು. 'ಅರೆರೆ ಗಂಡಸರು 'ಮ್ಯಾಪ್'ನ್ನು, ಅದರೊಂದಿಗೇ ಬಂದಿರುವ ಮ್ಯಾಪ್‌ನ ವಿವಿಧ ಡಿಜಿಟಲ್ ವ್ಯವಸ್ಥೆಗಳನ್ನು ಹೇಗೆ ತಮ್ಮ ಆತ್ಮೀಯರಂತೆ ನೋಡುತ್ತಾರೆ, ಅದೇ ಈ ಎಲ್ಲಾ ಸಾಧನಗಳನ್ನು ಹೆಂಗಸರು ತಮ್ಮ ಪ್ರತಿಸ್ಪರ್ಧಿಗಳಾಗಿ ನೋಡುತ್ತಾರೆ' ಅಂತ! ಅದಕ್ಕೆ ಸರಿಯಾಗಿ ನಾನು ಉಪಯೋಗಿಸಿರುವ, ನೋಡಿರುವ ಬಹಳಷ್ಟು ಇಂತಹ ಡಿಜಿಟಲ್ ಮ್ಯಾಪ್‌ಗಳಲ್ಲಿ ಉಲಿಯುವುದು ಹೆಣ್ಣಿನ ಧ್ವನಿಯೇ!

ನನಗೂ 'ಗೂಗಲ್ ಮ್ಯಾಪ್'ನ ಬಗ್ಗೆ ಅಂತಹುದೇ ಅಸಹನೆಯಿತ್ತು. ಜೊತೆಗೆ ಜನರೊಡನೆ ಕೇಳುವುದು ನನಗೊಂದು ಪ್ರಿಯ ಸಂಗತಿಯೂ ಆಗಿತ್ತು. ಆ ಮೂಲಕ ಸಾಮಾಜಿಕ ಸಂವಹನ ಬೆಳೆಯುತ್ತದೆ ಎಂಬುದು ನನ್ನ ನಂಬಿಕೆ. ಅಂತರರಾಷ್ಟ್ರೀಯ ಪ್ರವಾಸಗಳಲ್ಲಿ 'ಮ್ಯಾಪ್' ಇಟ್ಟುಕೊಂಡರೂ, ಮ್ಯಾಪ್‌ನಲ್ಲಿ ನಾವು ಹೋಗಬೇಕಾದ ಸ್ಥಳ ಗುರುತಿಸಲಾದರೂ ಜನರನ್ನು ಕೇಳಬೇಕಾಗುತ್ತಿತ್ತು. ಆಗಲೂ ಅದು ಕೆಲವೊಮ್ಮೆ ಗೊತ್ತಾಗದ 'ಪೆದ್ದುತನ' ನನ್ನದು. ಅಂತಹ ಸಂದರ್ಭವೊಂದರಲ್ಲಿ ಜಪಾನ್‌ನ ಕೋಬೆಯಲ್ಲಿ ರೈಲ್ವೆ ಸ್ಟೇಷನ್‌ನಲ್ಲಿ ಅಂಗಡಿಯೊಂದರಲ್ಲಿದ್ದ ಹುಡುಗಿಯನ್ನು ಕೇಳಿದೆ. ಅದಕ್ಕೆ ಅವಳು ಜಪಾನಿ ಭಾಷೆಯಲ್ಲಿ, ಕೈಕಾಲು ಕುಣಿಸಿ ದಿಕ್ಕು ತೋರಿಸಿದಳು. ನಾನು ಆ ದಿಕ್ಕಿಗೆ ಹೋಗಿ ಸಿಗದೆ ಮತ್ತೆ ವಾಪಸ್ ಬಂದು ಅವಳನ್ನೇ ಕೇಳಿದೆ. ಅದಕ್ಕೆ ಅವಳು ಕರುಣಾಳುವಾಗಿ, ದಾರಿ ತೋರುವ ಗುರುವಾಗಿ ಸುಮಾರು ಅರ್ಧ ಕಿಲೊಮೀಟರ್ ನಡೆದು ಬಂದು ನಾನು ಕೇಳುತ್ತಿದ್ದ ಜಾಗ ತೋರಿಸಿ, ಅದರ ಮೇಲೆ ನನಗೊಂದು ತಲೆಬಾಗಿ ವಂದನೆ ಹೇಳಿ ವಾಪಸ್ಸಾದಳು. ನನಗೋ ಆಶ್ಚರ್ಯ. ಈ ಜಪಾನಿಗರ ಉಪಕಾರ ನಿಷ್ಠೆ, ತಮ್ಮ ಅಂಗಡಿಯನ್ನು ಹೆದರದೇ ಬಿಟ್ಟು ಹೋಗುವ ಧೈರ್ಯ-ತಮ್ಮವರ ಪ್ರಾಮಾಣಿಕತೆಯ ಬಗೆಗಿನ ನಂಬುಗೆ, ಬೇರೆಯವರಿಗಾಗಿ ಅರ್ಧ ಕಿ.ಮೀ. ನಡೆಯುವ ಉಪಕಾರ ಬುದ್ಧಿ ಇವಿಷ್ಟನ್ನೂ ಒಮ್ಮೆಲೇ ಮನವರಿಕೆ ಮಾಡಿಸಿಬಿಟ್ಟಿದ್ದವು.

ನನ್ನ ರೆಸಿಸ್ಟೆನ್ಸ್- ನಿರೋಧಕತ್ವದ ಮಧ್ಯೆಯೂ ಗೂಗಲ್ ಮ್ಯಾಪ್‌ನ್ನು ನಾನು ಫ್ರೆಂಡಾಗಿಸಿಕೊಂಡದ್ದು ಮೂರು ವರ್ಷಗಳ ಹಿಂದೆ. ಶಿವಮೊಗ್ಗೆಯಿಂದ ರಾತ್ರಿ ರೈಲು ಹಿಡಿದು, 3 ಗಂಟೆಗೆ ಎರಡೇ ನಿಮಿಷ ರೈಲು ನಿಲ್ಲುವ ಯಶವಂತಪುರದಲ್ಲಿ ಇಳಿದು ನಾನು ದೆಹಲಿಯ ವಿಮಾನ ಹಿಡಿಯಬೇಕಾಗಿತ್ತು. ಆಗಲೇ ಗೂಗಲ್ ಮ್ಯಾಪ್‌ನ್ನು ಅವಲಂಬಿಸಿ ನಾನು ಯಶಸ್ವಿಯಾದದ್ದು, ಇತರರನ್ನು ಕೇಳುವುದು, ಅವರಿಗೆ ತೊಂದರೆಯುಂಟು ಮಾಡುವುದು ಅಥವಾ ಅವರ ತಪ್ಪು ನಿರ್ದೇಶನದ ರಿಸ್ಕ್ ತೆಗೆದುಕೊಳ್ಳುವುದು ಇವ್ಯಾವೂ ನನಗೆ ಬೇಕಾಗಿರಲಿಲ್ಲ. ಗೂಗಲ್ ಮ್ಯಾಪ್ ಕರಾರುವಾಕ್ಕಾಗಿ ರೈಲು ಎಲ್ಲಿ ನಿಂತಿದೆ, ಎಷ್ಟು ಹೊತ್ತಿನಲ್ಲಿ ನಿಲ್ದಾಣ ತಲುಪುತ್ತದೆ ಎಂಬುದನ್ನು ತೋರಿಸುವ ಕೆಲಸ ಮಾಡುತ್ತಿತ್ತು. ಒಂದು ರಾತ್ರಿಯಲ್ಲಿ ಗೆಳತಿಯಾಗಿ ಬಿಟ್ಟಿತ್ತು!

ಯಾವ ಚಾಲಕನೂ ಈಗ 'ನಿಮಗೆ ಈ ಸ್ಥಳ ಗೊತ್ತೆ?' ಎಂದರೆ 'ಇಲ್ಲ' ಎನ್ನುವುದಿಲ್ಲ. ಬದಲಾಗಿ 'ಮ್ಯಾಪ್ ಹಾಕ್ತೀನಿ ಮೇಡಂ, ಹೋಗೋಣ' ಎನ್ನುತ್ತಾರೆ. ಮುಂದುವರೆದು ಯಾವ ಮಾರ್ಗದಲ್ಲಿ ಟ್ರಾಫಿಕ್ ಹೆಚ್ಚಿದೆ, ಎಲ್ಲಿ ರಸ್ತೆ ರಿಪೇರಿ ನಡೆಯುತ್ತಿದೆ ಎಲ್ಲವನ್ನೂ ಗೂಗಲ್ ಮ್ಯಾಪ್ ಹೇಳುತ್ತದೆ. ಹತ್ತಿರ ಯಾವ ಹೋಟೆಲ್ ಇದೆ -ಅದು ತೆರೆದಿದೆಯೆ ಇಲ್ಲವೆ, ಹತ್ತಿರವಿರುವ ಪ್ರೇಕ್ಷಣೀಯ ಸ್ಥಳಗಳು ಯಾವುವು, ಅವುಗಳ ತೆರೆದಿರುವ ಸಮಯ ಎಲ್ಲ ಗೂಗಲ್ ಹೇಳಬಲ್ಲುದು.

ಗೂಗಲ್ ಮ್ಯಾಪ್‌ನ್ನು ಆರಾಮವಾಗಿ ಆಪ್ತವಾಗಿಸಿಕೊಂಡು, ಗೈಡ್ 'ಅದು ಮುಚ್ಚಿರುತ್ತದೆ. ಈಗ ಹೋಗಲು ಕಷ್ಟ' ಎಂದರೆ ಈಗ ನಾವು 'ಇಲ್ಲ ಅದು ತೆರೆದಿದೆ, ಹೋಗಲು 15 ನಿಮಿಷ ಅಷ್ಟೆ ಸಾಕು, ಹೋಗಿ ನೋಡಿಯೇ ಬಿಡೋಣ' ಎಂದು ಹೇಳಬಹುದು. ಪ್ರವಾಸಿಗರಿಗೆ ನಡೆಯುವ ಹಲವು ಮೋಸಗಳನ್ನು ಇಂದು ಗೂಗಲ್ ಕಡಿಮೆಯಾಗಿಸಿದೆ.

**ಹರಟೆ**

ಆದರೂ ಅಂತರರಾಷ್ಟ್ರೀಯವಾಗಿ ಇನ್ನೂ ಗೂಗಲ್ ಮ್ಯಾಪ್ ಬಳಸುವುದು ಸುಲಭವಲ್ಲ. ಏಕೆಂದರೆ ಕೆಲವು ಯುರೋಪ್ ದೇಶಗಳಲ್ಲಿ ಈ ಮ್ಯಾಪ್‌ಗಳಿರುವುದು ಆಯಾ ದೇಶದ ಭಾಷೆಗಳಲ್ಲಿ. ಗೊತ್ತಿರದ ದಾರಿಗಳಲ್ಲಿ, ಇತರರನ್ನು ಕೇಳದೆ ನಾವು ಏನಾದರೂ ಮುಂದುವರೆದರೆ ಅಪಾಯ ಗ್ಯಾರಂಟಿ. ದಕ್ಷಿಣ ಏಷ್ಯಾದ ಸಿಂಗಪುರ, ಥಾಯ್ಲೆಂಡ್, ಮಲೇಷ್ಯಾಗಳಲ್ಲಿ ಇಯರ್‌ಫೋನ್‌ಗಳನ್ನು ಧರಿಸಿ ಮೊಬೈಲ್‌ಗಳಲ್ಲಿ ಹುದುಗಿದ ಜನ, ನಮಗೆ ಕೇಳಲೇ ಮುಜುಗರ ತರಿಸುವ ಸನ್ನಿವೇಶ ಯುರೋಪ್ ದೇಶಗಳಲ್ಲಿ ಸಿಗದು. ನಮ್ಮ ಭಾರತೀಯರು ಜಪಾನೀಯರಷ್ಟಲ್ಲದಿದ್ದರೂ, ಉಪಕಾರಿ -ಸ್ನೇಹಪರರಂತೂ ಹೌದು. ಹಾಗಾಗಿ ಗೂಗಲ್ ಮ್ಯಾಪ್ ಎಂಬ ಗೆಳತಿ ಕೈಯಲ್ಲಿದ್ದರೂ ಜನರನ್ನು ಕೇಳುವ ಅಭ್ಯಾಸ ನಮಗಿನ್ನೂ ಮರೆತಿಲ್ಲ.

ಕೃತಕ ಬುದ್ಧಿಮತ್ತೆ ಅದ್ಭುತವಾಗೇನೋ ಕೆಲಸ ಮಾಡುತ್ತಿದೆ. ತಂತ್ರಜ್ಞಾನ ವಿರೋಧಿಗಳೂ, ತಂತ್ರಜ್ಞಾನ ಪ್ರೇಮಿಗಳಾಗುವಷ್ಟು ಅದರ ಕೈಚಳಕ ಮೂಗಿನ ಮೇಲೆ ಬೆರಳಿಡುವಷ್ಟು ಅಪಾರ. ನಾವು ಹೋಗಬೇಕೆಂದಿರುವ ಕಡೆ ದಾರಿ ತೋರಿಸುವುದನ್ನಷ್ಟೇ ಮಾಡದೆ ನಾವೆಲ್ಲಿ ಹೋಗಬೇಕೆಂಬುದನ್ನು ಅದೇ ನಿರ್ಧರಿಸುವಂತಾಗಿ ಬಿಟ್ಟರೆ?!

ಸ್ವಲ್ಪ ನಿಧಾನಿಸೋಣ. ವಿವೇಚನೆಯಿಂದ ಗೂಗಲ್ ಮ್ಯಾಪ್ ಉಪಯೋಗಿಸೋಣ. ಜನರು ಕಂಡರೆ, ಅವರೂ ಗೂಗಲ್‌ಮ್ಯಾಪ್ ಹಿಡಿದೇ ತೋರಿಸಿದರೂ ಪರವಾಗಿಲ್ಲ, 'ಹಲೋ' 'ನಮಸ್ಕಾರ' ಎಂದು ಹೇಳಿ ದಾರಿ ಕೇಳುವ ಮಜಾ ಕಳೆದುಕೊಳ್ಳದಿರೋಣ. ❖

**ಮೊದಲ ಓದು**

## ಕಾಲದ ತೋಟದಲ್ಲಿ ಬಿಚ್ಚಿಕೊಂಡ ಸ್ಮೃತಿಕೋಶ

**'ಕಾಲಕೋಶ'** ಶಶಿಧರ ಹಾಲಾಡಿ ಅವರ ಮೊದಲ ಕಾದಂಬರಿ. ರಚನೆಯಾಗಿ ಹತ್ತು ವರ್ಷಗಳ ಕಾಲ ಕಾಲಕೋಶದಲ್ಲಿಯೇ ಕಾವು ಪಡೆಯುತ್ತಿದ್ದ ಈ ಕಾದಂಬರಿ ಈಗ ಮತ್ತೆ ಹೊಸ ಮೈ ಪಡೆದುಕೊಂಡು ಪ್ರಕಟವಾಗಿರುವುದಕ್ಕೂ, ಈ ಕಾದಂಬರಿಯಲ್ಲಿ ಮುಖ್ಯ ಕಥನದ ಎಳೆಗಳೂ ಫ್ಲಾಷ್‌ಬ್ಯಾಕ್‌ನಲ್ಲಿಯೇ ಬಿಚ್ಚಿಕೊಳ್ಳುವುದಕ್ಕೂ ಕಾಣುವ ಸಂಬಂಧ ಕಾಕತಾಳೀಯವೇ ಇರಬಹುದು.

ಕರ್ನಾಟಕದ ಹಳ್ಳಿಯೊಂದರ ಹುಡುಗ ಬ್ಯಾಂಕ್ ಉದ್ಯೋಗದ ನಿಮಿತ್ತ ದೆಹಲಿಗೆ ತೆರಳುತ್ತಾನೆ. ಅಲ್ಲಿ ಅವನ ಒಡನಾಟಕ್ಕೆ ಬರುವ ಒಂದು ಸಿಖ್ ಕುಟುಂಬ ಮತ್ತು ಇನ್ನೊಂದು ಮಹಾರಾಷ್ಟ್ರದ ಹಿಂದೂ ಕುಟುಂಬದ ಮೂಲಕ ಈ ಕಥನ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ.

1947ರಿಂದ 1984ರವರೆಗಿನ ಕಾಲಾವಧಿಯಲ್ಲಿ ಈ ಕಾದಂಬರಿ ವರ್ತಮಾನದಿಂದ ಭೂತಕಾಲಕ್ಕೂ ಮತ್ತೆ ವರ್ತಮಾನಕ್ಕೂ ಜಿಗಿದಾಡುತ್ತ ಬೆಳೆಯುತ್ತದೆ.

1947ರಲ್ಲಿ ದೇಶ ವಿಭಜನೆಯ ಸಂದರ್ಭದಲ್ಲಿ ನಡೆದ ಹಿಂಸಾಕಾಂಡ, ನಂತರ ಗಾಂಧೀಜಿ ಹತ್ಯೆಯಾದಾಗ ದೇಶದಾದ್ಯಂತ ನಡೆದ ಹಿಂಸೆ ಮತ್ತು ಇಂದಿರಾ ಗಾಂಧಿ ಹತ್ಯೆಯಾದಾಗ ಸಿಖ್ಖರ ಮೇಲೆ ನಡೆದ ಹಿಂಸೆ -ಇವು ಈ ದೇಶದ ಚರಿತ್ರೆಯಲ್ಲಿ ಶಾಶ್ವತವಾಗಿ ಉಳಿದ ಕಪ್ಪುಚುಕ್ಕೆಗಳು. ಆ ಹಿಂಸೆಯ ಹಿಂದಿನ ಮನಸ್ಥಿತಿಗಳ ವಿವಿಧ ರೂಪಗಳೇ ಮಾರುವೇಷ ತೊಟ್ಟು ಇನ್ನಷ್ಟು ವಿಕಾರಗೊಂಡು ಇಂದಿಗೂ ನಮ್ಮ ನಡುವೆ ನಖದಂತಗಳನ್ನು ಝಳಪಿಸುತ್ತಲೇ ಇವೆ.

ಹಾಲಾಡಿ ಅವರ ಕಾದಂಬರಿ ಈ ಮೂರು ಮುಖ್ಯ ವಿದ್ಯಮಾನಗಳನ್ನು ಒಳಗೊಂಡಿದೆ. ಈ ಪ್ರಯತ್ನವೇ ಕುತೂಹಲ ಹುಟ್ಟಿಸುವಂತಿದೆ. ಆದರೆ ಈ ವಿದ್ಯಮಾನಗಳು, ಅದರ ಪರಿಣಾಮಗಳು ಉಂಟುಮಾಡುವ ತಲ್ಲಣಗಳು ಸೇರಿ ಒಂದು ಕಥನ ವಾತಾವರಣ ನಿರ್ಮಾಣವಾಗಿಲ್ಲ ಎಂಬುದು ಈ ಕಾದಂಬರಿಯ ಮಿತಿ. ಬಹುತೇಕ ಭೂತಕಾಲದಲ್ಲಿಯೇ ನಡೆಯುವ ಕತೆ ಮತ್ತು ನಿರೂಪಣೆಯಲ್ಲಿ ಇರುವ ವರದಿಯ ಗುಣವೇ ಇದಕ್ಕೆ ಕಾರಣವಾಗಿರಲೂಬಹುದು. ತಾನು ಕೇಳಿದ ಅಥವಾ ತಿಳಿದುಕೊಂಡ ಮಾಹಿತಿಯನ್ನು ಪರೋಕ್ಷವಾಗಿ ದಾಖಲಿಸುವ ದಾರಿಯಾಗಿ ಕಾದಂಬರಿ ಪ್ರಕಾರ ಲೇಖಕನಿಗೆ ಸಿಕ್ಕಿದೆ. ಹಾಗಾಗಿ ಮಾಹಿತಿಯ ಆಚೆಯ ಜೀವನದೃಷ್ಟಿ, ಅದನ್ನು ಕಾಡುವ ಹಾಗೆ ಕಟ್ಟಿಕೊಡುವ ಭಿತ್ತಿ ಇದಕ್ಕೆ ಸಿಕ್ಕಿಲ್ಲ. ಆದರೆ ಚರಿತ್ರೆಯಲ್ಲಿ ಘಟಿಸಿದ ಹಿಂಸೆಯ ನಾನಾ ಮುಖಗಳನ್ನು ದಾಖಲಿಸುವ ಪ್ರಯತ್ನವಾಗಿ ಈ ಕಾದಂಬರಿಯನ್ನು ಓದಿಕೊಳ್ಳಬಹುದು. ❖

**ಕಾಲಕೋಶ (ಕಾದಂಬರಿ)**
ಲೇ: ಶಶಿಧರ ಹಾಲಾಡಿ
ಪ್ರ: ಅಂಕಿತ ಪುಸ್ತಕ
ಸಂ: 080 26617100/755
ಜಾಲತಾಣ: www.ankitapustaka.com
ಪು: 160
₹160

## ಸರ್ಕಾರಿ ಶಾಲೆಗಳತ್ತ ಉಕ್ಕುವ ಪ್ರೀತಿ

**ಖಾಸಗಿ ಶಾಲೆಗಳು** ಮತ್ತು ಸರ್ಕಾರಿ ಶಾಲೆಗಳ ನಡುವೆ ದೊಡ್ಡ ಕಂದರವೇ ನಿರ್ಮಾಣಗೊಂಡ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಈ ಕಂದರ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಹೋಗುತ್ತಿರುವುದು ಒಂದು ವಿದ್ಯಮಾನವಷ್ಟೇ ಅಲ್ಲ, ಅದು ಭವಿಷ್ಯದ ಬಹುದೊಡ್ಡ ಸಂಕಷ್ಟದ ಸೂಚನೆಯೂ ಹೌದು, ಸಾಮಾಜಿಕ ಅಸಮಾನತೆ, ಆರ್ಥಿಕ ಅಸಮಾನತೆ, ಸಾಮುದಾಯಿಕ ಪ್ರಜ್ಞೆ ಹೀಗೆ ಈ ಸಮಸ್ಯೆಗೆ ಹಲವು ಮುಖಗಳಿವೆ.

'ಸರ್ಕಾರಿ ಶಾಲೆಯಲ್ಲಿ ಒಳ್ಳೆಯ ಶಿಕ್ಷಣ ಸಿಗುವುದಿಲ್ಲ' ಎನ್ನುವುದು ಬಹುತೇಕ ಎಲ್ಲರ ಆರೋಪ. ಈ ಆರೋಪಕ್ಕೆ ಉತ್ತರರೂಪದಂತೆ ಎಸ್. ಗಿರಿಧರ್ ಅವರ ಈ ಪುಸ್ತಕವನ್ನು ಓದಿಕೊಳ್ಳಬೇಕು. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುವ ಗಿರಿಧರ್ ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಆರಂಭಿಕ ಸದಸ್ಯರೂ ಹೌದು. ದೇಶದಾದ್ಯಂತ ಬೇರೆ ಬೇರೆ ಭಾಗಗಳಲ್ಲಿ, ಸರ್ಕಾರಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಅಸಾಧಾರಣ ಶಿಕ್ಷಕರ ಹಲವು ಮಾದರಿಗಳನ್ನು ನಮ್ಮೆದುರಿಗಿಡುವ ಈ ಪುಸ್ತಕ, ದಂತಗೋಪುರದಲ್ಲಿ ಕೂತು ಬರೆದ ಕೃತಿಯಲ್ಲ. ಬದಲಿಗೆ ಸ್ವತಃ ಆ ಪ್ರದೇಶಕ್ಕೆ ತೆರಳಿ, ಆ ಶಾಲೆಗಳ ಶಿಕ್ಷಕರು, ಮಕ್ಕಳು ಸುತ್ತಲಿನ ಸಮುದಾಯಗಳ ಜೊತೆ ಒಡನಾಡಿ, ಅವರ ಅನುಭವಗಳನ್ನು ಕೇಳಿ, ಪರಿಣಾಮಗಳನ್ನು ಸ್ವತಃ ಅಧ್ಯಯನ ಮಾಡಿ ಬರೆದ ಪುಸ್ತಕ. ಹಾಗಾಗಿ ಇದಕ್ಕೊಂದು ಅಧಿಕೃತ ಛಾಪಿದೆ.

ಯಾದಗಿರಿಯ ಯಾವುದೋ ಹಳ್ಳಿಯಲ್ಲಿನ ಶಾಲೆಯಿಂದ ಹಿಡಿದು ರಾಜಸ್ಥಾನ, ಉತ್ತರಾಖಂಡಗಳ ಹಲವು ಶಾಲೆಗಳಲ್ಲಿ, ಮಕ್ಕಳ ಅಭ್ಯುದಯಕ್ಕೆ ಅವಿರತವಾಗಿ ಶ್ರಮಿಸುತ್ತಿರುವ ಹಲವು ಶಿಕ್ಷಕರ ಸಾಧನೆಯ ಪರಿಚಯ ಇಲ್ಲಿದೆ. ಇದು ಶಿಕ್ಷಕರ ಕುರಿತಾಗಿಯಷ್ಟೇ ಅಲ್ಲದೆ, ಅವರು ಸರ್ಕಾರಿ ಶಾಲೆಯ ಜೊತೆ ಸಮುದಾಯದ ಸಂಬಂಧವನ್ನು ಬೆಸೆಯಲು, ಮಕ್ಕಳನ್ನು ಶಾಲೆಯತ್ತ ಸೆಳೆಯಲು, ಭಾರವಾಗದ ಹಾಗೆ ಪಾಠವನ್ನು ಮಾಡಲು, ಕ್ರೀಡೆಗಳಲ್ಲಿ ತೊಡಗಿಕೊಳ್ಳಲು ಅನುಸರಿಸಿದ ಹಲವು ಯಶಸ್ವಿ ಮಾದರಿಗಳ ಪರಿಚಯವೂ ಇದೆ. ಹಾಗಾಗಿ ಇದನ್ನು ಶಿಕ್ಷಕರ ಶಿಕ್ಷಣದ ಒಂದು ಕೈಪಿಡಿಯಾಗಿಯೂ ನೋಡಬಹುದು. ❖



ಪು: 240
₹

ರಂಗದ ಮೇಲೊಂದು ಅಭಿವ್ಯಕ್ತಿ ಸಂಪಾಜೆ ಶೀನಪ್ಪ ರೈ

# ಹೆಜ್ಜೆ ಉಳಿಸಿಹೋದ ‘ರಂಗ ರಾಕ್ಷಸ’

**ರಂಗಸ್ಥಳದಲ್ಲಿ ಮಿಂಚಿ ರಾತ್ರಿಯೆಲ್ಲಾ ನಿದ್ದೆಗೆಡಿಸಿದ್ದ ‘ರಾಕ್ಷಸ’ ಸಂಪಾಜೆ ಶೀನಪ್ಪ ರೈ. ರಾಕ್ಷಸನೂ ಪ್ರೇಕ್ಷಕನ ಕಣ್ಣಲ್ಲಿ ಕಾಡುವ ಪ್ರಧಾನ ಪಾತ್ರವಾಗಿ ಗೋಚರಿಸುವಂತೆ ರೂಪಿಸಿದ ಶಕ್ತಿ ಅವರದ್ದು. ಅಂಥ ‘ರಂಗ ರಾಕ್ಷಸ’ ಅಬ್ಬರ ಮುಗಿಸಿ ಸದ್ದಿಲ್ಲದೇ ಗೆಜ್ಜೆ ಬಿಚ್ಚಿಟ್ಟು ಇಹದ ಹೆಜ್ಜೆ ಮುಗಿಸಿದ್ದಾರೆ. ರಂಗಸ್ಥಳದ ರಾಕ್ಷಸನ ಜಾಗ ಖಾಲಿಯಾಗಿದೆ. ಯಕ್ಷ ಲೋಕದ ದೇವೇಂದ್ರ, ಅರ್ಜುನ, ಭೀಮ, ತಾಮ್ರಧ್ವಜರೂ... ಮೌನವಾಗಿದ್ದಾರೆ**

ನಾ. ಕಾರಂತ ಪೆರಾಜೆ

ಸಂಪಾಜೆ ಶೀನಪ್ಪ ರೈ – ತೆಂಕುತಿಟ್ಟು ಯಕ್ಷಗಾನದ ಕಲಾವಿದ. ವಿವಿಧ ಮೇಳಗಳಲ್ಲಿ ಆರು ದಶಕಕ್ಕೂ ಮಿಕ್ಕಿದ ವ್ಯವಸಾಯ. ಸುಳ್ಯ ತಾಲ್ಲೂಕು ಸಂಪಾಜೆ ಕೀಲಾರು-ಮದೇಪಾಲು ಹುಟ್ಟೂರು. 1943ರಲ್ಲಿ ಜನನ. ತಂದೆ ರಾಮಣ್ಣ ರೈ. ತಾಯಿ ಕಾವೇರಿ ರೈ. ಓದಿದ್ದು ನಾಲ್ಕನೇ ತರಗತಿ. ದಿ.ಕುಂಬಳೆ ಕಣ್ಣನ್ ಅವರಿಂದ ನಾಟ್ಯಾಭ್ಯಾಸ. ಅರ್ಥಗಾರಿಕೆಗೆ ತಂದೆ ಗುರು. ಮಾ. ಕೇಶವರಿಂದ ಭರತನಾಟ್ಯಾಭ್ಯಾಸ. ಬಣ್ಣದ ಕುಟ್ಯಪ್ಪು ಅವರಿಂದ ಬಣ್ಣಗಾರಿಕೆಯ ಕಲಿಕೆ. ಹದಿಮೂರನೇ ವರುಷದಲ್ಲಿ ರಂಗಪ್ರವೇಶ. ಬಹುಶಃ ಸಂಪಾಜೆಯವರನ್ನು ಓರ್ವ ವ್ಯಕ್ತಿಯಾಗಿ ಪರಿಚಯಿಸಲು ಇಷ್ಟು ಬಯೋಡೇಟಾ ಸಾಕಾಗಬಹುದು.

ಕಲಾವಿದನೂ ಓರ್ವ ವ್ಯಕ್ತಿ. ಆ ವ್ಯಕ್ತಿಯೊಳಗೆ ವೃತ್ತಿಬದ್ಧತೆಯು ಸಾಧನೆಯ ರೂಪದಲ್ಲಿ ಅವಿತುಕೊಂಡಿರುತ್ತದೆ. ಅದು ರಂಗದಲ್ಲಿ ಅನಾವರಣಗೊಂಡಾಗ ವಿಸ್ಮಯದಂತೆ ಗೋಚರವಾಗುತ್ತದೆ. ಶೀನಪ್ಪ ರೈಗಳ ಹೆಸರನ್ನು ನೆನಪಿಸಿಕೊಂಡರೆ ಅವರು ಕಡೆದ ಪಾತ್ರಶಿಲ್ಪಗಳೆಲ್ಲವೂ ಕಣ್ಣೆದುರು ಹೆಜ್ಜೆ ಹಾಕುತ್ತವೆ. ಅವುಗಳು ‘ವಿಸ್ಮಯ’ವನ್ನು ಸೃಷ್ಟಿಸಿದ ದಿನಮಾನಗಳಿದ್ದುವು. ಈಗದು ಇತಿಹಾಸ. 2021 ಜುಲೈ 13ರಂದು ಶೀನಪ್ಪ ರೈಗಳು (78) ವಿಧಿವಶರಾದರು.

ಎಪ್ಪತ್ತೆಂಟರಲ್ಲಿ ಅರುವತ್ತಕ್ಕೂ ಮಿಕ್ಕಿದ ವರುಷಗಳನ್ನು ರಂಗದಲ್ಲಿ ಕಳೆದರು. ಯಕ್ಷರಾತ್ರಿಗಳು ಅವರ ನಿದ್ದೆಗೆಡಿಸಲಿಲ್ಲ! ಕೃಷಿಯೊಂದಿಗೆ ಯಕ್ಷಗಾನ ಹೊಟ್ಟಪಾಡಿನ ಕ್ಷೇತ್ರವಾದರೂ ಪೂರ್ಣ ತೃಪ್ತಿಯಿಂದ ಇಷ್ಟು ದೀರ್ಘಕಾಲ ವ್ಯವಸಾಯ ಮಾಡಿದವರಲ್ಲಿ ಮೊದಲಿಗರೆಂದರೆ ಅತಿಶಯ ಅಲ್ಲ. ಅರುವತ್ತು-ಎಪ್ಪತ್ತರ ಕಾಲಘಟ್ಟದ ಮಹಾನ್ ಕಲಾವಿದರ ಗರಡಿಯಲ್ಲಿ ಪಳಗಿದ್ದರು. ಐದಾರು ದಶಕಗಳ ಕಲಾಯಾನದ ಕೊಂಡಿಯಾಗಿ, ಆಗಿನ ಜ್ಞಾನವನ್ನೂ ಈಗಿನದನ್ನೂ ಮಿಳಿತಗೊಳಿಸುತ್ತಾ ಇಳಿ ವಯಸ್ಸಿನವರೆಗೂ ರಂಗಕಸುಬನ್ನು ನಿರ್ವಹಿಸುತ್ತಾ ಬಂದಿದ್ದರು.

ಮೂರು ದಶಕಗಳ ಹಿಂದೆ ‘ಹಿರಣ್ಯಾಕ್ಷ ವಧೆ’ ಪ್ರಸಂಗದ ಜೋಡಾಟ ನೋಡಿದ ನೆನಪಿನ್ನೂ ಹಸಿಯಾಗಿದೆ. ಒಂದು ರಂಗದಲ್ಲಿ ಸಂಪಾಜೆಯವರ ಹಿರಣ್ಯಾಕ್ಷ, ಇನ್ನೊಂದರಲ್ಲಿ ಸೂರಿಕುಮೇರು ಗೋವಿಂದ ಭಟ್. ಇಬ್ಬರೂ ಸರಿಸಮಾನರು. ಇಬ್ಬರ ನಡೆಯಲ್ಲೂ ಎರಕ. ಶಾರೀರದಲ್ಲೂ ಪೈಪೋಟಿ. ರಂಗಚಲನೆಯಲ್ಲಿ ಸ್ಪರ್ಧೆ. ಎರಡೂ ಪಾತ್ರಗಳು ಒಂದೇ ಸರಳರೇಖೆಯಲ್ಲಿ ಓಡಾಡಿದ ಅನುಭವ. ಜೋಡಾಟ ಮುಗಿದ ಬಳಿಕ ಎರಡೂ ಪಾತ್ರಗಳು ಪ್ರೇಕ್ಷಕರನ್ನು ಹಿಡಿದಿಟ್ಟಿದ್ದುವು. ಪಾತ್ರ ಪರಿಣಾಮದ ಕುರಿತು ಎಚ್ಚರ ಮತ್ತು ಪಾತ್ರಗಳು ಎಲ್ಲೂ ಸೋಲಬಾರದೆನ್ನುವ ಬೌದ್ಧಿಕ ಪಕ್ವತೆ ಇಬ್ಬರಲ್ಲೂ ಇದ್ದುವು. ಹಾಗಾಗಿ ಕಾಲು ಶತಮಾನದ ಬಳಿಕವೂ ಆ ಪ್ರದರ್ಶನವು ನೆನಪಿನಿಂದ ಮಾಸಿಲ್ಲ.

ಇರಾ ಸೋಮನಾಥೇಶ್ವರ ಮೇಳದಿಂದ(ಕುಂಡಾವು ಮೇಳ) ಗೆಜ್ಜೆಯ ಹೆಜ್ಜೆಗೆ ಶ್ರೀಕಾರ. ಹನುಮಗಿರಿ ಶ್ರೀಕೋದಂಡರಾಮ ಮೇಳದಲ್ಲಿ ಗೆಜ್ಜೆ ಬಿಚ್ಚಿದರು. ಈ ಎರಡು ವೃತ್ತಿ ಧ್ರುವಗಳ ಮಧ್ಯೆ ವೇಣೂರು, ಇರುವೈಲು, ಸೌಕೂರು, ಚೌಡೇಶ್ವರಿ, ಕಟೀಲು, ಎಡನೀರು, ಹೊಸನಗರ ಮೇಳಗಳಲ್ಲಿ ವ್ಯವಸಾಯ ಪೂರೈಸಿದ ಶೀನಪ್ಪ ರೈಗಳು ಕಟೀಲು ಮೇಳವೊಂದರಲ್ಲೇ ಮೂವತ್ತಮೂರು ವರ್ಷ ದೀರ್ಘ ದುಡಿದರು.

ಒಂದು ಕಾಲಘಟ್ಟದ ರಂಗದಲ್ಲಿ ಹಿರಣ್ಯಾಕ್ಷ, ಇಂದ್ರಜಿತು, ರಕ್ತಬೀಜ, ಭಾನುಗೋಪ, ಕಾರ್ತವೀರ್ಯ, ಅರುಣಾಸುರ’ ಪಾತ್ರಾಭಿವ್ಯಕ್ತಿಗಳು ವಿಸ್ಮಯ! ಪಾತ್ರಗಳ ಜೀವನಾಡಿಯ ಸ್ಪಷ್ಟತೆಯ ಅರಿವು, ಯಕ್ಷಗಾನದ ಚೌಕಟ್ಟು ಹಾಗೂ ನಡೆಯ ಎಚ್ಚರ, ಪಾತ್ರವೊಂದರ ಪ್ರವೇಶದ ನಂತರದ ಒಂದೊಂದು ಸನ್ನಿವೇಶದಲ್ಲೂ ಏರಿಕೊಂಡು ಹೋಗುವ ಅಭಿವ್ಯಕ್ತಿ ವ್ಯತ್ಯಾಸಗಳು, ರಾಕ್ಷಸ ಪಾತ್ರಗಳ ವ್ಯಕ್ತಿತ್ವಗಳ ಅನಾವರಣವನ್ನು ರೈಗಳ ಪಾತ್ರ ನಿರ್ವಹಣೆಯಲ್ಲಿ ಕಾಣಬಹುದು.

ದೇವೇಂದ್ರ, ಅರ್ಜುನ, ಕರ್ಣ, ದಕ್ಷ, ಕೌಂಡ್ಲಿಕ, ಭಾನುಗೋಪ, ಶಿಶುಪಾಲ, ಭೀಮ, ವೀರಮಣಿ, ತಾಮ್ರಧ್ವಜ, ಮಕರಾಕ್ಷ.. ಪಾತ್ರಗಳಲ್ಲಿ ಸ್ವಂತಿಕೆಯ ಸಂಪನ್ಮೂಲಗಳಿದ್ದುವು.

ಎಲ್ಲಾ ವಿಧದ ಕಿರೀಟ ವೇಷಗಳನ್ನು ಪಾತ್ರದ ಸ್ವಭಾವದಂತೆ ಚಿತ್ರಿಸುವುದು ವಿಶೇಷ. ಹೆಚ್ಚು ರಂಗಜಾಣ್ಮೆ ಬೇಕಾದ ಕಿರಾತಾರ್ಜುನ ಪ್ರಸಂಗದ ಅರ್ಜುನ, ತಾಮ್ರಧ್ವಜ ಕಾಳಗದ ತಾಮ್ರಧ್ವಜ.. ಮೊದಲಾದುವು ಅನನ್ಯ. ಸಹ ಕಲಾವಿದರು ಹೊಂತಕಾರಿಗಳಾದರೆ ಅವರ ರಂಗಕ್ರಿಯೆಗೆ ತೊಡಕಾಗದಂತೆ ಎಚ್ಚರ. ಕೆಲವೊಮ್ಮೆ ಅಂತಹ ಸಂದರ್ಭ ಬಂದಾಗ ಅವರ ವಯಸ್ಸು ಹಿಂದಕ್ಕೋಡುತ್ತಿತ್ತು. ಪಾತ್ರ ಪ್ರವೇಶದಲ್ಲೇ ಅನಾವರಣಗೊಳ್ಳುವ ಗಂಡುಗತ್ತಿನ ಹೆಜ್ಜೆಗಳು. ಪಾತ್ರವಾಗಿ ತಾನೇನು ಮಾಡುತ್ತೇನೆ ಮತ್ತು ತಾನೇನು ಮಾಡಬೇಕು ಎಂಬ ಎಚ್ಚರ ಅವರಿಗೆ ತಾರಾಮೌಲ್ಯ ತಂದು ಕೊಟ್ಟಿತು. ಎಪ್ಪತ್ತೈದು ವರುಷದ ತನಕವೂ ಶೀನಪ್ಪರು ವೇಷ ಹಾಕಿದ್ದಾರೆ. ಕೊನೆ ಕೊನೆಗೆ ಹನುಮಗಿರಿ ಮೇಳದಲ್ಲಿ ಹೆಚ್ಚು ತನುಶ್ರಮವಿಲ್ಲದ ಪಾತ್ರಗಳನ್ನು ಮಾಡುತ್ತಿದ್ದರು. ಇವರ ವಯೋಸಹಜ ಅಶಕ್ತಿ ಹಾಗೂ ಅಭಿಮಾನದಿಂದ ಮೇಳದ ಯಜಮಾನರು ಅವಕಾಶ ನೀಡಿದ್ದರು. ಚಿಕ್ಕ ಪಾತ್ರವಾದರೂ ತಿರುಗಾಟದ ಪಕ್ವತೆಯು ರಂಗಚಲನೆಯಲ್ಲಿ ಗೋಚರವಾಗುತ್ತಿತ್ತು. ಮೊದಲಿನ ಹೊಂತಕಾರಿ ಬಲುಮೆ ಇಲ್ಲದಿದ್ದರೂ ಪಾತ್ರಸ್ವಭಾವ, ಅಭಿವ್ಯಕ್ತಿಯಲ್ಲಿ ಹೊಂತಕಾರಿ ಭಾವ ಇಣುಕುತ್ತಲೇ ಇರುತ್ತಿತ್ತು. ಅವರು ಮೂಡಿಸಿದ ಗತ್ತುಗಳಲ್ಲಿ ಏರು ಜವ್ವನವನ್ನು ಕಾಣಬಹುದಾಗಿತ್ತು.

ಮುಖ್ಯವಾಗಿ ಗಮನಿಸಬೇಕಾದ್ದು ಅವರಲ್ಲಿ ಪ್ರತ್ಯೇಕ ಗುಣವಾಗಿ ಎದ್ದುಕಾಣುವ ಸಜ್ಜನಿಕೆ, ಸರಳತೆ. ಬಾಗುವ ಗುಣ. ಬೀಗದ ವ್ಯಕ್ತಿತ್ವ. ಕಲಾವಿದರನೇಕರಲ್ಲಿ ಇನ್ನೂ ಪಕ್ವಗೊಳ್ಳಬೇಕಾದ ಈ ಎರಡು ಗುಣಗಳು ಶೀನಪ್ಪ ರೈಗಳಲ್ಲಿ ಸ್ವಭಾವವಾಗಿ ಎತ್ತರಕ್ಕೇರಿಸಿವೆ. ಮಾತನಾಡುವ ವ್ಯಕ್ತಿ ಮತ್ತು ತಾನು ಮಾನಸಿಕವಾಗಿ ಎಷ್ಟು ಅಂತರದಲ್ಲಿರಬೇಕು ಎನ್ನುವ ಮಾಪಕ ಇದೆಯಲ್ಲಾ ಅದು ಬದುಕು ಕಲಿಸಿದ ಬದುಕಿನ ಪಾಠ. ‘ವಿದ್ಯೆಗೆ ವಿನಯವೇ ಭೂಷಣ’ - ಹಿರಿಯರ ಮಾತು ರೈಗಳಲ್ಲಿ ಸಾಕಾರಗೊಂಡಿತ್ತು.

ಶೀನಪ್ಪ ರೈಗಳ ರಂಗಕಸುಬಿನುದ್ದಕ್ಕೂ ಪ್ರೇಕ್ಷಕರನ್ನು ಮೆಚ್ಚಿಸುವ ‘ಗಿಮಿಕ್’ಗಳಿದ್ದಿರಲಿಲ್ಲ. ಹಿಂದೊಮ್ಮೆ ಅವರನ್ನು ಪ್ರಶ್ನಿಸಿದ್ದೆ. ‘ನಿಮ್ಮ ಪಾತ್ರಗಳಲ್ಲಿ ಯಾಕೆ ಗಿಮಿಕ್‌ಗಳಿಲ್ಲ?’ ಅದಕ್ಕವರು, ‘ಗಿಮಿಕ್ ಮಾಡಲು ಯಕ್ಷಗಾನ ಯಾಕೆ. ಸರ್ಕಸ್ ಕಂಪೆನಿ ಇಲ್ಲಾ. ಅದೂ ಕಲೆಯಲ್ಲಾ. ಕಲೆಗೆ ಗೌರವ ಕೊಡುವುದನ್ನು ಕಲಾವಿದ ಮೊದಲು ರೂಢಿಸಿಕೊಳ್ಳಬೇಕು. ಮತ್ತೆಲ್ಲಾ ನಂತರ’ ಎಂದು ಖಡಕ್ಕಾಗಿ ಉತ್ತರಿಸಿದ್ದರು. ಆ ಪ್ರಶ್ನೆಯು ಸ್ವಲ್ಪ ಹೊತ್ತು ಅವರ ಚಿತ್ತವನ್ನು ಕದಡಿತ್ತು. ‘ಯಕ್ಷಗಾನದಲ್ಲಿ ಗಿಮಿಕ್‌ಗಳಿಲ್ಲ. ಪಾತ್ರಕ್ಕೆ ಸೀಮಿತವಾದ ನಡೆಯಿದೆ. ಅದೇ ಯಕ್ಷಗಾನ. ಅದರಲ್ಲಿ ಸಾಧನೆ ತೋರಿಸಿ. ಅದು ಕಲಾವಿದನಾದವನು ಯಕ್ಷಗಾನಕ್ಕೆ ಸಲ್ಲಿಸುವ ಗೌರವ’ ಎಂದು ಹೇಳಿದ್ದರು. ‘ಯಕ್ಷಗಾನ ರಂಗದಲ್ಲಿ ನನ್ನ ಬೆಳವಣಿಗೆಯ ಯಶಸ್ಸು ಕೀರ್ತಿಶೇಷ ಕೀಲಾರು ಗೋಪಾಲಕೃಷ್ಣಯ್ಯರಿಗೆ ಸಲ್ಲಬೇಕು. ಮಗುವಿನಂತೆ ನೋಡಿಕೊಂಡಿದ್ದಾರೆ. ನನ್ನ ಏಳ್ಗೆಯ ಶಿಲ್ಪಿ ಅವರು’ ಎಂದು ವಿನೀತವಾಗಿ ಒಮ್ಮೆ ಹೇಳಿಕೊಂಡಿದ್ದರು. ಸಾಗಿ ಬಂದ ಪಥವನ್ನು ಮರೆಯದ ಸಜ್ಜನಿಕೆಯು ಅವರಲ್ಲಿ ವಿನೀತತೆಯನ್ನು ಹುಟ್ಟು ಹಾಕಿತ್ತು. ಅಹಂಕಾರವನ್ನು ಹೊಸಕಿ ಹಾಕಿತ್ತು. ಸಮಾಜ, ಕಲೆ ಮತ್ತು ಇವುಗಳಿಂದ ನಾವು ಪಡೆದ ಸಂಸ್ಕಾರ – ಇವಿಷ್ಟು ವ್ಯಕ್ತಿಯೊಬ್ಬನ ಉತ್ಕರ್ಷಕ್ಕೆ ಸಹಕಾರಿಯಾಗುತ್ತವೆ. ಮಡದಿ ಗಿರಿಜಾವತಿ. ಜಯರಾಮ, ರೇವತಿ, ರಾಜು ಮಕ್ಕಳು. ಬದುಕಿನ ಉತ್ತರಾರ್ಧದಲ್ಲಿ ಸುರತ್ಕಲ್ಲಿನಲ್ಲಿ ನೆಲೆಸಿದ್ದರು. ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಬಹುತೇಕ ಪ್ರತಿಷ್ಠಿತ ಪ್ರಶಸ್ತಿಗಳಿಂದ ಪುರಸ್ಕೃತರು. ವ್ಯಕ್ತಿಯಾಗಿಯೂ, ಯಕ್ಷಗಾನ ಕಲಾವಿದನಾಗಿಯೂ ಬಹುಮಾನ್ಯರಾಗಿದ್ದ ಶೀನಪ್ಪ ರೈಗಳಿಗೆ ಅಕ್ಷರ ನಮನ.



ಸಂಪಾಜೆ ಶೀನಪ್ಪ ರೈ

ನೆನಪು

ಪ್ರಜಾವಾಣಿ
ದೀಪಾವಳಿ ವಿಶೇಷಾಂಕ 2021
ದೀಪಾವಳಿ ಕಥಾ-ಕವನ ಸ್ಪರ್ಧೆಯ ಪ್ರವೇಶಗಳಿಗೆ ಇದೋ ಆಹ್ವಾನ

ಕನ್ನಡ ಕಥಾ ಜಗತ್ತಿನ ನಾಡಿಮಿಡಿತ ಸಂಗ್ರಹ

ಸ್ಪರ್ಧೆಯ ನಿಯಮಗಳು
- ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ... ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು
- ಕಥೆಗೆ ಗರಿಷ್ಠ ಮಿತಿ – ಎರಡು ಸಾವಿರ ಪದಗಳು
- ಕಥೆ- ಕವನಗಳು ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಇಲ್ಲವೆ ಯೂನಿಕೋಡ್‌ನಲ್ಲಿ ಇರಬೇಕು
- ಕಥೆ/ ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ-ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು
- ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು
- ‘ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್’ನ ಸಿಬ್ಬಂದಿ ಹಾಗೂ ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಿಲ್ಲ.
- ಸ್ಪರ್ಧೆಗೆ ಕಳುಹಿಸಿರುವ ರಚನೆಗಳನ್ನು ಹಿಂದಿರುಗಿಸುವುದಿಲ್ಲ
- ಬಹುಮಾನಿತ ಕಥೆ, ಕವನಗಳನ್ನು ಯಾವುದೇ ಸ್ವರೂಪದಲ್ಲಿ ಯಾವಾಗ ಬೇಕಾದರೂ ಬಳಸುವ ಹಕ್ಕುಗಳನ್ನು ‘ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್’ ಕಾಯ್ದಿರಿಸಿಕೊಂಡಿದೆ
- ಸಂಪಾದಕರ ತೀರ್ಮಾನವೇ ಅಂತಿಮ
- ಇ-ಮೇಲ್: deepavali@prajavani.co.in

ಕಥಾ ಸ್ಪರ್ಧೆ
₹ 20,000 ಮೊದಲ ಬಹುಮಾನ ₹ 5,000
₹ 15,000 ಎರಡನೇ ಬಹುಮಾನ ₹ 3,000
₹ 10,000 ಮೂರನೇ ಬಹುಮಾನ ₹ 2,500
ಕವನ ಸ್ಪರ್ಧೆ

ಪ್ರವೇಶಗಳು ನಮಗೆ ತಲುಪಲು ಕೊನೆಯ ದಿನಾಂಕ ಆಗಸ್ಟ್ 14, 2021

ವಿಳಾಸ: ಸಂಪಾದಕರು, ದೀಪಾವಳಿ ವಿಶೇಷಾಂಕ ವಿಭಾಗ, ‘ಪ್ರಜಾವಾಣಿ’, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-560001

# ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ದಶ್ಮ ಚಕ್ಕ ಶೇಶ್ರಷ್ಟ ಕಥೆಯ
- ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

## ಗಣಿತದಲ್ಲಿ ಗರ್ದಿ ಗಮ್ಮತ್ತು

**ಟ್ರಿಕ್ ಟ್ರಿಕ್ ಗೆಳೆಯಾ**
**ಟ್ರಿಕ್ ಟ್ರಿಕ್ ಟ್ರಿಕ್ !**

ಮೊದಲು 2”X2” ಅಳತೆಯ ಬಿಲ್ಲೆಗಳನ್ನು ಕಾರ್ಡ್‌ಶೀಟ್‌ನಲ್ಲಿ ಕತ್ತರಿಸಿಟ್ಟುಕೊ. ಅವುಗಳ ಮೇಲೆ ಮುಂಭಾಗದಲ್ಲಿ 1 ಬರೆದರೆ ಅದೇ ಬಿಲ್ಲೆಯ ಹಿಂಭಾಗದಲ್ಲಿ 2 ಬರೆ. ಹೀಗೆ 1 ರಿಂದ 18 ರವರೆಗೆ ಸಂಖ್ಯೆ ಬರೆದಿಟ್ಟುಕೊ.

ಹೀಗೆ

| 2 ಹಿಂಭಾಗ | 4 ಹಿಂಭಾಗ | 6 ಹಿಂಭಾಗ |
|---|---|---|
| 1 | 3 | 5 |

- ಈಗ 9 ಕಾರ್ಡ್‌ಗಳನ್ನು ನಿನ್ನ ಮನಸ್ಸಿಗೆ ಬಂದಂತೆ ಮಿಶ್ರಮಾಡು. ಅವುಗಳನ್ನು ನೆಲದ ಮೇಲೆ ಹರಡು. ಅವು ನನಗೆ ಕಾಣಿಸದಂತಿರಲಿ. ಈಗ ನೀನು ಮೇಲ್ಮುಖವಾಗಿ ಕಾಣುವ 9 ಸಂಖ್ಯೆಗಳಲ್ಲಿ ಎಷ್ಟು ಬೆಸ ಸಂಖ್ಯೆಗಳಿವೆ ಎಂಬುದನ್ನು ಹೇಳಿದರೆ ಸಾಕು. ನಾನು ಅರೆಕ್ಷಣದಲ್ಲಿ ಮೇಲ್ಮುಖವಾಗಿ ಕಾಣುವ ಒಟ್ಟು 9 ಸಂಖ್ಯೆಗಳ ಮೊತ್ತವನ್ನು ಹೇಳುತ್ತೇನೆ. ನೀನು ಕೂಡಿಸಿ ನೋಡಿದಾಗ ಉತ್ತರ ಸರಿಯಾಗಿರುತ್ತದೆ. ಇದು ಹೇಗೆ?

**ಹೀಗೆ; ಗುಟ್ಟು ರಟ್ಟು :**

- ನೀನು ಹೇಳಿದ ಬೆಸ ಸಂಖ್ಯೆಗಳ ಸಂಖ್ಯೆಯನ್ನು ಗುಟ್ಟಾಗಿ 90ರಲ್ಲಿ ಕಳೆದರೆ ಉತ್ತರ ಬರುತ್ತದೆ.

ಉದಾ: ಮೇಲ್ಮುಖವಾಗಿ ಕಾಣುವ 9 ಸಂಖ್ಯೆಗಳಲ್ಲಿ 3 ಬೆಸ ಸಂಖ್ಯೆಗಳಿವೆ ಎಂದರೆ **90-3 = 87** ಉತ್ತರ.

ನೀನು ಕೂಡಿಸಿದಾಗಲೂ 87 ಆಡಿ ನೋಡು.

## ಅದಲು ಬದಲು ಕಂಚೀ ಕದಲು...

**ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಿ.**

1. ಹೊಳೆಕಸ = _____
2. ಕಮರಿದ = _____
3. ರಹದಾರಿ = _____
4. ಹಿಟ್ಟುಪಡಿ = _____

## ಶಬ್ದಗಳಲ್ಲಿ ಸರಸ...

**ನನ್ನಯ ದಿನಚರಿ**

ಚುಮುಚುಮು ಎನ್ನುವ ಮೊದಲೆ ನಾನು
ಸರಸರ ಮೇಲಕೆ ಏಳುವೆನು
ಫಳಫಳ ಹೊಳೆಯುವ ಹಲ್ಲನು ಉಜ್ಜಿ
ಗಸಗಸ ಮೋರೆಯ ತೊಳೆಯುವೆನು
ಬರಬರ ಮೈಯನ್ನು ತೊಳೆಯುತ ನಾನು
ಗರಿಗರಿ ಬಟ್ಟೆಯ ಹಾಕುವೆನು
ಕುರುಕುರು ಎನ್ನುವ ತಿಂಡಿಯ ತಿಂದು
ನೊರೆನೊರೆ ಹಾಲನು ಕುಡಿಯುವೆನು
ಲುಟುಲುಟು ಹೆಜ್ಜೆಯ ಹಾಕುತ ನಾನು
ದಡದಡ ಶಾಲೆಗೆ ಹೋಗುವೆನು
ಪಟಪಟ ಲೆಕ್ಕವ ಮಾಡುತ್ತ ನಾನು
ಸಟಸಟ ಗುರುವಿಗೆ ತೋರುವೆನು
ಸರಿಸರಿ ಎನ್ನುತ ಮೆಚ್ಚಲು ಗುರುಗಳು
ಥಕ ಥಕ ನಾನು ಕುಣಿಯುವೆನು
ಢಣಢಣ ಗಂಟೆಯು ಬಾರಿಸಲಾಗ
ದುಡು ದುಡು ಮನೆಯನ್ನು ಸೇರುವೆನು
ಗುಡುಗುಡು ಸದ್ದನು ಮಾಡಲು ಮೋಡವು
ರಪರಪ ಮಳೆಯಲ್ಲಿ ನೆನೆಯುವೆನು
ತಪತಪ ತೊಯ್ದ ಬಟ್ಟೆಯ ಕಳೆದು
ಕಟಕಟ ರೊಟ್ಟಿಯ ತಿನ್ನುವೆನು

## ಟ್ವೆಂಟಿ – 20 ಮ್ಯಾಚ್

**ಎ ವಿಭಾಗ**

| | |
|---|---|
| 1. ನತ್ತು | ಅ) ಕೊರಳಾಭರಣ |
| 2. ಮುರು | ಬ) ಕೈಯಲ್ಲಿ ಧರಿಸುವ ಆಭರಣ |
| 3. ತೀಕಿ | ಕ) ಮೂಗಿನ ಆಭರಣ |
| 4. ತೋಡೆ | ಡ) ಕಿವಿಯ ಆಭರಣ |

**ಬಿ ವಿಭಾಗ**

| | |
|---|---|
| 1. ಡೊಳ್ಳು | ಅ) ತಂತು ವಾದ್ಯ |
| 2. ಸನಾದಿ | ಬ) ಉದಕ ವಾದ್ಯ |
| 3. ಪಿಟೀಲು | ಕ) ವಾಯುವಾದ್ಯ |
| 4. ಜಲತರಂಗ | ಡ) ಮರ್ದನ ವಾದ್ಯ |

**ಸಿ ವಿಭಾಗ**

| | |
|---|---|
| 1. ಆಣೆಕಲ್ಲು | ಅ) ಹಿರಿಯರು ಆಡುವ ಆಟ |
| 2. ಕಣ್ಣುಮುಚ್ಚಾಲೆ | ಬ) ಹುಡುಗರು ಆಡುವ ಆಟ |
| 3. ಹುಲಿ ಹಳ್ಳು | ಕ) ಹುಡುಗಿಯರು ಆಡುವ ಆಟ |
| 4. ತಿಳ್ಳಿ | ಡ) ಮಕ್ಕಳು ಆಡುವ ಆಟ |

**ಡಿ ವಿಭಾಗ**

| | |
|---|---|
| 1. ಕೊಣಬಿಗೆ | ಅ) ಊಟದ ತಟ್ಟೆ ಇಡುವ ಪೀಠ |
| 2. ನೆಲವು | ಬ) ರೊಟ್ಟಿ ಇಡುವ ಬುಟ್ಟಿ |
| 3. ಕೆರಸಿ | ಕ) ಹಿಟ್ಟು ನಾದುವ ಸಾಧನ |
| 4. ಅಡ್ಡಣಗಿ | ಡ) ಪಾತ್ರೆ-ಪಗಡೆ ಇಡುವ ಜಂತಿಗೆ ಕಟ್ಟಿದ ಸಾಧನ |

**ಇ ವಿಭಾಗ**

| | |
|---|---|
| 1. ಜತಿಗಿ | ಅ) ಎತ್ತಿಗೆ ಹಾಕುವ ಅರಿವೆ |
| 2. ಉದ್ದಗಿ | ಬ) ದನ ಕಟ್ಟುವ ಸ್ಥಳ |
| 3. ಹಕ್ಕಿ | ಕ) ಚಕ್ಕಡಿಯ ಒಂದು ಭಾಗ |
| 4. ಜೂಲ | ಡ) ಎತ್ತಿನ ಬಾಯಿಗೆ ಕಟ್ಟುವ ಸಾಧನ |

ಪ್ರತೀ ವಿಭಾಗದಲ್ಲೂ ಕೊಟ್ಟ 4 ಸಂಗತಿಗಳಿಗೆ ಮುಂದೆ ಕೊಟ್ಟ 4 ಉತ್ತರಗಳಲ್ಲಿ ಸರಿಯಾದುದನ

### ಭಾರತ–ಶ್ರೀಲಂಕಾ ಏಕದಿನ ಸರಣಿ; ದಸುನ್ ಬಳಗಕ್ಕೆ ಧವನ್ ಪಡೆ ಸವಾಲು

# ಯುವ ಆಟಗಾರರಿಗೆ ಪದಾರ್ಪಣೆ ಕನಸು

ಕೊಲಂಬೊ (ಪಿಟಿಐ): ಕರ್ನಾಟಕದ ಬ್ಯಾಟ್ಸ್‌ಮನ್ ದೇವದತ್ತ ಪಡಿಕ್ಕಲ್ ಮತ್ತು ಆಲ್‌ರೌಂಡರ್ ಕೃಷ್ಣಪ್ಪ ಗೌತಮ್ ಸೇರಿದಂತೆ ಆರು ಜನ ಯುವ ಆಟಗಾರರು ಪದಾರ್ಪಣೆಗಾಗಿ ಕಾದಿರುವ ಸೀಮಿತ ಓವರ್‌ಗಳ ಸರಣಿಯು ಭಾನುವಾರದಿಂದ ಆರಂಭವಾಗಲಿದೆ.

ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಶಿಖರ್ ಧವನ್ ನಾಯಕತ್ವದ ಭಾರತ ಮತ್ತು ಶ್ರೀಲಂಕಾ ತಂಡಗಳು ಮುಖಾಮುಖಿಯಾಗಲಿವೆ.

ಮೂರು ಏಕದಿನ ಪಂದ್ಯಗಳ ಈ ಸರಣಿಯ ನಂತರ ಟಿ20 ಕ್ರಿಕೆಟ್ ಸರಣಿಯೂ ನಡೆಯಲಿದೆ.

ಈ ಎರಡೂ ಸರಣಿಗಳಲ್ಲಿ ಸಿಗುವ ಅವಕಾಶದಲ್ಲಿ ಉತ್ತಮವಾಗಿ ಆಡಿ ಮುಂಬರುವ ಟ್ವೆಂಟಿ-20 ವಿಶ್ವಕಪ್ ಟೂರ್ನಿಯಲ್ಲಿ ಸ್ಥಾನ ಪಡೆಯುವತ್ತ ಯುವ ಪ್ರತಿಭೆಗಳು ಚಿತ್ತ ನೆಟ್ಟಿದ್ದಾರೆ.

ಇದೇ ಮೊದಲ ಬಾರಿಗೆ ಭಾರತದ ಎರಡನೇ ತಂಡವು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ತನ್ನ ಸಾಮರ್ಥ್ಯ ತೋರಲಿದೆ. ವಿರಾಟ್ ಕೊಹ್ಲಿ ನಾಯಕತ್ವದ ಬಳಗವು ಇಂಗ್ಲೆಂಡ್ ಪ್ರವಾಸದಲ್ಲಿದೆ.

ಪೃಥ್ವಿ ಶಾ, ಶಿಖರ್, ಹಾರ್ದಿಕ್ ಪಾಂಡ್ಯ ಮತ್ತು ಭುವನೇಶ್ವರ್ ಕುಮಾರ್ ಈ ಪಂದ್ಯದಲ್ಲಿ ಕಣಕ್ಕಿಳಿಯುವುದು ಖಚಿತ. ಇನ್ನುಳಿದಂತೆ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಪದಾರ್ಪಣೆಗಾಗಿ ಕಾದಿರುವ ಪಡಿಕ್ಕಲ್, ಗೌತಮ್, ನಿತೀಶ್ ರಾಣಾ, ಋತುರಾಜ್ ಗಾಯಕವಾಡ್, ಚೇತನ್ ಸಕಾರಿಯಾ ಅವರಲ್ಲಿ ಯಾರಿಗೆ ಕಣಕ್ಕಿಳಿಯುವ ಅವಕಾಶ ದೊರೆಯಲಿದೆ ಎಂಬ ಕುತೂಹಲ ಗರಿಗೆದರಿದೆ.

ಭಾರತ ತಂಡದ ಕೋಚ್ ರಾಹುಲ್ ದ್ರಾವಿಡ್ ಮತ್ತು ನಾಯಕ ಶಿಖರ್ ಧವನ್

**ಮುಖ್ಯಾಂಶಗಳು**

- ಕರ್ನಾಟಕದ ದೇವದತ್ತ ಪಡಿಕ್ಕಲ್, ಕೃಷ್ಣಪ್ಪ ಗೌತಮ್ ತಂಡದಲ್ಲಿದ್ದಾರೆ
- ಪದಾರ್ಪಣೆಗಾಗಿ ಕಾದಿರುವ ಆರು ಮಂದಿ ಆಟಗಾರರು

ಸಂಜು ಸ್ಯಾಮ್ಸನ್ ಮತ್ತು ಇಶಾನ್ ಕಿಶನ್ ಅವರಿಬ್ಬರಲ್ಲಿಯೂ ಪೈಪೋಟಿ ಇದೆ. ಯಜುವೇಂದ್ರ ಚಾಹಲ್, ನವದೀಪ್ ಸೈನಿ ಮತ್ತು ಮನೀಷ್ ಪಾಂಡೆಗೆ ತಮ್ಮ ಲಯಕ್ಕೆ ಮರಳುವ ಸವಾಲು ಇದೆ.

ಆತಿಥೇಯ ಶ್ರೀಲಂಕಾ ತಂಡದ ಕೆಲವು ಆಟಗಾರರು ಇಂಗ್ಲೆಂಡ್ ಪ್ರವಾಸದಿಂದ ಮರಳಿದ ನಂತರ ಕೋವಿಡ್ ಸೋಂಕಿಗೊಳಗಾಗಿದ್ದರು. ಇದೀಗ ದಸುನ್ ಶನಕ ಅವರ ನಾಯಕತ್ವದಲ್ಲಿ ತಂಡವು ಕಣಕ್ಕಿಳಿಯಲಿದೆ. ತವರಿನಲ್ಲಿ ಗೆಲುವಿನ ಸಿಹಿ ಸವಿಯುವತ್ತ ಚಿತ್ತ ನೆಟ್ಟಿದೆ.

### ತಂಡಗಳು

**ಭಾರತ:** ಶಿಖರ್ ಧವನ್ (ನಾಯಕ), ಪೃಥ್ವಿ ಶಾ, ದೇವದತ್ತ ಪಡಿಕ್ಕಲ್, ಋತುರಾಜ್ ಗಾಯಕವಾಡ, ಸೂರ್ಯಕುಮಾರ್ ಯಾದವ್, ಮನೀಷ್ ಪಾಂಡೆ, ನಿತೀಶ್ ರಾಣಾ, ಇಶಾನ್ ಕಿಶನ್ (ವಿಕೆಟ್ ಕೀಪರ್), ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ಹಾರ್ದಿಕ್ ಪಾಂಡ್ಯ, ಕೃಣಾಲ್ ಪಾಂಡ್ಯ, ಕೃಷ್ಣಪ್ಪ ಗೌತಮ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ವರುಣ್ ಚಕ್ರವರ್ತಿ, ರಾಹುಲ್ ಚಾಹರ್,ದೀಪಕ್ ಚಾಹರ್, ಭುವನೇಶ್ವರ್ ಕುಮಾರ್, ಚೇತನ್ ಸಕಾರಿಯಾ, ನವದೀಪ್ ಸೈನಿ.

**ಶ್ರೀಲಂಕಾ:** ದಸುನ್ ಶನಕಾ (ನಾಯಕ), ಧನಂಜಯ ಡಿಸಿಲ್ವಾ (ಉಪನಾಯಕ), ಅವಿಷ್ಕಾ ಫರ್ನಾಂಡೊ, ಭಾನುಕಾ ರಾಜಪಕ್ಷ, ಪಥುಮ್ ನಿಸಾಂಕಾ, ಚರಿತ್ ಅಸಲೆಂಕಾ, ವಾಣಿಂದು ಹಸರಂಗ, ಅಶೆನ್ ಭಂಡಾರ, ಮಿನೊದ ಭಾನುಕಾ, ಲಾಹಿರು ಉದಾರ, ರಮೇಶ್ ಮೆಂಡಿಸ್, ಚಮಿಕಾ ಕರುಣಾರತ್ನೆ, ದುಷ್ಮಂತ ಚಾಮೀರಾ, ಲಕ್ಷನ್ ಸಂದಕನ್, ಇಶಾನ್ ಜಯರತ್ನೆ, ಪ್ರವೀಣ, ಅಸಿತಾ ಫರ್ನಾಂಡೊ, ಕಸುನ್ ರಜಿತಾ, ಲಾಹಿರು ಕುಮಾರ್, ಇಸುರು ಉಡಾನ.

ಭಾರತ ಹಾಕಿ ತಂಡದ ಆಟಗಾರರು ಬೆಂಗಳೂರಿನ ಸಾಯ್ ಆವರಣದಲ್ಲಿ ಹೊರಟು ನಿಂತ ಸಂದರ್ಭ –ಪಿಟಿಐ ಚಿತ್ರ

## ಪ್ರತಿಭಟನೆ ತಡೆದ ಪೊಲೀಸರು

ಟೋಕಿಯೊ (ಎಪಿ):ಒಲಿಂಪಿಕ್ಸ್ ಆಯೋಜಕರ ವಿರುದ್ಧ ಪ್ರತಿಭಟನೆ ನಡೆಸಿದ 20ಕ್ಕೂ ಹೆಚ್ಚು ಮಂದಿಯನ್ನು ಪೊಲೀಸರು ತಡೆದ ಘಟನೆ ಶನಿವಾರ ನಡೆದಿದೆ. ಆಯೋಜನಾ ಸಮಿತಿಯ ಕಾರ್ಯಕಾರಿ ಮಂಡಳಿ ಸಭೆ ನಡೆಯುತ್ತಿದ್ದ ಸ್ಥಳದತ್ತ ಮೆರವಣಿಗೆಯಲ್ಲಿ ಹೊರಟ ಪ್ರತಿಭಟನಾಕಾರರು ಥಾಮಸ್ ಬಾಕ್ ಅವರಿಗೆ ಮನವಿ ಸಲ್ಲಿಸುವುದಾಗಿ ತಿಳಿಸಿದರು. ಆದರೆ ಸುಮಾರು 20 ಮೀಟರ್ ದೂರದಲ್ಲಿ ಅವರನ್ನು ತಡೆದು ವಾಪಸ್ ಕಳುಹಿಸಲಾಯಿತು.

# ಭಾರತದ ಮೊದಲ ತಂಡ ಟೋಕಿಯೊಗೆ

ನವದೆಹಲಿ: ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತದ ಕ್ರೀಡಾ ಪಟುಗಳ ಮೊದಲ ತಂಡ ಶನಿವಾರ ರಾತ್ರಿ ಟೋಕಿಯೊಗೆ ಪ್ರಯಾಣ ಬೆಳೆಸಿತು. ಎಂಟು ಕ್ರೀಡೆಗಳಲ್ಲಿ ಸ್ಪರ್ಧಿಸುವ ಅಥ್ಲೀಟ್‌ಗಳನ್ನು ಇಲ್ಲಿನ ಇಂದಿರಾಗಾಂಧಿ ವಿಮಾನನಿಲ್ದಾಣದಲ್ಲಿ ಕ್ರೀಡಾ ಸಚಿವರು, ಭಾರತ ಕ್ರೀಡಾ ಪ್ರಾಧಿಕಾರದ ಮಹಾನಿರ್ದೇಶಕರು ಮತ್ತು ಭಾರತ ಒಲಿಂಪಿಕ್ ಸಮಿತಿಯ ಪದಾಧಿಕಾರಿಗಳು ಶುಭ ಹಾರೈಸಿ ಕಳುಹಿಸಿಕೊಟ್ಟರು.

54 ಕ್ರೀಡಾಪಟುಗಳನ್ನು ಒಳಗೊಂಡ 88 ಮಂದಿಯಲ್ಲಿ ಆರ್ಚರಿ, ಬ್ಯಾಡ್ಮಿಂಟನ್, ಟೇಬಲ್ ಟೆನಿಸ್, ಹಾಕಿ, ಜೂಡೊ, ಜಿಮ್ನಾಸ್ಟಿಕ್ಸ್, ಈಜು ಮತ್ತು ವೇಟ್‌ಲಿಫ್ಟಿಂಗ್ ಪಟುಗಳು ಇದ್ದರು. ಪುರುಷ ಮತ್ತು ಮಹಿಳೆಯರ ಹಾಕಿ ತಂಡಗಳ ಆಟಗಾರರು ವಿಮಾನನಿಲ್ದಾಣ ಪ್ರವೇಶಿಸುತ್ತಿದ್ದಂತೆ ಸಿಬ್ಬಂದಿ ಚಪ್ಪಾಳೆ ತಟ್ಟಿ ಗೌರವಿಸಿದರು. ಭಾರತದ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಅವರು ಶುಕ್ರವಾರ ಅಮೆರಿಕದಿಂದ ನೇರವಾಗಿ ಟೋಕಿಯೊಗೆ ತೆರಳಿದ್ದರು. ಬಾಕ್ಸರ್‌ಗಳು ಇಟಲಿಯಿಂದ ಪ್ರಯಾಣಿಸಲಿದ್ದಾರೆ.

ಸೇಲಿಂಗ್ ಪಟುಗಳಾದ ನೇತ್ರಾ ಕುಮನನ್, ವಿಷ್ಣು ಸರವಣನ್, ಗಣಪತಿ ಚೆಂಗಪ್ಪ ಮತ್ತು ವರುಣ್ ಠಕ್ಕರ್ ಟೋಕಿಯೊ ತಲುಪಿದ ಭಾರತದ ಮೊದಲ ಕ್ರೀಡಾಪಟುಗಳಾಗಿದ್ದಾರೆ. ಯುರೋಪ್‌ನಲ್ಲಿ ಅಭ್ಯಾಸ ಮಾಡುತ್ತಿದ್ದ ಅವರು ಗುರುವಾರವೇ ಅಲ್ಲಿ ಇಳಿದಿದ್ದರು.

## ಜಪಾನ್ ವಿರೋಧಿ ಫಲಕ ತೆರವು

ಕ್ರೀಡಾಗ್ರಾಮದ ತಮ್ಮ ವಾಸ ಸ್ಥಳದ ಆವರಣದಲ್ಲಿ ಹಾಕಿದ್ದ ಜಪಾನ್ ವಿರೋಧಿ ಫಲಕವನ್ನು ದಕ್ಷಿಣ ಕೊರಿಯಾ ತೆರವುಗೊಳಿಸಿದೆ. ಫಲಕ ಹಾಕುವ ಮೂಲಕ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿದೆ ಎಂದು ಕೊರಿಯಾ ತಂಡದ ಮೇಲೆ ಆರೋಪ ಎದ್ದಿತ್ತು.

ಕ್ರೀಡಾಪಟುಗಳ ಕೊಠಡಿಯ ಎದುರು ನೇತು ಹಾಕಲಾಗಿದ್ದ ಫಲಕಗಳಲ್ಲಿ '50 ಮಿಲಿಯ ಕೊರಿಯನ್ ಜನರಿಂದ ನನಗೆ ಬೆಂಬಲ ಇದೆ' ಎಂದು ಕೊರಿಯಾ ಭಾಷೆಯಲ್ಲಿ ಬರೆಯಲಾಗಿತ್ತು.

1592ರಿಂದ 1598ರ ಅವಧಿಯಲ್ಲಿ ಕೊರಿಯಾ ಮೇಲೆ ಜಪಾನ್ ಆಕ್ರಮಣ ನಡೆಸಿದ ಸಂದರ್ಭದಲ್ಲಿ ನಡೆದ ನೌಕಾಪಡೆಗಳ ನಡುವಿನ ಯುದ್ಧದ ಸಂದರ್ಭವನ್ನು ಈ ಘೋಷಣೆ ಮೂಲಕ ನೆನಪಿಸಲಾಗಿತ್ತು. ದ್ವೀಪವೊಂದಕ್ಕೆ ಸಂಬಂಧಿಸಿ ಉಭಯ ರಾಷ್ಟ್ರಗಳ ನಡುವೆ ಈಗಲೂ ವಿವಾದ ಇದೆ.

### ಸೋಂಕಿತ ವ್ಯಕ್ತಿ ವಿದೇಶಿ; ಕ್ರೀಡಾಪಟು ಅಲ್ಲ: ಸ್ಪಷ್ಟನೆ

# ಕ್ರೀಡಾಗ್ರಾಮದಲ್ಲಿ ಕೋವಿಡ್!

ಟೋಕಿಯೊ (ಎಪಿ/ಎಎಫ್‌ಪಿ): ಒಲಿಂಪಿಕ್ಸ್ ಆರಂಭವಾಗಲು ಕೇವಲ ಒಂದು ವಾರ ಬಾಕಿ ಇರುವಾಗ ಕ್ರೀಡಾಗ್ರಾಮದಲ್ಲಿ ಕೋವಿಡ್ ಪ್ರಕರಣ ಪತ್ತೆಯಾಗಿದೆ. ಕ್ರೀಡಾಪಟು ಅಲ್ಲದ ವ್ಯಕ್ತಿಯೊಬ್ಬರಲ್ಲಿ ಸೋಂಕು ಇರುವುದು ದೃಢಪಟ್ಟಿದೆ. ಅವರು ಜಪಾನ್ ಪ್ರಜೆ ಅಲ್ಲ ಎಂದು ಆಯೋಜಕರು ಶನಿವಾರ ತಿಳಿಸಿದ್ದಾರೆ.

ಆಯೋಜನಾ ಸಮಿತಿಯ ಅಧ್ಯಕ್ಷ ಸೀಕೊ ಹಾಶಿಮೊಟೊ ಸೇರಿದಂತೆ ಒಲಿಂಪಿಕ್ಸ್‌ಗೆ ಸಂಬಂಧಿಸಿದ ಎಲ್ಲ ಅಧಿಕಾರಿಗಳು ಸೋಂಕು ಪತ್ತೆಯಾದ ವಿಷಯವನ್ನು ದೃಢಪಡಿಸಿದ್ದಾರೆ. ಆದರೆ ಎಲ್ಲ ಮಾಹಿತಿಗಳನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದಿದ್ದಾರೆ.

ಸೋಂಕು ಇರುವ ವ್ಯಕ್ತಿಯನ್ನು ಕ್ರೀಡಾಕೂಟಕ್ಕೆ ಸಂಬಂಧಪಟ್ಟವರು ಎಂದಷ್ಟೇ ಸದ್ಯ ಗುರುತಿಸಬಹುದಾಗಿದ್ದು ಅವರನ್ನು 14 ದಿನಗಳ ಪ್ರತ್ಯೇಕವಾಸಕ್ಕೆ ಕಳುಹಿಸಲಾಗಿದೆ ಎಂದು ತಿಳಿಸಲಾಗಿದೆ. ಜಪಾನಿಯರಿಂದ ಅಥವಾ ಹೊರಗಿನ ಯಾವುದೇ ವ್ಯಕ್ತಿಯಿಂದ ಕ್ರೀಡಾಗ್ರಾಮಕ್ಕೆ ವೈರಸ್ ಬರಲು ಸಾಧ್ಯವಿಲ್ಲ ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಅಧ್ಯಕ್ಷ ಥಾಮಸ್ ಬಾಕ್ ಅಭಯ ನೀಡಿದ ಕೆಲವೇ ದಿನಗಳಲ್ಲಿ ಈ ಆತಂಕಕಾರಿ ವಿಷಯ ಬಹಿರಂಗಗೊಂಡಿದೆ.

ಟೋಕಿಯೊ ನಗರಕ್ಕೆ ಹೊಂದಿಕೊಂಡಿರುವ ಜಾಗದಲ್ಲಿ ನಿರ್ಮಿಸಿರುವ ಕ್ರೀಡಾಗ್ರಾಮದಲ್ಲಿ ಒಲಿಂಪಿಕ್ಸ್ ಸಂದರ್ಭದಲ್ಲಿ 11 ಸಾವಿರಕ್ಕೂ ಅಧಿಕ ಕ್ರೀಡಾಪಟುಗಳು ವಾಸಿಸಲಿದ್ದಾರೆ. ಜುಲೈ ಒಂದರಿಂದ ಶನಿವಾರದ ವರೆಗೆ ಒಲಿಂಪಿಕ್ಸ್‌ಗೆ ಸಂಬಂಧಿಸಿದ 45 ಮಂದಿಯಲ್ಲಿ ಕೋವಿಡ್ ಕಾಣಿಸಿಕೊಂಡಿದೆ. ಆದರೆ ಕ್ರೀಡಾಗ್ರಾಮದಲ್ಲಿ ಇದು ಮೊದಲ ಪ್ರಕರಣವಾಗಿದ್ದು ಅವರು ಗುತ್ತಿಗೆ ಪಡೆದ ವ್ಯಕ್ತಿಯೊಬ್ಬರ ಕಡೆಯವರು ಎಂದು ಆಯೋಜಕರು ಹೇಳಿದ್ದಾರೆ. ಸೋಂಕು ಪತ್ತೆಯಾದವರಲ್ಲಿ ಒಬ್ಬರು ಅಥ್ಲೀಟ್ ಮತ್ತು ಮೂವರು ಮಾಧ್ಯಮದವರು. 45 ಮಂದಿಯಲ್ಲಿ 12 ಮಂದಿ ವಿದೇಶಿಯರು ಎಂದು ವಿವರಿಸಿದ್ದಾರೆ.

**ಒಲಿಂಪಿಕ್ಸ್‌ಗೆ ಬೆಂಬಲ ನೀಡಿ: ಬಾಕ್:** ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದು ಜನರು ಆತಂಕದಲ್ಲಿದ್ದರೂ ಒಲಿಂಪಿಕ್ಸ್‌ಗೆ ಬೆಂಬಲ ನೀಡುವಂತೆ ಥಾಮಸ್ ಬಾಕ್ ಜಪಾನ್ ಪ್ರಜೆಗಳನ್ನು ಕೋರಿದ್ದಾರೆ.

ನಾಲ್ಕು ದಿನಗಳ ಹಿಂದೆ ಇಲ್ಲಿಗೆ ಬಂದ ನಂತರ ಸ್ಥಳೀಯರಿಂದ ಪ್ರತಿಭಟನೆಯ ಬಿಸಿ ಎದುರಿಸುತ್ತಿರುವ ಬಾಕ್ 'ಪರಿಸ್ಥಿತಿಯ ಗಾಂಭೀರ್ಯವನ್ನು ಅರ್ಥ ಮಾಡಿಕೊಂಡಿದ್ದೇನೆ. ಆದರೂ ಕ್ರೀಡಾಪಟುಗಳನ್ನು ಆತ್ಮೀಯವಾಗಿ ಸ್ವಾಗತಿಸಿ ಒಲಿಂಪಿಕ್ಸ್ ಸುಸೂತ್ರವಾಗಿ ನಡೆಯುವಂತೆ ಮಾಡಲು ಮುಂದಾಗಬೇಕು' ಎಂದು ಮನವಿ ಮಾಡಿಕೊಂಡಿದ್ದಾರೆ.

## ಜನಾಂಗೀಯ ನಿಂದನೆ: ಜರ್ಮನಿ ತಂಡ ಆರೋಪ

ಟೋಕಿಯೊ (ಎಎಫ್‌ಪಿ): ಆಟಗಾರನನ್ನು ಜನಾಂಗೀಯ ನಿಂದನೆಗೆ ಒಳಪಡಿಸಲಾಗಿದೆ ಎಂದು ಆರೋಪಿಸಿ ಒಲಿಂಪಿಕ್ಸ್‌ಗೆ ಸಂಬಂಧಿಸಿದ ಸೌಹಾರ್ದ ಫುಟ್‌ಬಾಲ್ ಪಂದ್ಯದಿಂದ ಜರ್ಮನಿ ಹೊರನಡೆಯಿತು. ಹೊಂಡುರಾಸ್ ಎದುರಿನ ಪಂದ್ಯದ 85ನೇ ನಿಮಿಷದಲ್ಲಿ ಈ ಘಟನೆ ನಡೆದಿದೆ.

ಜರ್ಮನಿ ಇದೇ 22ರಂದು ಮೊದಲ ಪಂದ್ಯದಲ್ಲಿ ಬ್ರೆಜಿಲ್ ಎದುರು ಸೆಣಸಲಿದೆ. ಇದಕ್ಕೆ ಪೂರ್ವಭಾವಿಯಾಗಿ ವಕಾಯಾಮದಲ್ಲಿ ಶನಿವಾರ ಪಂದ್ಯ ನಡೆದಿತ್ತು.

'ನಿಗದಿತ ಅವಧಿಗಿಂತ ಮೊದಲೇ ಪಂದ್ಯ ಮುಕ್ತಾಯಗೊಳಿಸಬೇಕಾಯಿತು. ಈ ಸಂದರ್ಭದಲ್ಲಿ ಉಭಯ ತಂಡಗಳು ತಲಾ ಒಂದೊಂದು ಗೋಲು ಗಳಿಸಿದ್ದವು. ತಂಡ ಸದಸ್ಯನೊಬ್ಬ ನಿಂದನೆಗೆ ಒಳಗಾದ ನಂತರವೂ ಆಟ ಮುಂದುವರಿಸುವುದು ಸರಿಯಲ್ಲ' ಎಂದು ಜರ್ಮನಿಯ ಮುಖ್ಯ ಕೋಚ್ ಸ್ಟೀಫನ್ ಕುಂಟ್ಜ್ ಹೇಳಿದ್ದಾರೆ.

'ಅಂಗಣದಲ್ಲಿ ಉಂಟಾದ ಗೊಂದಲವೇ ಸಮಸ್ಯೆಗೆ ಕಾರಣ' ಎಂದಷ್ಟೇ ಹೊಂಡುರಾಸ್ ಫುಟ್‌ಬಾಲ್ ಫೆಡರೇಷನ್ ಟ್ವೀಟ್ ಮಾಡಿದೆ.

# ರಾಹುಲ್ ದ್ರಾವಿಡ್ ಮಾರ್ಗದರ್ಶನ

ಕೊಲಂಬೊ: ಭಾರತ ಎ ಮತ್ತು 19 ವರ್ಷದೊಳಗಿನವರ ತಂಡಗಳನ್ನು ಯಶಸ್ಸಿನ ಹಾದಿಯಲ್ಲಿ ನಡೆಸುವ ಮೂಲಕ ಕ್ರಿಕೆಟ್ ತರಬೇತಿಗೆ ಹೊಸ ಭಾಷ್ಯ ಬರೆದಿರುವ ರಾಹುಲ್ ದ್ರಾವಿಡ್ ಈಗ ಹೊಸ ಸವಾಲಿಗೆ ಸಿದ್ಧರಾಗಿದ್ದಾರೆ.

ಇದೇ ಮೊದಲ ಸಲ ಅವರು ಕೋಚ್ ಆಗಿರುವ ಭಾರತ ಏಕದಿನ ಮತ್ತು ಟಿ20 ತಂಡವು ಕಣಕ್ಕಿಳಿಯುತ್ತಿರುವುದು ವಿಶೇಷ. ಅವರ ಮಾರ್ಗದರ್ಶನದಲ್ಲಿ 19 ವರ್ಷದೊಳಗಿನವರ ವಿಶ್ವಕಪ್ ಜಯಿಸಿದ್ದ ಭಾರತ ತಂಡದ ನಾಯಕ ಪೃಥ್ವಿಶಾ ಮತ್ತು ಇನ್ನುಳಿದ ಯುವ ಆಟಗಾರರು ಈ ತಂಡದಲ್ಲಿದ್ದಾರೆ. ಒಟ್ಟು ಆರು ಮಂದಿ ಯುವ ಆಟಗಾರರು ಶ್ರೀಲಂಕಾ ಎದುರಿನ ಸರಣಿಯಲ್ಲಿ ಆಡಲಿದ್ದಾರೆ.

ನಾಯಕನಾಗಿ ಮೊದಲ ಬಾರಿಗೆ ತಂಡವನ್ನು ಮುನ್ನಡೆಸುತ್ತಿರುವ ಶಿಖರ್ ಧವನ್ ಅವರಿಗೂ ಇದು ವಿಭಿನ್ನ ಅನುಭವ ನೀಡಲಿರುವ ಸರಣಿ.

ಭಾರತ ಕ್ರಿಕೆಟ್‌ನ ಯಶಸ್ವಿ ಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರಾಗಿರುವ, ಭಾರತ ತಂಡದ ಮಾಜಿ ನಾಯಕ ರಾಹುಲ್ ದ್ರಾವಿಡ್ ಅವರಿಂದ ಬಹಳಷ್ಟು ಕಲಿಯುವ ಅವಕಾಶವೂ ಶಿಖರ್‌ಗೆ ಲಭಿಸಿದೆ. ಇದು ಅವರಿಗೆ ತಮ್ಮ ಹಿಂದಿನ ಲಯಕ್ಕೆ ಮರಳಲು ಮತ್ತು ಕೌಶಲವನ್ನು ಉತ್ತಮಪಡಿಸಿಕೊಳ್ಳಲು ಸಹಕಾರಿಯಾಗುವ ನಿರೀಕ್ಷೆ ಇದೆ.

'ರಾಹುಲ್ ದ್ರಾವಿಡ್ ಅವರಿಂದ ಕಲಿಯುವುದು ಬಹಳಷ್ಟಿದೆ. ಮೇರು ಆಟಗಾರ ಮತ್ತು ಉತ್ತಮ ವ್ಯಕ್ತಿತ್ವದ ರಾಹುಲ್ ಯುವ ಆಟಗಾರರಿಗೆ ಯಾವಾಗಲೂ ಪ್ರೇರಣೆಯಾಗುತ್ತಾರೆ' ಎಂದು ಶಿಖರ್ ಈಚೆಗೆ ಹೇಳಿದ್ದರು.

## ಶೂಟಿಂಗ್ ತಂಡಕ್ಕೆ ಕ್ವಾರಂಟೈನ್ ಇಲ್ಲ

ನವದೆಹಲಿ (ಪಿಟಿಐ): ಭಾರತದ ಶೂಟರ್‌ಗಳಿಗೆ ಕ್ವಾರಂಟೈನ್ ಅಗತ್ಯವಿಲ್ಲ ಎಂಬ ಮಾಹಿತಿ ಲಭಿಸಿದ ಹಿನ್ನೆಲೆಯಲ್ಲಿ ಮುಂದಿನ ಸೋಮವಾರ ನೇರವಾಗಿ ಅಭ್ಯಾಸ ಆರಂಭಿಸಲಿದೆ. ಶನಿವಾರ ಮುಂಜಾನೆ ಟೋಕಿಯೊ ತಲುಪಿರುವ ಶೂಟರ್‌ಗಳು ತಮಗೆ ಮೀಸಲಿರಿಸಿದ ಕೊಠಡಿಗಳಲ್ಲಿ ಉಳಿದುಕೊಂಡಿದ್ದಾರೆ.

ಟೋಕಿಯೊದ ವಾಯವ್ಯ ಭಾಗದಲ್ಲಿರುವ ಸೈತಮಾ ಪ್ರದೇಶದಲ್ಲಿರುವ ಅಸಾಕ ಶೂಟಿಂಗ್ ರೇಂಜ್‌ನಲ್ಲಿ ಸ್ಪರ್ಧೆಗಳು ನಡೆಯಲಿವೆ. 1964ರ ಒಲಿಂಪಿಕ್ಸ್ ಸಂದರ್ಭದಲ್ಲೂ ಶೂಟಿಂಗ್ ಇಲ್ಲೇ ನಡೆದಿತ್ತು.

'ಕ್ರೊವೇಷ್ಯಾದಲ್ಲಿ ಅಭ್ಯಾಸ ನಡೆಸುತ್ತಿದ್ದ ಶೂಟರ್‌ಗಳು ನೇರವಾಗಿ ಇಲ್ಲಿಗೆ ಬಂದಿದ್ದಾರೆ. ಹೀಗಾಗಿ ಅವರು ಕ್ವಾರಂಟೈನ್‌ಗೆ ಒಳಗಾಗಬೇಕಾದ ಅಗತ್ಯವಿಲ್ಲ. ಎಲ್ಲ ಶೂಟರ್‌ಗಳು ಕ್ರೀಡಾಗ್ರಾಮದಲ್ಲಿದ್ದಾರೆ' ಎಂದು ಭಾರತ ರೈಫಲ್ ಸಂಸ್ಥೆಯ (ಎನ್‌ಆರ್‌ಎಐ) ಕಾರ್ಯದರ್ಶಿ ರಾಜೀವ್ ಭಾಟಿಯಾ ತಿಳಿಸಿದ್ದಾರೆ.

'ನರಿತಾ ವಿಮಾನ ನಿಲ್ದಾಣದಲ್ಲಿ ಎಲ್ಲ ಪ್ರಕ್ರಿಯೆಗಳೂ ಸುಸೂತ್ರವಾಗಿ ನಡೆದವು. ಅಲ್ಲಿಂದ ಕ್ರೀಡಾಗ್ರಾಮಕ್ಕೆ ತಲುಪಿ ಕೊಠಡಿ ಪ್ರವೇಶಿಸಲು ಎಂಟು ತಾಸುಗಳು ಹಿಡಿಸಿದವು. ಯುರೋಪ್‌ನಿಂದ ಸುದೀರ್ಘ ಪ್ರಯಾಣ ಮಾಡಿ ಶೂಟರ್‌ಗಳು ಬಂದಿದ್ದಾರೆ. ಹೀಗಾಗಿ ಸರಿಯಾದ ವಿಶ್ರಾಂತಿ ಪಡೆದ ನಂತರವಷ್ಟೇ ಅಭ್ಯಾಸ ಆರಂಭಿಸಲಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

## ಅದಿತಿ–ಪಜರಿ ಉತ್ತಮ ಸಾಧನೆ

ಮಿಚಿಗನ್, ಅಮೆರಿಕ (ಪಿಟಿಐ): ಭಾರತದ ಅದಿತಿ ಅಶೋಕ್ ಮತ್ತು ಥಾಯ್ಲೆಂಡ್‌ನ ಪಜರಿ ಅನಣ್ಣರುಕರ್ಣ್ ಅವರು ಚೊಚ್ಚಲ ಎಲ್‌ಪಿಜಿಎ ಟೂರ್ನಲ್ಲಿ ಅಮೋಘ ಸಾಧನೆ ಮಾಡಿದ್ದಾರೆ. ಇಲ್ಲಿನ ಡೆಯುತ್ತಿರುವ ಡೊವ್ ಗ್ರೇಟ್ ಲೇಕ್ಸ್ ಬೇ ಆಹ್ವಾನಿತ ಟೂರ್ನಿಯಲ್ಲಿ ಅವರು ಹಾಲಿ ಚಾಂಪಿಯನ್ ಜೊತೆ ಉತ್ತಮ ಸ್ಥಾನಗಳನ್ನು ಹಂಚಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಅದಿತಿ ಆಶೋಕ್

ಮಿಡ್‌ಲ್ಯಾಂಡ್ ಕೌಂಟಿ ಕ್ಲಬ್‌ನಲ್ಲಿ ಮೂರನೇ ಸುತ್ತು ಕೊನೆಗೊಂಡಾಗ ಸಿಡ್ನಿ ಕ್ಯಾಂಟನ್ ಮತ್ತು ಜಾಸ್ಮಿನ್ ಸುವಣ್ಣಪುರ ಅವರ ಸಮಾನ ಸಾಮರ್ಥ್ಯ ತೋರಲು ಅದಿತಿ ಹಾಗೂ ಪಜರೀ ಅನಣ್ಣರುಕರ್ಣ್ ಯಶಸ್ವಿ